ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಗೋ ಬ್ಯಾಕ್ ಟ್ರಂಪ್
ಭಾರತದ ರೈತರ ಪ್ರತಿಭಟನೆ



ಸಂಪುಟ 14 | ಸಂಚಿಕೆ 9 | ಫೆಬ್ರವರಿ 24–ಮಾರ್ಚ್ 1, 2020 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com





ಸಮಾನ ಗುಣಮಟ್ಟದ ಉಚಿತ ಶಿಕ್ಷಣ
ಎಸ್‌ಎಫ್‌ಐ ರಾಜ್ಯ ಸಮ್ಮೇಳನ ಆಗ್ರಹ



ಕೃಷಿ ಗುತ್ತಿಗೆ ಕಾನೂನು ಬೇಡ
ರಾಜ್ಯದ ರೈತರ ಎಚ್ಚರಿಕೆ

ಜನವಿರೋಧಿ ಕೇಂದ್ರ ಬಜೆಟ್ ವಿರುದ್ಧ ಪ್ರತಿಭಟನೆ



ಸಿಎಎ ವಿರುದ್ಧ ಪ್ರತಿಭಟನೆ
ನಾಗರಿಕರ ಹಕ್ಕು
ಎರಡು ಹೈಕೋರ್ಟುಗಳ ತೀರ್ಪು

ಟ್ರಂಪ್ ಗೋ ಬ್ಯಾಕ್! ಭಾರತದ ಕೃಷಿಯತ್ತ ಕೈಚಾಚಬೇಡಿ!!

ಅಮೆರಿಕ ಅಧ್ಯಕ್ಷ ಟ್ರಂಪ್ ಭೇಟಿಯ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗೆ ಎಐಕೆಎಸ್ ಕರೆ

"ಅಮೆರಿಕನ್ ಉತ್ಪನ್ನಗಳಿಗೆ ಭಾರತದ ಡ್ಯೆರಿ ಮತ್ತು ಪೌಲ್ಟ್ರಿ ಮಾರುಕಟ್ಟೆಯನ್ನು ತೆರೆಯಬಾರದು, ಇದು 15 ಕೋಟಿ ರೈತರು ಮತ್ತು ಕಾರ್ಮಿಕರ ಜೀವನೋಪಾಯದ ಪ್ರಶ್ನೆ"



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ 24, 25 ಫೆಬ್ರವರಿ 2020 ರಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಆಹ್ವಾನಿಸಿ, ಹೈನುಗಾರಿಕೆ ಮತ್ತು ಕುಕ್ಕುಟೋದ್ಯಮ ಮಾರುಕಟ್ಟೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ಪನ್ನಗಳಿಗೆ ತೆರೆದು ಕೊಡುವ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವುದಕ್ಕೆ ಅನುಕೂಲ ಕಲ್ಪಿಸಿಕೊಡಲು ನಿರ್ಧರಿಸಿರುವುದನ್ನು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ವಿರೋಧಿಸಿದೆ.

ಈ ಒಪ್ಪಂದ ಜಾರಿಯಾದರೆ ಭಾರತಕ್ಕೆ ವಾರ್ಷಿಕ ಅಂದಾಜು 42000 ಕೋಟಿ ರೂಪಾಯಿಗಳ ಹೈನು ಉತ್ಪನ್ನಗಳು, ಕೋಳಿ ಉತ್ಪನ್ನಗಳು, ಟರ್ಕಿ ಮತ್ತಿತರ ಕೃಷಿ ಉತ್ಪನ್ನಗಳ ವಸ್ತುಗಳ ಆಮದಿಗೆ ಅವಕಾಶ ನೀಡುವುದಾಗಿ ಭಾರತ ಹೇಳಿದೆ ಎಂದು ತಿಳಿದು ಬಂದಿದೆ. ಸುಮಾರು 10 ಕೋಟಿ ಹೈನುಗಾರಿಕಾ ರೈತರು, ಅದರಲ್ಲೂ ಮಹಿಳೆ ಮತ್ತು ಬಡ ರೈತರು ಸರ್ಕಾರದ ಈ ನಡೆಯಿಂದ ತೊಂದರೆಗೆ ಒಳಗಾಗುತ್ತಾರೆ. ಹೈನುಗಾರಿಕೆ ಮತ್ತು ಕುಕ್ಕಟ ಉದ್ಯಮದಲ್ಲಿ ತೊಡಗಿರುವ ಕಾರ್ಮಿಕರು ಕೂಡ ತಮ್ಮ ಜೀವನೋಪಾಯದಿಂದ ವಂಚಿತರಾಗುತ್ತಾರೆ. ಸೇಬು, ಚೆರ್ರಿ, ಅಕ್ರೋಟು, ಬಾದಾಮಿ ಮುಂತಾದ ಹಣ್ಣುಗಳು ಮತ್ತು ಸೋಯಾಬಿನ್, ಗೋಧಿ, ಜೋಳ ಮೊದಲಾದ ಬೆಳೆಗಳ ಮೇಲಿನ ಆಮದು ಸುಂಕವನ್ನು 100ಶೇ.ದಿಂದ 10ಶೇ,ದವರೆಗೂ ತೀವ್ರವಾಗಿ ಇಳಿಸುವ ನಿರೀಕ್ಷೆಯಿದೆ. ಇದರಿಂದ ನಮ್ಮ ರೈತರ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. RCEP(ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ)ಗೆ ಅದು ಭಾರತದ ರೈತರಿಗೆ ಪ್ರತಿಕೂಲಕರವಾದ್ದರಿಂದ ನಾವು ಸಹಿ ಹಾಕಿಲ್ಲ ಎಂದು ಹೇಳಿಕೊಂಡ, ವಾಸ್ತವವಾಗಿ ಭಾರತದ ರೈತರ ಪ್ರತಿಭಟನೆಗಳ ಒತ್ತಡದಿಂದಾಗಿ ಹಿಂದೆ ಸರಿದ ಬಿಜೆಪಿ ಸರ್ಕಾರ ಈಗ ತನ್ನ ಸಾಮ್ರಾಜ್ಯಶಾಹಿ ಯಜಮಾನರುಗಳನ್ನು ಸಂತುಷ್ಟಗೊಳಿಸಲು ಇನ್ನೂ ಹೆಚ್ಚು ವಿನಾಶಕಾರಿಯಾದ ಒಪ್ಪಂದ ಮಾಡಿಕೊಳ್ಳ ಹೊರಟಿದೆ ಎಂದು ಎಐಕೆಎಸ್ ಬಲವಾಗಿ ಟೀಕಿಸಿದೆ.

ಭಾರತದಲ್ಲಿ ಹೈನುಗಾರಿಕೆಯು ಸುಮಾರು ಹತ್ತು ಕೋಟಿ ರೈತಾಪಿ ಕುಟುಂಬಗಳಿಗೆ ಜೀವನೋಪಾಯವಾಗಿದೆ. ಅನೇಕ ವರ್ಷಗಳಿಂದ, ಸಹಕಾರಿ ಜಾಲದ ಮೂಲಕ ಕಟ್ಟಿ ಬೆಳೆಸಿದ ಹೈನುಗಾರಿಕೆ ಉದ್ಯಮದಲ್ಲಿ ಹಾಲಿನ ಬೆಲೆಯ ಶೇಕಡ 71 ರಷ್ಟು ಹಣ ರೈತಾಪಿ ಕುಟುಂಬಗಳಿಗೆ ವಾಪಸ್ಸಾಗುತ್ತಿತ್ತು. ಆದರೆ ಈಗ ಅಮೆರಿಕದ ಬೇಡಿಕೆಯಂತೆ ಹೈನುಗಾರಿಕೆ ಉತ್ಪನ್ನಗಳ ಆಮದಿನ ಮೇಲಿನ ಶೇಕಡ 64 ರ ತೆರಿಗೆಯನ್ನು ಕಡಿತಗೊಳಿಸಿದರೆ ಭಾರತದ ಹಾಲಿನ ಆಂತರಿಕ ಮಾರುಕಟ್ಟೆ ತೀವ್ರವಾಗಿ ನೆಲ ಕಚ್ಚುತ್ತದೆ. ಹೈನುಗಾರಿಕೆಯಲ್ಲಿ ತೊಡಗಿರುವ ರೈತರ ಹಿತಾಸಕ್ತಿಗಳಿಗ ಮಾರಕವಾಗುತ್ತದೆ.

ಭಾರತದಲ್ಲಿ ಕುಕ್ಕುಟೋದ್ಯಮವು ಸುಮಾರು 4.8 ಕೋಟಿ ಕುಟುಂಬಗಳ ಜೀವನೋಪಾಯವಾಗಿದೆ. ಈ ವಲಯದ ಸಂಘಟಿತ ಮತ್ತು ಅಸಂಘಟಿತ ವಿಭಾಗಗಳ ವಾರ್ಷಿಕ ವಹಿವಾಟು ಸುಮಾರು 80,000 ಕೋಟಿ ರೂಪಾಯಿ. ಈಗ ಅಮೆರಿಕಾದಿಂದ ಕಡಿಮೆ ದರದ ಕುಕ್ಕುಟ ಉತ್ಪನ್ನಗಳು ಭಾರತವನ್ನು ಪ್ರವೇಶಿಸಲು ಅವಕಾಶ ನೀಡುವುದು ಎಂದರೆ ಭಾರತದ ಆಂತರಿಕ ಕುಕ್ಕುಟ ಮಾರುಕಟ್ಟೆಗೆ ಮರಣ ಶಾಸನ ಬರೆದಂತೆಯೇ ಸರಿ. ಈ ಮೂಲಕ ಕೋಟ್ಯಂತರ ಸಣ್ಣ ಮತ್ತು ಮಧ್ಯಮ ರೈತರು ಹಾಗೂ ಈ ವಲಯದಲ್ಲಿನ ವ್ಯಾಪಾರಿಗಳು, ಕಾರ್ಮಿಕರು ತೊಂದರೆಗೆ ಒಳಗಾಗುತ್ತಾರೆ. ಅಮೆರಿಕದ ತೀವ್ರ ಒತ್ತಡಕ್ಕೆ ಒಳಗಾಗಿ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವುದರಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಶೇಕಡ 85 ರಷ್ಟು ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಹಾಗೂ ಕೃಷಿ ಕೂಲಿಕಾರರು ವಿನಾಶಕಾರಿ ದುಷ್ಪರಿಣಾಮಗಳಿಗೆ ಒಳಗಾಗುತ್ತಾರೆ. ತಮ್ಮಲ್ಲಿ ಚುನಾವಣಾ ವರ್ಷದಲ್ಲಿ ಇರುವ ಟ್ರಂಪ್ ಅವರು ಅಮೆರಿಕದಲ್ಲಿ ಕೃಷಿಯನ್ನು ಉತ್ತೇಜಿಸುವ ಸಲುವಾಗಿ ಕೃಷಿ ಉತ್ಪನ್ನಗಳ ರಫ್ತಿಗೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಅವರ ಈ ಯೋಜನೆಗೆ ಭಾರತದ ಮಾರುಕಟ್ಟೆಯನ್ನು ತೆರೆಯುವ ಮೂಲಕ ನರೇಂದ್ರ ಮೋದಿಯವರು ಅವರನ್ನು ಬಚಾವ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದು ಅಮೆರಿಕದ ಅತಿ ಹೆಚ್ಚಿನ ಪ್ರಮಾಣದ ಸಬ್ಸಿಡಿ ದರದೊಂದಿಗೆ ಸ್ಪರ್ಧಿಸಲಾಗದ ಭಾರತದ ರೈತರಿಗೆ ಗಂಡಾಂತರ ತರುತ್ತದೆ ಎಂದಿರುವ ಎಐಕೆಎಸ್, ನವ-ಉದಾರವಾದಿ ಧೋರಣೆಗಳು ಜಗತ್ತಿನಾದ್ಯಂತ ಉಂಟು ಮಾಡಿರುವ ಉತ್ಪಾತಗಳಿಂದಾಗಿ ಭಾರತದ ಅರ್ಥವ್ಯವಸ್ಥೆ ಮತ್ತು ಜಾಗತಿಕ ಅರ್ಥವ್ಯವಸ್ಥೆ ಕೂಡ ತೀವ್ರ ಹಿಂಜರಿತಕ್ಕೆ ಒಳಗಾಗುತ್ತಿರುವ ಸಂದರ್ಭದಲ್ಲಿ ಈ ಒಪ್ಪಂದ ಬರುತ್ತಿದೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಇಂತಹ ಸಂದರ್ಭದಲ್ಲಿ ದೇಶದ ರೈತರು ಮತ್ತು ಕಾರ್ಮಿಕ ವರ್ಗ ವ್ಯಾಪಕ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಎಐಕೆಎಸ್ ಕರೆ ನೀಡಿದೆ. ಬಿಜೆಪಿ ಸರ್ಕಾರ ಭಾರತದ ರೈತರು ಮತ್ತು ಕಾರ್ಮಿಕರ ಹಿತಾಸಕ್ತಿಗಳಿಗ ಕೇಂಡುಂಟು ಮಾಡುವ ಒಪ್ಪಂದಗಳನ್ನು ಅಮೆರಿಕಾದೊಂದಿಗೆ ಮಾಡದೆ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ, ದೇಶಾದ್ಯಂತ ಕರಪತ್ರ ಹಂಚಿಕೆ, ಭೂತ ದಹನ, ಮತಪ್ರದರ್ಶನಗಳು ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸಲು ಕರೆ ನೀಡಿರುವ ಅಖಿಲ ಭಾರತ ಕಿಸಾನ್ ಸಭಾ, ಈ ನಿಟ್ಟಿನಲ್ಲಿ 24 ಫೆಬ್ರವರಿ 2020 ರಂದು, ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರವರು ಭಾರತಕ್ಕೆ ಆಗಮಿಸುವ ದಿನದಂದು ಪ್ರತಿಭಟನೆಗೆ ಜನರನ್ನು ಅಣಿನೆರೆಸಲು ಎಲ್ಲಾ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಕೈ ಜೋಡಿಸುವುದಾಗಿ ಹೇಳಿದೆ.

ಸುಪ್ರಿಂ ಕೋರ್ಟ್ ತೀರ್ಪಿಗೆ ಎಐಡಿಡಬ್ಲ್ಯುಎ ಸ್ವಾಗತ-"ಕಮಾಂಡ್ ಹುದ್ದೆಗಳಿಗೆ ಮಹಿಳಾ ಅಧಿಕಾರಿಗಳ ನೇಮಕವನ್ನು ತಕ್ಷಣವೇ ಜ್ಯಾರಿಗೆ ತರಬೇಕು"

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಶಾರ್ಟ್ ಸರ್ವಿಸ್ ಕಮಿಶನ್‌ನಲ್ಲಿರುವ ಎಲ್ಲ ಮಹಿಳಾ ಅಧಿಕಾರಿಗಳನ್ನು ಪರ್ಮನೆಂಟ್ ಕಮಿಶನ್‌ಗೆ ಮತ್ತು ಸೇನೆಯ ಎಲ್ಲ ಶಾಖೆಗಳಲ್ಲಿ ಕಮಾಂಡ್(ನಾಯಕತ್ವದ) ಹುದ್ದೆಗಳಿಗೆ ಅರ್ಹಗೊಳಿಸಿರುವ ಸುಪ್ರಿಂ ಕೋರ್ಟ್ ತೀರ್ಪನ್ನು ಸ್ವಾಗತಿಸುತ್ತ ದಿಲ್ಲಿ ಹೈಕೋರ್ಟ್ ಕಾಯಂ ನಿಯೋಜನೆಯ ಅವಕಾಶವನ್ನು ನೀಡಿದರೂ ಹತ್ತು ವರ್ಷಗಳ ಕಾಲ ಇದರ ಜಾರಿಗೆ ಹೋರಾಟ ಮಾಡಬೇಕಾಗಿ ಬಂತು, ಏಕೆಂದರೆ ಸರಕಾರ ಇದನ್ನು ಕೃತಿಗಿಳಿಸಲು ನಿರಾಕರಿಸಿತು ಎಂದು ನೆನಪಿಸಿದೆ.

"ಮಹಿಳೆಯರು ದೈಹಿಕವಾಗಿ ಕಮಾಂಡ್ ಹುದ್ದೆಗಳಿಗೆ ಅನರ್ಹರಾಗಿದ್ದಾರೆ ಮತ್ತು ಇದರಿಂದ ಯುದ್ಧರಂಗದಲ್ಲಿನ ಮಟ್ಟ ಇಳಿಯುವಂತಾಗುತ್ತದೆ ಎಂಬ ಕೇಂದ್ರ ಸರಕಾರದ ಪಿತೃಪ್ರಾಧಾನ್ಯದ ಕಲ್ಪನೆಯನ್ನು ಸುಪ್ರಿಂ ಕೋರ್ಟ್ ತಳ್ಳಿ ಹಾಕಿರುವುದು ಸರಿಯಾಗಿಯೇ ಇದೆ. ಮಹಿಳೆಯರು 'ಹೆರಿಗೆ, ತಾಯ್ತನ ಮತ್ತು ಮಕ್ಕಳ ಪಾಲನೆ'ಯ ಸವಾಲುಗಳಿಂದ ನಿರ್ಬಂಧಿತರಾಗಿದ್ದಾರೆ ಎಂಬ ಕಲ್ಪನೆಯನ್ನೂ ಅದು ತಳ್ಳಿ ಹಾಕಿದೆ. ಇದು, ಮಹಿಳೆಯರ ಪಾತ್ರ 'ಗೃಹಪಾಲಕ'ರಾಗಿ ಮನೆಯೊಳಕ್ಕೇ ಸೀಮಿತವಾಗಿದೆ, ಪುರುಷರು ಪೋಷಕರಾಗಿದ್ದಾರೆ, ಇವರಿಗಿಂತ ಬಲಿಷ್ಟರು ಎಂಬ ರೂಢಿಗತ ಕಲ್ಪನೆ ಎಂದು ಅದು ಹೇಳಿದೆ. ಇಂತಹ ಸಾಮಾಜಿಕವಾಗಿ ವಿಧಿಸಿರುವ ಲಿಂಗ ಪಾತ್ರಗಳು ಸೇನೆಯಲ್ಲಿ ಮಹಿಳೆಯರ ಸಮಾನ ಉದ್ಯೋಗದ ಹಕ್ಕಿನ ವಿರುದ್ಧ ತಾರತಮ್ಯ ಮಾಡುತ್ತವೆ ಮತ್ತು ಸಮಾನತೆಯ ಸಂವಿಧಾನಿಕ ಹಕ್ಕು ಅವರನ್ನು ರಕ್ಷಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ" ಎಂದಿರುವ ಎಐಡಿಡಬ್ಲ್ಯುಎ, ಈಗಲೂ ಸೇನೆಯಲ್ಲಿ 30ಶೇ.ದಷ್ಟು ಮಹಿಳೆಯರು ಕದನ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಾನು ಕಮಾಂಡ್ ಹುದ್ದೆಗಳಲ್ಲಿ ಮಹಿಳೆಯರ ನೇಮಕವನ್ನು ಬೆಂಬಲಿಸುವಾಗಲೆಲ್ಲಾ ಹೇಳುತ್ತ ಬಂದಿರುವುದನ್ನು ಮತ್ತೊಮ್ಮೆ ನೆನಪಿಸಿದೆ.

ಎಐಡಿಡಬ್ಲ್ಯುಎ ಸೇನೆಯಲ್ಲಿ ತಮ್ಮ ಪುರುಷ ಸಹಯೋಗಿಗಳೊಡನೆ ಭುಜಕ್ಕೆ ಭುಜಕೊಟ್ಟು ಹೋರಾಡುತ್ತಿರುವ ಮಹಿಳೆಯರ ಬೆಂಬಲಕ್ಕೆ ನಿಲ್ಲುತ್ತದೆ ಎನ್ನುತ್ತ ಅದು ಕೇಂದ್ರ ಸರಕಾರ ತಕ್ಷಣವೇ ಸುಪ್ರಿಂ ಕೋರ್ಟ್ ತೀರ್ಪನ್ನು ಅದು ವಿಧಿಸಿರುವ ಮೂರು ತಿಂಗಳ ಅವಧಿಯ ಒಳಗೆ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದೆ.

ಜನ-ವಿರೋಧಿ ಬಜೆಟ್ ವಿರುದ್ಧ ದೇಶಾದ್ಯಂತ ಎಡಪಕ್ಷಗಳ ನೇತೃತ್ವದಲ್ಲಿ ಪ್ರತಿಭಟನೆ

ಜನ-ವಿರೋಧಿ ಧೋರಣೆಗಳಿಂದ ತುಂಬಿರುವ ಕೇಂದ್ರ ಸರಕಾರದ ಬಜೆಟ್ ವಿರುದ್ಧ ಪ್ರತಿಭಟಿಸಬೇಕು ಎಂದು ಎಡಪಕ್ಷಗಳು ಕೊಟ್ಟಿರುವ ಕರೆಗೆ ಸ್ಪಂದಿಸಿ ದೇಶಾದ್ಯಂತ ಫೆಬ್ರುವರಿ 18ರಂದು ಪ್ರತಿಭಟನೆಗಳು ನಡೆದಿರುವ ವರದಿಗಳು ಬರುತ್ತಿವೆ. ರಾಜಧಾನಿ ದಿಲ್ಲಿಯಲ್ಲಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)-ಲಿಬರೇಷನ್, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ ಮತ್ತು ಸಿಜಿಪಿಐನ ಕೇಂದ್ರೀಯ ಮುಖಂಡರು ಮಂಡಿ ಹೌಸ್‌ನಿಂದ ಜಂತರ್ ಮಂತರ್ ವರೆಗೆ ನಡೆದ ಜಂಟಿ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದರು ಮತ್ತು ಜಂತರ್‌ಮಂತರ್‌ನಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್ ಮಾತಾಡುತ್ತ, ಕಾರ್ಪೊರೇಟ್‌ಗಳಿಗೆ ತೆರಿಗೆ ರಿಯಾಯ್ತಿಗಳನ್ನು ನೀಡುತ್ತಲೇ, ಆರ್ಥಿಕ ಮಂದಗತಿಯ ಹೊರೆಯನ್ನು ಕಾರ್ಮಿಕ ವರ್ಗದ ಮೇಲೆ ದಾಟಿಸಲಾಗುತ್ತಿದೆ, ಸರಕಾರ ಅರ್ಥವ್ಯವಸ್ಥೆಯನ್ನು ಸರಿದಾರಿಗೆ ತರಲು ಕ್ರಮಗಳನ್ನು ಕೈಗೊಳ್ಳುವ ಬದಲು ವಿಭಜನಕಾರೀ ಕೋಮು ಅಜೆಂಡಾದಿಂದ ಜನಗಳನ್ನು ಒಡೆಯಲು ಪ್ರಯತ್ನಿಸುತ್ತಿದೆ ಎಂದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ, ಸಿಪಿಐ(ಎಂಎಲ್)-ಲಿಬರೇಷನ್ ದಿಲ್ಲಿ ರಾಜ್ಯ ಕಾರ್ಯದರ್ಶಿ ರವಿ ರಾಯ್, ಸಿಜಿಪಿಐನ ಸಂತೋಷ್ ಮತ್ತಿತರರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.



ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಜನಸಂಖ್ಯೆ ಗನುಸಾರ ಮೀಸಲಾತಿಯನ್ನು ಹೆಚ್ಚಿಸಲು ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳಿಗೆ ಆದ್ಯತೆ ದೊರೆಯುವಂತೆ ಅಗತ್ಯ ಕ್ರಮವಹಿಸಲು ಕೋರಿ ಮನವಿ



ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ನ್ಯಾಯಮೂರ್ತಿ ಗಳಲ್ಲಿ ಮನವಿ ಮಾಡುವುದೇನೆಂದರೇ,

ಕರ್ನಾಟಕ ಸರಕಾರ ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ ಜನ ಸಮುದಾಯಗಳ ಬಹುದಿನಗಳ ಹಕ್ಕೊತ್ತಾಯಕ್ಕೆ ಮಣಿದು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ. ಎರಡರಷ್ಟು ಮತ್ತು ಪರಿಶಿಷ್ಠ ಪಂಗಡಗಳ ಮೀಸಲಾತಿಯನ್ನು ಶೇ ನಾಲ್ಕರಷ್ಟು ಹೆಚ್ಚಿಸುವ ಅಗತ್ಯ ಕೋರಿ ನ್ಯಾಯ ಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಆಯೋಗ ರಚಿಸಿರುವುದನ್ನು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಹೃದಯ ಪೂರ್ವಕವಾಗಿ ಸ್ವಾಗತಿಸುತ್ತದೆ.

ಇದು ಬೆಳೆದಿರುವ ಜನಸಂಖ್ಯೆಗನುಗುಣವಾಗಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ ಮೀಸಲು ಸೌಲಭ್ಯವನ್ನು ಹೆಚ್ಚಿಸಬೇಕೆಂಬ ಮತ್ತು ಅದರಲ್ಲಿ ಕೂಲಿಕಾರಳು, ಸಣ್ಣ ರೈತಳು, ದಲಿತಳು, ಮಹಿಳೆಯೂ ಅದರಲ್ಲೂ ದೇವದಾಸಿ ಮಹಿಳೆಯಾಗಿ ಹಲವು ರೀತಿಯಲ್ಲಿ ಬಹುಮುಖಿ ಶೋಷಣೆಗೊಳಗಾದ ದೇವದಾಸಿ ಮಹಿಳೆಯರ ಮತ್ತು ಅವರ ಮಕ್ಕಳಿಗೆ ಆದ್ಯತೆ ನೀಡ ಬೇಕೆನ್ನುವ ಹಕ್ಕೊತ್ತಾಯವು ಹಲವು ದಿನಗಳ ನಮ್ಮ ಹಂಬಲವಾಗಿತ್ತು. ನಮ್ಮ ಚಳುವಳಿಯ ಪ್ರಮುಖ ಆಶಯವಾಗಿತ್ತು

ಅದಾಗಲೇ, ಭಾರತದ ಸಂವಿಧಾನವು, ಸಾಮಾಜಿಕ ತಾರತಮ್ಯದ ಹಿನ್ನೆಲೆಯಲ್ಲಿ ಸಾಮಾಜಿಕ ಸಮತೋಲನದ ಸರಿಪಡಿಕೆಗೆ ಮತ್ತು ಈ ಶೋಷಿತ ಜನ ಸಮುದಾಯಕ್ಕಾದ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸಲು ಇವರಿಗೆ ಆಧ್ಯತೆ ನೀಡುವುದು ಅಗತ್ಯ ಉಪಾಧಿಯೆಂದು ಪರಿಗಣಿಸಿತ್ತು.

ಇದರಂತೆ, ಸಾವಿರಾರು ವರ್ಷಗಳಿಂದ ಈ ನೆಲದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರುಗಳಿಗಾಗಿ, ಈ ಜನ ಸಮುದಾಯಗಳ ಮಹಿಳೆಯರು ಸೇರಿದಂತೆ, ಎಲ್ಲ ಮಹಿಳೆಯರು ಮತ್ತು ಶೂದ್ರರು ಬಿಟ್ಟಿ ದುಡಿಮೆಯ ಸೇವೆಯನ್ನು ಯಾವುದೇ ನಾಗರೀಕ ಹಕ್ಕುಗಳಿಲ್ಲದೇ, ಸೌಲಭ್ಯಗಳಿಲ್ಲದೇ, ಮಾಡುತ್ತಾ ಬಂದಿದ್ದಾರೆ ಮತ್ತು ಅವರು ಕೊಟ್ಟ ಅರೆಹೊಟ್ಟೆಯ ತಂಗಳನ್ನು ತಿಂದು, ಸತ್ತ ದನಗಳ ಮಾಂಸದ ಮೂಲಕ ಜೀವ ಹಿಡಿದು ಬದುಕುತ್ತಾ ಬಂದಿದ್ದಾರೆ. ಇದು ಈ ದೇಶದ ನಮ್ಮ ಜನಗಳ ತೀವ್ರ ಶೋಷಣೆಯ ಇತಿಹಾಸವಾಗಿದೆ.

ನಾವು, ಮುಖ್ಯವಾಗಿ, ಈ ಎರಡೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ಸೇರಿದ ದೇವದಾಸಿ ಮಹಿಳೆಯರು ಅವರ, ದೌರ್ಜನ್ಯಕ್ಕೆ ತುತ್ತಾಗಿ ಬಿಟ್ಟಿ ದುಡಿಮೆಯ ಸೇವೆ ಒದಗಿಸಿರುವೆವು. ಮಾತ್ರವಲ್ಲಾ, ಅಲ್ಲಿಂದ ಇಲ್ಲಿಯವರೆಗೂ ಅವರ ದೈಹಿಕ ದೌರ್ಜನ್ಯವನ್ನು ಈ ದೌರ್ಜನ್ಯದ ದೇವದಾಸಿ ಪದ್ಧತಿಯ ಮೂಲಕ ಅನುಭವಿಸುತ್ತಾ ಬಂದಿದ್ದೇವೆ. ದೇವರಾಗಿ ಬಂದು ಬಲವಂತದ ಸಂಸಾರ ನಡೆಸಿದ ನಮ್ಮ ಮಕ್ಕಳ ತಂದೆಯರು, ನಮ್ಮ ಕಣ್ಣೆದುರಿಗೆ ಶ್ರೀಮಂತ ಜೀವನವನ್ನು ನಡೆಸುತ್ತಿದ್ದರೂ, ಅವರ ದೌರ್ಜನ್ಯಕ್ಕೊಳಗಾದ ನಮಗಾಗಲೀ ಹಾಗೂ ನಮ್ಮ ಮಕ್ಕಳಿ (ಅವರ ಮಕ್ಕಳು ಹೌದು) ಗಾಗಲಿ ನೆರವು ನೀಡದೇ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಬಿಡಲಾಗಿದೆ. ತಂದೆ ಎದುರಿಗಿದ್ದರೂ ತಂದೆಯ ಹೆಸರನ್ನು ಸಾರ್ವಜನಿಕವಾಗಿ ಹೇಳಲಾಗದೇ, ನಮ್ಮ ಮಕ್ಕಳು ಅಪಮಾನದ ಬದುಕನ್ನು ಜೀವನದುದ್ದಕ್ಕೂ ಪ್ರತಿ ಕ್ಷಣವೂ ಎದುರಿಸುತ್ತಿದ್ದಾರೆ. ಅದಕ್ಕಾಗಿ ಮಕ್ಕಳಿಂದ ನಮ್ಮದಲ್ಲದ ತಪ್ಪಿಗೆ ಪ್ರತಿ ನಿತ್ಯ ನಿಂದನೆಗೊಳಗಾಗುತ್ತಿದ್ದೇವೆ.

ನಮ್ಮ ದೇಶ ಸ್ವಾತಂತ್ರ್ಯ ನಂತರದ 73 ವರ್ಷಗಳನ್ನ ಪೂರೈಸುತ್ತಿರುವ ಸಂದರ್ಭದಲ್ಲಿಯೂ, ನಮ್ಮ ದೇಶದ ಹಲವು ರಾಜ್ಯಗಳಲ್ಲಿ ಮುಖ್ಯವಾಗಿ, ನಮ್ಮರಾಜ್ಯದಲ್ಲಿ ಈಗಲೂ ಈ ದೌರ್ಜನ್ಯದ ದೇವದಾಸಿ ಪದ್ಧತಿಯನ್ನು ಅಲ್ಲಲ್ಲಿ ಮುನ್ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಈಗಲೂ ಒಂದು ಲಕ್ಷದಷ್ಟು ಕುಟುಂಬಗಳು ಈ ದೌರ್ಜನ್ಯಕ್ಕೀಡಾಗಿ ಸಂಕಷ್ಠದ ಜೀವನ ಸಾಗಿಸುತ್ತಿವೆ.

ಗಂಭೀರವಾದ ಮತ್ತು ಪರಿಣಾಮಕಾರಿಯಾದ ಪುನರ್ವಸತಿ ಕೈಗೊಳ್ಳದೇ, ನಮ್ಮೊಡನೆ ದೇವರ ಹೆಸರಿನಲ್ಲಿ ಬಲವಂತದ ಮತ್ತು ಹೊಣೆಗಾರಿಕೆ ಇಲ್ಲದ ಸಂಸಾರ ನಡೆಸುವವರಿಗೆ, ಯಾವುದೇ ಹೊಣೆಗಾರಿಕೆಯನ್ನು ನೀಡದೇ ತಪ್ಪಿಸಿಕೊಳ್ಳಲು ಬಿಟ್ಟು ಸಾಮಾಜಿಕ ದೌರ್ಜನ್ಯವನ್ನು ಉಪೇಕ್ಷಿಸಿ, ಈ ದೌರ್ಜನ್ಯದ ದೇವದಾಸಿ ಪದ್ದತಿಗೆ ನಮ್ಮನ್ನು ನಮ್ಮತಂದೆ– ತಾಯಿಯರನ್ನು ಹೊಣೆಗಾರರನ್ನಾಗಿಸಿ 1982 ರಲ್ಲಿ ಕಾನೂನಿನ ಮೂಲಕ ಈ ದೌರ್ಜನ್ಯವನ್ನು ನಿಷೇಧಿಸಿದ್ದರೂ, ಕಾನೂನಿನಲ್ಲಿರುವ ದೌರ್ಬಲ್ಯ ಮತ್ತು ಪುನರ್ವಸತಿ ಇಲ್ಲದ ಪರಾವಲಂಬಿತನವೇ ಆಧಾರವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಹಾಗೂ ಕೆಲ ಹಿಂದುಳಿದ ಜಾತಿಗಳ ಜನಸಮುದಾಯಗಳ ದೌರ್ಬಲ್ಯವನ್ನು ಅಲ್ಲಲ್ಲಿ ಬಳಸಿಕೊಂಡು, ಈಗಲೂ ಪಾಳೆಯಗಾರಿ ಶ್ರೀಮಂತ ಸಮುದಾಯಗಳು ಇದನ್ನು ನಮ್ಮ ಮೇಲೆ ಬಲವಂತವಾಗಿ ಕದ್ದು ಮುಚ್ಚಿ ಹೇರುತ್ತಲೇ ಇವೆ.

ಈಗಲೂ ಈ ಕ್ರೂರ ಶೋಷಣೆಯ ಜಾತಿ ತಾರತಮ್ಯ, ಅಸ್ಪೃಶ್ಯಾಚರಣೆಯ ದೌರ್ಜನ್ಯಕ್ಕೆ, ಪರಿಶಿಷ್ಠ ಜಾತಿಯ ನಮ್ಮ ಗಂಡು ಮಕ್ಕಳು ಮಸಣಗಳಲ್ಲಿ ಬಹುತೇಕ ಬಿಟ್ಟಿಯಾಗಿ ಸಾರ್ವ ಜನಿಕ ಆರೋಗ್ಯ ಸಂರಕ್ಷಣೆಯ ದುಡಿಮೆಯಲ್ಲಿ ತೊಡಗಿದ್ದಾರೆ. ಮಾತ್ರವಲ್ಲಾ, ಮಲ ಹೊರುವ, ಮಲದ ಗುಂಡಿಗಳನ್ನು ಮತ್ತು ಒಳ ಚರಂಡಿಗಳ ಮಲದ ಗಟಾರದೊಳಗೆ ಮುಳುಗಿ ಶುಚಿಗೊಳಿಸಿ ಅಸುನೀಗುವ ಪದ್ದತಿಯಲ್ಲೇ ಬದುಕುತ್ತಿದ್ದೇವೆ.

ಈಗ ಇನ್ನೆಷ್ಟು ದಿನ ಇವರಿಗೆ ಮೀಸಲಾತಿ ಎಂದು ಕೇಳುವ ಸಂದರ್ಭದಲ್ಲಿ ನಾವಿರುವುದರಿಂದ ಇದು ನಮ್ಮ ಸ್ಥಿತಿ ಎಂಬುದನ್ನು ವಿನಮ್ರತೆಯಿಂದ ತಮ್ಮಲ್ಲಿ ನಿವೇಧಿಸಿಕೊಳ್ಳುತ್ತೇವೆ.

ಈ ಎಲ್ಲದಕ್ಕೂ ಮೀಸಲಾತಿ ಒಂದು ಸಣ್ಣ ಪರಿಹಾರದ ಮಿಣುಕು ದೀಪವಾಗಿ ನಮಗೆ ಭರವಸೆಯ ಬೆಳಕು ಮೂಡಿಸುತ್ತಿತ್ತು. ಕಳೆದ ಹಲವು ದಶಕಗಳಿಂದ ನಮ್ಮನ್ನು ಆಳುವ ಮೇಲ್ಜಾತಿಗಳ ಮೇಲ್ವರ್ಗಗಳು ಈ ಮೀಸಲಾತಿಯ ಸೌಲಬ್ಯವು ಸಿಗದಂತಹ ಪರಿಸ್ಥಿತಿಯನ್ನು ನಿರ್ಮಿಸುವ ಕುತಂತ್ರ ನಡೆಸುತ್ತಾ ಬಂದಿವೆ. ಇದರ ಭಾಗವಾಗಿ, ಈ ಅವಧಿಯಲ್ಲಿ ಹಲವು ಹಿಂದುಳಿದ ಜಾತಿ ಸಮುದಾಯಗಳು ನಮ್ಮ ಗುಂಪಿನಲ್ಲಿ ಸೇರಲು ಅರ್ಹವೆಂದು ಪರಿಗಣಿಸಿ ಸೇರ್ಪಡೆ ಮಾಡಲಾಗಿದೆ. ಅದು ಸರಿಯೇ ಇರಬಹುದೆಂದು ಒಪ್ಪಿಕೊಂಡರೂ, ಹೆಚ್ಚಾದ ಈ ಜನ ಸಂಖ್ಯೆಗನುಗುಣವಾಗಿ ಮೀಸಲು ಸೌಲಭ್ಯದ ಪ್ರಮಾಣವನ್ನು ಹೆಚ್ಚಿಸುವ ಕೆಲಸವನ್ನಾದರೂ ಮಾಡಬೇಕಾಗಿತ್ತು. ಆದರೇ ಆ ಕ್ರಮವನ್ನು ಸಲ್ಲದ ನೆಪಗಳನ್ನು ಮುಂದೆ ಮಾಡುವ ಮೂಲಕ ದುರುದ್ದೇಶ ಪೂರ್ವಕವಾಗಿಯೇ ಕೈಬಿಡಲಾಗಿದೆ. ಇದರಿಂದ ಇರುವು ಸೌಲಭ್ಯವನ್ನೇ ಹೆಚ್ಚುವರಿ ಜನಸಂಖ್ಯೆಯ ಜೊತೆ ಹಂಚಿಕೊಳ್ಳುವ ಒತ್ತಡಕ್ಕೊಳಗಾಗಿ ಆ ಮೂಲಕ ಇರುವ ಅವಕಾಶ/ ಅನುಕೂಲದಿಂದಲೂ ವಂಚನೆಗೊಳಗಾಗಬೇಕಾದ ಪರಿಸ್ಥಿತಿ ಉಂಟಾಗಿದೆ.

ಈ ಕಾರಣದಿಂದಲೇ ನಾವು ಮೀಸಲು ಸೌಲಭ್ಯವು ಬೆಳೆಯುತ್ತಿರುವ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ ಜನಸಂಖ್ಯೆಗನುಗುಣವಾಗಿ ಹೆಚ್ಚಳಗೊಳ್ಳುವಂತಹ ರೀತಿಯಲ್ಲಿ, ಹಿಗ್ಗುವ ಔದಾರ್ಯ ಹೊಂದಿರುವಂತೆ ಕ್ರಮ ವಹಿಸಲು ಒತ್ತಾಯಿಸುತ್ತಾ ಬಂದಿದ್ದೇವೆ. ಅದಾಗದಿದ್ದಲ್ಲಿ ನಮಗೆ ಮೀಸಲು ಸೌಲಬ್ಯ ಕುಗ್ಗುತ್ತಾ ಹೋಗುವುದು ಮತ್ತೊಂದು ಅರ್ಥದಲ್ಲಿ ಶತ ಶತಮಾನಗಳ ಕಾಲ ನಮ್ಮನ್ನು ವಂಚಿಸಿ ಎಲ್ಲವನ್ನು ತಮ್ಮದಾಗಿಸಿಕೊಂಡು, ಬಿಟ್ಟಿ ಸೇವೆ ಮಾಡಿಸಿಕೊಂಡ ಶೋಷಕ ವ್ಯವಸ್ಥೆಗೆ ಮತ್ತಷ್ಠು ಹೆಚ್ಚಿನ ಮೀಸಲು ಸೌಲಭ್ಯವನ್ನು (ಸಾಮಾನ್ಯ ಕೆಟಗಿರಿಗೆ) ಒದಗಿಸಿದಂತಾಗುತ್ತದೆ.

ಆದ್ದರಿಂದ, ಕರ್ನಾಟಕ ಸರಕಾರದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀಸಲು ಸೌಲಭ್ಯ ಹೆಚ್ಚಿಸ ಬೇಕೆಂಬ ಅಭಿಪ್ರಾಯ ಸಮರ್ಥನೀಯವಾಗಿದೆ. ಆದರೇ, ಅದು ಬೆಳೆಯುತ್ತಿರುವ ಜನಸಂಖ್ಯೆಯನ್ನು ಗಮನಿಸದೇ ಪರಿಶಿಷ್ಠ ಜಾತಿಗೆ ಕೇವಲ ಶೇ 2 ಎಂದಿರುವುದು ಅತಾರ್ಕಿಕವಾಗಿದೆ. ಈ ಜನಸಂಖ್ಯೆಯು ಈ ಅವಧಿಯಲ್ಲಿ ಅದು ಶೇ 19 ಕ್ಕಿಂತಲೂ ಹೆಚ್ಚಳಗೊಂಡಿರುವಾಗ ಅದಕ್ಕೆ ನ್ಯಾಯ ಒದಗಿಸಲು ಈಗಿರುವ ಮೀಸಲು ಸೌಲಭ್ಯಕ್ಕೆ ಶೇ 4 ರಷ್ಠಾದರೂ ಹೆಚ್ಚಿಸುವುದಗತ್ಯವಿದೆ. ಅದೇ ರೀತಿ, ಪರಿಶಿಷ್ಠ ಪಂಗಡದ ಜನಸಂಖ್ಯೆಯು ಶೇ 7 ಕ್ಕಿಂತಲೂ ಹೆಚ್ಚಳಗೊಂಡಿರುವಾಗ ಅದಕ್ಕನುಗುಣವಾಗಿ ಪರಿಶಿಷ್ಟ ಪಂಗಡದ ಮೀಸಲು ಸೌಲಭ್ಯ ಹೆಚ್ಚಿಸುವುದು ಸಮಂಜಸವಾಗಿದೆ.

ಇದು ಸ್ವಲ್ಪವಾದರೂ ಮತ್ತು ನಿಧಾನವಾಗಿಯಾದರೂ ನಮ್ಮನ್ನು ಪರಾವಲಂಬಿತನದಿಂದ ಪಾರು ಮಾಡಬಲ್ಲ ಅಂಶವಾಗಿದೆಯೆಂದು ನಾವು ಪರಿಗಣಿಸುತ್ತೇವೆ. ಆದ್ದರಿಂದ ಸನ್ಮಾನ್ಯ ನ್ಯಾಯಮೂರ್ತಿಗಳ ಆಯೋಗ ಶತ ಶತಮಾನಗಳಿಂದಲೂ ಸಾಮಾಜಿಕ ದೌರ್ಜನ್ಯಕ್ಕೊಳಗಾದ ಮತ್ತು ಸಮರ್ಥ ಅರ್ಹತೆಯನ್ನು ಹೊಂದಿದ ನಮಗೆ ನ್ಯಾಯಯುತವಾಗಿ ಸಿಗಬೇಕಾದ ಈ ಸೌಲಭ್ಯ ಸಿಗುವಂತೆ ಸರಕಾರಕ್ಕೆ ಅಗತ್ಯ ಶಿಫಾರಸು ಮಾಡ ಬೇಕೆಂದು ವಿನಂತಿಸುತ್ತೇವೆ.

ಅದೇ ರೀತಿ, ಈ ಮೀಸಲು ಸೌಲಭ್ಯ ಪರಿಣಾಮಕಾರಿಯಾಗ ಬೇಕಾದರೇ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ಪ್ರತಿವರ್ಷದ ಬಜೆಟ್ ನಲ್ಲಿ ಜನಸಂಖ್ಯೆಗನುಗುಣವಾಗಿ ಅನುದಾನ ನಿಗದಿಸಿ ನೀಡಬೇಕಾಗಿದೆ. ಆದ್ದರಿಂದ ಮಾನ್ಯರು, ಈ ಕುರಿತಂತೆ ಕೂಡಾ ಶಿಫಾರಸು ಮಾಡಲು ವಿನಂತಿಸುವೆವು.

ಕರ್ನಾಟಕ ರಾಜ್ಯ ಸರಕಾರ ಅದಾಗಲೇ ಈ ರೀತಿಯ ಕ್ರಮಕ್ಕೆ ಮುಂದಾಗಿರುವುದು ಸ್ವಾಗಾತಾರ್ಹವಾಗಿದೆ. ಆದರೇ ಈ ಕುರಿತ ಕಾಯ್ದೆಯಲ್ಲಿ ಆ ಕಾಯ್ದೆಯ ನಿಜ ಉದ್ದೇಶವನ್ನೇ ದುರ್ಬಲಗೊಳಿಸುವಂತಹ, ಅನುದಾನದ ಸೋರಿಕೆಗೆ ಅವಕಾಶ ಮಾಡುವ ಸೋರುಗುಂಡಿಗಳನ್ನು ಮುಚ್ಚ ಬೇಕಾಗಿದೆ. ಜಾತಿ ತಾರತಮ್ಯ ಮುನ್ನಡೆಸುವ ಮತ್ತು ಸೌಲಭ್ಯಗಳನ್ನು ವಂಚಿಸುವ ದುರುದ್ದೇಶದಿಂದಲೇ ಅವುಗಳನ್ನು ಹಾಗೇ ಬಿಡಲಾಗಿದೆ. ಇದನ್ನು ಸರಿಪಡಿಸುವುದು ಅಗತ್ಯವಿದೆ. ಕೇಂದ್ರ ಸರಕಾರವೂ ಇದನ್ನು ಜಾರಿಗೊಳಿಸಿದಲ್ಲಿ ದೇಶದ ಪರಿಶಿಷ್ಟರಿಗೆ ಅಗಾಧವಾದ ಮತ್ತು ನಿಜವಾದ ನೆರವು ದೊಡ್ಡ ಪ್ರಮಾಣದಲ್ಲಿ ಸಿಗಲಿದೆ.

ಅದೇ ರೀತಿ, ಜಾಗತೀಕರಣ ಉದಾರೀಕರಣ ಮತ್ತು ಖಾಸಗೀಕರಣದ ಈ ದಿನ ಮಾನಗಳಲ್ಲಿ, ಸರಕಾರಗಳು ಸಾರ್ವ ಜನಿಕ ಹೂಡಿಕೆಯನ್ನು ಶೈಕ್ಷಣಿಕ ರಂಗದಲ್ಲಿ ಮತ್ತು ಉದ್ಯೋಗ ನೀಡಿಕೆಯ ವಲಯದಲ್ಲಿ ಕಡಿತಗೊಳಿಸುತ್ತಾ ಅದನ್ನು ಕಳಚಿ ಹಾಕಲು ಮುಂದಾಗುತ್ತಿರುವುದರಿಂದಲೂ ಮೀಸಲು ಸೌಲಭ್ಯವು ನಮ್ಮ ಸಮುದಾಯಗಳಿಗೆ ನಿಷ್ಪ್ರಯೋಜಕವಾಗಿದೆ. ಸರಕಾರದಲ್ಲಿ ಖಾಲಿ ಇರುವ ಲಕ್ಷಾಂತರ ಹುದ್ದೆಗಳನ್ನು ಖಾಲಿ ಬಿಡಲಾಗಿದೆ ಮತ್ತು ಅವುಗಳನ್ನು ರದ್ದು ಮಾಡಲಾಗುತ್ತಿದೆ. ಅವುಗಳ ಅಂದರೆ, ಕಾಯಂ ಉದ್ಯೋಗದ ಜಾಗದಲ್ಲಿ ಮೀಸಲಾತಿಗೆ ಅವಕಾಶವಿರದ ಮತ್ತು ಕನಿಷ್ಟ ಜೀವನಾಂಶವೂ ಖಾತರಿ ಇರದ ಗೌರವಧನದ ಹಾಗೂ ಅತಿಥಿ ಹೆಸರಲ್ಲಿ ಮತ್ತು ಹೊರಗುತ್ತಿಗೆ, ಗುತ್ತಿಗೆಯಾಧಾರದಲ್ಲಿ ಉದ್ಯೋಗದ ಅಭದ್ರತೆಯಡಿ ನೇಮಿಸಿಕೊಳ್ಳಲಾಗುತ್ತಿದೆ. ಹೀಗಾಗಿ ಸಾರ್ವ ಜನಿಕ ಉದ್ಯೋಗವೆಂಬುದು ಮರೀಚಿಕೆಯಾಗುತ್ತಿದೆ.

ಇದರಿಂದ ನಮ್ಮ ಮಕ್ಕಳು ಉದ್ಯೋಗಗಳಿಂದ ವಂಚಿತರಾಗಿ ನಿರುದ್ಯೋಗದ ಶೋಷಣೆಗೊಳಗಾಗಿದ್ದಾರೆ. ಕನಿಷ್ಠ ನಿರುದ್ಯೋಗ ಭತ್ಯೆ ನೀಡದೇ ಸರಕಾರಗಳು ಹೊಣೆಗೇಡಿತನವನ್ನು ತೋರಿವೆ.

ಇದೆಲ್ಲವೂ ದುರ್ಬಲರ ಮತ್ತು ಸಾಮಾಜಿಕ ಶೋಷಣೆಗೆ ತುತ್ತಾದ ಜನ ಸಮುದಾಯಗಳಿಗೆ ನೆರವಾಗುವ ಸಂವಿಧಾನದ ಆಶಯಗಳಿಗೆ ವಿರುದ್ದವಾದ ಪರಿಸ್ಥಿತಿಯಾಗಿದೆ. ಹೀಗಾಗಿ ಸಂವಿಧಾನದ ನಿಜ ಆಶಯವನ್ನು ಜಾರಿಗೆ ತರಲು ಖಾಸಗೀವಲಯದಲ್ಲೂ ಉದ್ಯೋಗ ಮತ್ತು ಶೈಕ್ಷಣಿಕ ರಂಗದಲ್ಲೂ ಉಚಿತ ಹಾಗೂ ಇತರೆ ನೆರವಿನ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಲು ಕ್ರಮವಹಿಸ ಬೇಕಾಗಿದೆ. ದೇವದಾಸಿ ಮಹಿಳೆಯರ ಮಕ್ಕಳಿಗೆ ಉನ್ನತ ಹಂತದವರೆಗೆ ಉಚಿತ ಮತ್ತು ಇತರೇ ಅಗತ್ಯ ನೆರವಿನ ಶಿಕ್ಷಣ ಒದಗಿಸುವುದು ದೌರ್ಜನ್ಯದ ದೇವದಾಸಿ ಪದಗದತಿ ಕೊನೆಗಾಣಿಸಲು ಅಗತ್ಯವಾಗಿದೆ.

ಅದೇ ರೀತಿ, ಸಂವಿಧಾನದ ಮತ್ತೊಂದು ಆಶಯವಾದ ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ಹೆಜ್ಜೆಯಾಗಿ ಮೀಸಲು ಸೌಲಭ್ಯದಡಿ ಜನ ಸಂಖ್ಯೆಗನುಗುಣವಾದ ಒಳ ಮೀಸಲು ನೀತಿಯನ್ನು ಜಾರಿಗೊಳಿಸುವಾಗಲೇ ಅಳಿವಿನಂಚಿನ ಜನ ಸಮುದಾಯಗಳ ರಕ್ಷಣೆಗೆ ವಿಶೇಷ ಸಂರಕ್ಷಣೆಯ ಕ್ರಮಗಳಿಗೂ ಮುಂದಾಗಬೇಕಾಗಿದೆ.ಮಾತ್ರವಲ್ಲಾ, ದೌರ್ಜನ್ಯದ ದೇವದಾಸಿ ಪದ್ದತಿಯನ್ನು ತೊಲಗಿಸಲು ವಿವಿದ ಜನ ಸಮುದಾಯಗಳಿಗೆ ದೊರಯುವ ಒಳ ಮೀಸಲಾತಿಯಲ್ಲೂ ದೇವದಾಸಿ ಮಹಿಳೆಯರಿಗೂ ಮತ್ತು ಅವರ ಮಕ್ಕಳಿಗೆ ಆದ್ಯತೆ ದೊರೆಯುವಂತೆ ಕ್ರಮ ವಹಿಸುವ ಅಗತ್ಯವಿದೆ.

ಅಲ್ಲದಿದ್ದಲ್ಲಿ ಜಾತಿ ತಾರತಮ್ಯವನ್ನು ಮುನ್ನಡೆಸಿ ಅದರ ಲಾಭ ಪಡೆಯುವ ಶಕ್ತಿಗಳಿಗೆ ಮತ್ತೆ ಒಡೆದಾಳಲು ಅವಕಾಶವನ್ನು ನೀಡಲಿದೆ. ಇದನ್ನು ರಾಜ್ಯದಲ್ಲಿ ನಾವೀಗ ನೋಡುತ್ತಿದ್ದೇವೆ. ಇದು ಸಂವಿಧಾನದ ಆಶಯವನ್ನು ದುರ್ಬಲಗೊಳಿಸಲಿದೆ.

ಇದೆಲ್ಲವೂ ಇಂದಿನ ಅಗತ್ಯವೆಂದು ನಾವು ಭಾವಿಸಿದ್ದೇವೆ. ಈ ಅಂಶಗಳನ್ನು ತಮ್ಮ ಶಿಫಾರಸಿನಲ್ಲಿ ಸೇರುವಂತೆ ಕ್ರಮವಹಿಸಬೇಕು ಎಂದರು.

ಯು. ಬಸವರಾಜ ಗೌರವಾಧ್ಯಕ್ಷರು, ಟಿ.ವಿ. ರೇಣುಕಮ್ಮ ಅಧ್ಯಕ್ಷರು, ಬಿ. ಮಾಳಮ್ಮ ಪ್ರಧಾನ ಕಾರ್ಯದರ್ಶಿಗಳು, ಜಿ. ನಾಗರಾಜ, ಹೆಚ್ ಪದ್ಮ, ಹುಲಿಗೆಮ್ಮ ಗಂಗಾವತಿ, ಕೆ. ನಾಗರತ್ನಮ್ಮ ಉಪಾಧ್ಯಕ್ಷರು, ಎ. ಸ್ವಾಮಿ ಕಾರ್ಯದರ್ಶಿ ಮುಂತಾದವರಿದ್ದರು. ●

ಬಸ್ ದರ ಏರಿಕೆಯನ್ನು ತಡೆ ಹಿಡಿದು ಸೂಕ್ತ ಕ್ರಮಕೈಗೊಳ್ಳಲು ಮನವಿ

ಫಾಸ್ಟ್‌ಟಾಗ್ ಕಡ್ಡಾಯ, ಟೋಲ್ ದರಗಳ ಹೆಚ್ಚಳವನ್ನು ಮುಂದಿಟ್ಟುಕೊಂಡು ದಕ್ಷಿಣ ಕನ್ನಡ, ಉಡುಪಿ ಜಿಲ್ಲಾ ಬಸ್ ಮಾಲಕರ ಸಂಘವು ಪ್ರತೀ ಸ್ಟೇಜ್‌ಗೆ ತಲಾ ಒಂದು ರೂಪಾಯಿ ಟಿಕೇಟ್ ದರ ಏರಿಕೆ ಮಾಡಿರುವುದನ್ನು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ವಿರೋಧಿಸುತ್ತದೆ.

ದ.ಕ. ಜಿಲ್ಲಾ ಬಸ್ ಮಾಲಕರ ಸಂಘವು ಈ ಹಿಂದೆಯೇ ಟೋಲ್ ಕೇಂದ್ರಗಳು ಪ್ರಾರಂಭಗೊಂಡಾಗ ಪ್ರಯಾಣಿಕರಿಗೆ ಪ್ರತೀ ಟಿಕೇಟ್ ಮೇಲೆ ಎರಡು ರೂಪಾಯಿ ದರವನ್ನು ಹೆಚ್ಚಳ ಮಾಡಿತ್ತು. ಈಗ ಮತ್ತೆ ಟೋಲ್‌ನ ಅಲ್ಪದರ ಹೆಚ್ಚಳವನ್ನು ಮುಂದಿಟ್ಟು ಜಿಲ್ಲಾಡಳಿತ, ಆರ್‌ಟಿಒ ಅನುಮತಿ ಪಡೆಯದೆ ಏಕಪಕ್ಷೀಯವಾಗಿ ಹೆಚ್ಚುವರಿ ಮಾಡಿರುವುದು ಸರಿಯಾದ ಕ್ರಮ ಅಲ್ಲ. ಈ ರೀತಿ ಜಿಲ್ಲಾಡಳಿತದ ಅನುಮತಿ ಇಲ್ಲದೆ ಸಾರ್ವಜನಿಕ ಅಹವಾಲು ಸ್ವೀಕರಿಸಿ ಆರ್‌ಟಿಒ ಒಪ್ಪಿಗೆ ಪಡೆಯದೆ ಬಸ್ ಮಾಲಕರ ಸಂಘವು ದರ ಹೆಚ್ಚಿಸಿರುವುದು ನಿಯಮಗಳಿಗೆ ವಿರುದ್ಧವಾಗಿದೆ. ಈಗಾಗಲೇ ಬಸ್ ದರ ಏರಿಕೆಯಿಂದ ಪ್ರಯಾಣಿಕರಿಗೆ ಟಿಕೇಟ್ ದರ ಹೆಚ್ಚುವರಿ ಹೊರೆ ಬೀಳಲಿದೆ.

ಈ ಹಿನ್ನಲೆಯಲ್ಲಿ ಬಸ್ ಮಾಲಕರ ಸಂಘದ ನಿಯಮ ಬಾಹಿರ ಟಿಕೇಟ್ ದರಏರಿಕೆಯನ್ನು ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ ತಡೆ ಹಿಡಿದು ಸೂಕ್ತ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು.

ನಿಯೋಗದಲ್ಲಿ ಡಿವೈಎಫ್ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ನಗರಾಧ್ಯಕ್ಷರಾದ ನವೀನ್ ಕೊಂಚಾಡಿ, ರಿಜ್ವಾನ್ ಬೆಂಗ್ರೆ, ವರಪ್ರಸಾದ್ ಬಜಾಲ್, ತೌಸೀಫ್, ಮುಸ್ತಫಾ, ಬಿಲಾಲ್ ಮುಂತಾದವರು ಉಪಸ್ಥಿತರಿದ್ದರು.



–ಸಂತೋಷ್ ಬಜಾಲ್

ಕೃಷಿ ಟ್ರ್ಯಾಕ್ಟರ್ ಸಾಲ ಪಡೆದ ರೈತರಿಗೆ ಬ್ಯಾಂಕ ಅಧಿಕಾರಿಗಳು ನೋಟೀಸ್ ಜಾರಿ

ಅತಿವೃಷ್ಠಿ ಅನಾವೃಷ್ಟಿಯಾಗಿ ರೈತರ ಎಲ್ಲ ಬೆಳೆಗಳು ಬರದೆ ರೈತರು ಸಂಕಷ್ಟದಲ್ಲಿ

ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೃಷಿಗಾಗಿ ಟ್ರ್ಯಾಕ್ಟರ್ ಸಾಲ ಪಡೆದಿದ್ದು, ಸಾಲ ತುಂಬಬೇಕೆಂದು ಬ್ಯಾಂಕಿನವರ ನೋಟಿಸ್ ಜಾರಿಯನ್ನು ತಡೆ ಹಿಡಿಯಬೇಕು. ಜಿಲ್ಲೆಯ ಅತಿವೃಷ್ಠಿ ಹಾಗೂ ಅನಾವೃಷ್ಟಿಯಿಂದ ರೈತರು ಸಂಕಷ್ಟದಲ್ಲಿದ್ದಾರೆ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಸಂಪೂರ್ಣ ಬಡ್ಡಿ ಮನ್ನಾ ಮಾಡಿ ಅಸಲು (ಗಂಟು) ತುಂಬಿಸಿಕೊಳ್ಳಬೇಕೆಂದು ಒತ್ತಾಯಿಸಿ ಅಖಿಲ ಕರ್ನಾಟಕ ರೈತರ ಹಾಗೂ ಕೃಷಿ ಟ್ರ್ಯಾಕ್ಟರ್ ಮಾಲೀಕರ ಹಿತಾಭಿವೃದ್ಧಿ ಸಂಘ ಜಿಲ್ಲಾ ಘಟಕ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಜಂಟಿಯಾಗಿ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಅವರ ಮೂಲಕ ಪ್ರಧಾನ ಮಂತ್ರಿಗಳು ಕೇಂದ್ರ ಸರ್ಕಾರ ನವ ದೆಹಲಿ. ಹಣಕಾಸು ಸಚಿವರು ಕೇಂದ್ರ ಸರ್ಕಾರ ನವ ದೆಹಲಿ, ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ವಿಧಾನಸೌಧ ಬೆಂಗಳೂರು, ಹಣಕಾಸು ಸಚಿವರು ಕರ್ನಾಟಕ ಸರ್ಕಾರ ವಿಧಾನಸೌಧ ಬೆಂಗಳೂರು, ಮ್ಯಾನೇಜರ್ ಸ್ಟೇಟ್‌ಬ್ಯಾಂಕ್ ಆಫ್ ಇಂಡಿ ಶಾಖಾ ವ್ಯವಸ್ಥಾಪಕರು ಬೆಂಗಳೂರು ಮ್ಯಾನೇಜರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಿದ್ಧೇಶ್ವರ ಗುಡಿ ರಸ್ತೆ ವಿಜಯಪುರ, ಮ್ಯಾನೇಜರ್ ಸಿಂಡಿಕೇಟ್ ಕಛೇರಿ ರಸ್ತೆ ವಿಜಯಪುರ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರುಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ರೈತರ ಹಾಗೂ ಕೃಷಿ ಟ್ರ್ಯಾಕ್ಟರ್ ಸಂಘದ ಅಧ್ಯಕ್ಷರಾದ ಡಾ. ಎಸ್. ಜಿ. ಪಾಟೀಲ ಮಾತನಾಡಿ, ವಿಜಯಪುರ ಜಿಲ್ಲೆ ಸತತ ಬರಗಾಲ ಬಿದ್ದು, ಮುಂಗಾರು ಹಿಂಗಾರು ಮಳೆಯಾಗದೇ ಅತಿವೃಷ್ಠಿ ಅನಾವೃಷ್ಟಿಯಾಗಿ ರೈತರ ಎಲ್ಲ ಬೆಳೆಗಳು ಬರದೆ ರೈತರು ಸಂಕಷ್ಟದಲ್ಲಿದ್ದಾರೆ. ಈ ಗಂಭೀರ ಸ್ಥಿತಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೋಟಿಸ್‌ಗಳನ್ನು ಜಾರಿ ಮಾಡಿದ್ದಾರೆ. ಇದ್ದರಿಂದ ರೈತರು ಕಂಗಾಲಾಗಿ ಭಯಭೀತರಾಗಿ ಸಾಲದ ಬಾಧೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕೃಷಿ ಟ್ರ್ಯಾಕ್ಟರ್ ಸಾಲ ಪಡೆದ ರೈತರಿಗೆ ಬ್ಯಾಂಕ ಅಧಿಕಾರಿಗಳು ನೋಟೀಸ್ ಜಾರಿ ಮಾಡಿದ್ದರಿಂದ ರೈತರು ಸಂಕಷ್ಟದಲ್ಲಿ ಸಿಲುಕಿ ಹಲವಾರು ರೈತರು ನಮ್ಮ ಸಂಘಟನೆಗಳಿಗೆ ದೂರು ಸಲ್ಲಿಸಿದ್ದಾರೆ. ಕರ್ನಾಟಕ ಸರ್ಕಾರ ಕೃಷಿ ಸಾಲ ಮನ್ನಾ ಮಾಡಿದೆ ಈಗಿನ ಸರ್ಕಾರ ಸಹಕಾರಿ ಸಂಘದ ಬ್ಯಾಂಕಗಳಲ್ಲಿನ ರೈತರ ಸಾಲದ ಬಡ್ಡಿ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದೆ. ಆದರೆ ರಾಷ್ಟ್ರೀಕೃತ ಬ್ಯಾಂಕಿನ ಕೃಷಿ ಟ್ರ್ಯಾಕ್ಟರ್ ಸಾಲದ ಬಡ್ಡಿ ಮನ್ನ ಮಾಡಬೇಕೆಂದು ಒತ್ತಾಯಿಸಿದರು.



ಇದೇ ಸಂದರ್ಭದಲ್ಲಿ ಕೆಪಿಆರ್‌ಎಸ್ ರಾಜ್ಯಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ರಾಷ್ಟ್ರೀಕೃತ ಬ್ಯಾಂಕ್ ಕೃಷಿ ಸಾಲದ ಬ್ಯಾಂಕುಗಳು ಕೆಲವು ರಿಯಾಯಿತಿ ಓಟಿಎಸ್ ಮಾಡಿದರೆ ಅದನ್ನು ಸಹಿತ ರೈತರು ತುಂಬಲು ಸಮರ್ಥರಿಲ್ಲ. ಬ್ಯಾಂಕ ಸಾಲ ಹಾಗೂ ಖಾಸಗಿ ಸಾಲದ ಒತ್ತಡದಿಂದ ರೈತರು ಕಂಗಾಲಾಗಿ ಕಷ್ಟಕ್ಕೆ ಸಿಲುಕಿ ಬಹಳಷ್ಟು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮತ್ತು ಮರ್ಯಾದೆಗೆ ಅಂಜಿ ಇನ್ನೂ ಅನೇಕ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಅಂಚಿನಲ್ಲಿದ್ದಾರೆ. ಎಚ್.ಡಿ. ಕುಮಾರಸ್ವಾಮಿ ಅವರು ಮಾಜಿ ಮುಖ್ಯಮಂತ್ರಿ ಋಣಮುಕ್ತ ಕಾಯ್ದೆ ಜಾರಿ ಮಾಡಿದ್ದರು. ಆದ್ದರಿಂದ ಕೃಷಿ ಟ್ರ್ಯಾಕ್ಟರ್ ಸಾಲ ಮನ್ನಾ ಮಾಡಬೇಕು. ಮತ್ತು ಕೃಷಿ ಟ್ರ್ಯಾಕ್ಟರ್ ಸಾಲದ ಅಸಲು ತುಂಬಿಸಿ ಬಡ್ಡಿ ಸಂಪೂರ್ಣ ಮನ್ನಾ ಮಾಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಈ ಅಧೀವೇಶನದಲ್ಲಿ ರೈತರು ಕೃಷಿ ಟ್ರ್ಯಾಕ್ಟರ್ ಸಾಲ ಸಂಪೂರ್ಣ ಮನ್ನಾ ಮಾಡುವುದು ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಕೃಷಿ ಟ್ರ್ಯಾಕ್ಟರರದ ಅಸಲು ತುಂಬಿಸಿಕೊಂಡು ಸಂಪೂರ್ಣ ಬಡ್ಡಿ ಮನ್ನಾ ಮಾಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಂಗಡಪತ್ರದಲ್ಲಿ ಹಣ ಕಾಯ್ದಿರಿಸಿ. ರೈತರ ಸಾಲದಿಂದ ಋಣ ಮುಕ್ತರನ್ನಾಗಿ ಮಾಡಿ ರೈತರ ಆತ್ಮಹತ್ಯೆಯನ್ನು ತಡೆಯಬೇಕೆಂದು ಆಕ್ರೋಶವ್ಯಕ್ತಪಡಿಸಿದರು.

ಭೀಮರಾಯ ಪೂಜಾರಿ ಮಾತನಾಡಿ, ರೈತರು ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಮಣ್ಣು ತಿನ್ನುವ ಪರಿಸ್ಥಿತಿ ಉಂಟಾಗಿದೆ. ಇಂತಹ ಸಮಯದಲ್ಲಿ ರೈತರಿಗೆ ಬ್ಯಾಂಕ್‌ನವರು ತೊಂದರೆ ನೀಡಿದರೆ ಅವರು ತಮ್ಮ ಜೀವನವನ್ನು ತೊರೆದು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ ಕೂಡಲೇ ಇತ್ತ ಕಡೆ ಸರ್ಕಾರಗಳು ಗಮನ ಹರಿಸಿ ರೈತರ ಬದುಕಿಗೆ ಬೆನ್ನೆಲು ಬಾಗಬೇಕೆಂದರು. ಒಂದು ವೇಳೆ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಬೀರಪ್ಪ ಯಲ್ಲಪ್ಪ ಜುಮನಾಳ ಮಾತನಾಡಿ, ಕುರಿಗಳ ಸಾಲ ಮನ್ನಾಮಾಡಬೇಕು. ಕುರಿಗಳಿಗೆ ರೋಗ ಬಂದಿದ್ದು, ಸರ್ಕಾರದಿಂದ ಸರಿಯಾಗಿ ಉಚಿತ ಚಿಕಿತ್ಸೆ ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಈರಣ್ಣ ರಾ. ಕಾಫ್ಸೆ, ಸಂತೋಷ ಮಲಾಬಾದಿ, ಜನವಾದಿ ಮಹಿಳಾ ಸಂಘಟನಾ ರಾಜಮಾ ನದಾಪ್, ಸುಮಿತ್ರ ಘೋಣಸಗಿ, ಸಿದ್ದಪ್ಪ ವಿಠ್ಠಲ ಪೂಜಾರಿ, ಮಹಾದೇವ ಜಾಲಗೇರಿ, ಸಿದ್ಧರಾಮ ಗುಗದಡ್ಡಿ, ಮಲ್ಲಪ್ಪ ಬಗಲಿ, ಮಾಳಪ್ಪ ಜುಮನಾಳ, ಶಿವಾ ರಾಠೋಡ, ಇಂಚಗೇರಿ ಮುಂತಾದವರು ಇದ್ದರು

–ಭೀಮಶಿ ಕಲಾದಗಿ

ಸಿರಾಜ್ ಬಿಸರಳ್ಳಿ ಮೇಲಿನ ಪ್ರಕರಣವನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿ ಒಕ್ಕೂಟದಿಂದ ಪ್ರತಿಭಟನೆ

ಹಾವೇರಿ: ಕೊಪ್ಪಳ ಜಿಲ್ಲೆಯ ಪತ್ರಕರ್ತರೂ ಹಾಗೂ ಕವಿಯಾಗಿರುವ ಸಿರಾಜ್ ಬಿಸರಳ್ಳಿಯವರೂ ಆನೆಗೊಂದು ಉತ್ಸವದಲ್ಲಿ ಕವಿತಾವಾಚನ ಮಾಡಿರುವುದಕ್ಕೆ ದೂರು ದಾಖಲಿಸಿ ಅವರನ್ನು ಪೋಲಿಸ್ ಕಸ್ಟಡಿಗೆ ನೀಡಿರುವುದು ಅಭಿಪ್ರಾಯ ಸ್ವಾತಂತ್ರ್ಯವನ್ನು ಕಸಿದುಕೊಂಡಿರುವುದಲ್ಲದೇ ಸ್ವತಃ ಸರಕಾರವೇ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿಯಲು ಮುಂದಾಗಿರುವುದು ಖೇದಕರ. ಸಂವಿಧಾನದತ್ತ ಅಭಿಪ್ರಾಯ ವ್ಯಕ್ತಪಡಿಸಿದರೇ ಬಂಧಿಸಿರುವ ಆಘಾತಕಾರಿಯಾದ ಘಟನೆಯನ್ನು ಹಾವೇರಿಯ ಪ್ರಗತಿಪರ ಸಂಘಟನೆಗಳ ಒಕ್ಕೂಟ ತೀವ್ರವಾಗಿ ಖಂಡಿಸಿ ಬಂಧಿಸಿದ ಕವಿ ಪತ್ರಕರ್ತರನ್ನು ಬಿಡುಗಡೆ ಮಾಡಬೇಕು. ಅವರ ಮೇಲಿನ ಪ್ರಕರಣವನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಒಕ್ಕೂಟದಿಂದ ಪ್ರತಿಭಟಿಸಿ ತಹಶೀಲ್ದಾರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಡಿವೈಎಫ್ಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ ಈ ಹಿಂದೆ ಕವಿ ಸಿರಾಜ್ ಬಿಸ್ರಳ್ಳಿ ಮತ್ತು ರಾಜ್ ಬಕ್ಷ್ (ಇವರು ಪತ್ರಕರ್ತರೂ ಕೂಡಾ)ರನ್ನು ಕವಿತೆ ವಾಚಿಸಿದ್ದರೆಂದು ಪ್ರಕರಣ ದಾಖಲಿಸಿದ್ದನ್ನು ರಾಜ್ಯದಾದ್ಯಂತ ಖಂಡಿಸಲಾಗಿತ್ತು. ಕಲಬುರಗಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೂಡಾ ಈ ವಿಷಯ ಪ್ರಸ್ತಾಪವಾಗಿ ಖಂಡಿಸಲ್ಪಟ್ಟಿತ್ತು.ಸಿರಾಜ್ ಬಿಸರಳ್ಳಿಯವರ ಕವನಕ್ಕೆ ಬೇಡಿ ತೊಡಿಸ ಹೊರಟ ಸರಕಾರದ ದುರ್ವರ್ತನೆಗೆ ಸವಾಲೆಸೆದು ತೆಲುಗು ತಮಿಳು ಸೇರಿದಂತೆ ಹತ್ತಾರು ಭಾಷೆಗಳಲ್ಲಿ ಅವರ ಕವನ ಭಾಷಾಂತರಗೊಂಡಿತು. ಕವನ ಸಂಕಲನವೂ ಹೊರಬಿದ್ದಿತು.ಈ ಮಧ್ಯೆ ಸರಕಾರವನ್ನು ಅದರ ನೀತಿಯನ್ನು ಟೀಕಿಸುವುದು ದೇಶದ್ರೋಹವಾಗುವುದಿಲ್ಲ ಎಂದು ಮುಂಬೈ ಹೈಕೋರ್ಟ್ ಇನ್ನೊಂದು ಪ್ರಕರಣದಲ್ಲಿ ತೀರ್ಪನ್ನೂ ಕೊಟ್ಟಿತು. ಆದರೆ ಕರ್ನಾಟಕ ಸರ್ಕಾರಕ್ಕೆ ಇವಾವುದೂ ಮುಟ್ಟಲಿಲ್ಲ ತಟ್ಟಲಿಲ್ಲ. ದಾಖಲಾದ ಪ್ರಕರಣದ ವಿಚಾರಣೆಗೆ ನಿನ್ನೆ 18.2.2020 ರಂದು ನ್ಯಾಯಾಲಯಕ್ಕೆ ಹೋದ ಪತ್ರಕರ್ತ, ಕವಿ ಸಿರಾಜ್ ಬಿಸ್ರಳ್ಳಿ ಮತ್ತು ರಾಜ್ ಭಕ್ಷ್ ರನ್ನು ಬಂಧಿಸಲಾಗಿದೆ ಇದು ಖಂಡನೀಯವಾಗಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.



ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆ ರಾಜ್ಯ ಕಾರ್ಯದರ್ಶಿ ಅಕ್ಷತಾ ಕೆ.ಸಿ ಮಾತನಾಡಿ ಅಂದು ಬ್ರಿಟಿಷ್ ಸರಕಾರವನ್ನು ಟೀಕಿಸಿದರೆಂದು ವರಕವಿ ದ.ರಾ.ಬೇಂದ್ರೆಯವರನ್ನು ಅವರು ಬಂಧಿಸಿದ್ದರು. ಆದರೆ ಇಂದು ನಮ್ಮದೇ ಸರಕಾರ ತನ್ನ ಜನವಿರೋಧೀ ನೀತಿಗಳನ್ನು ಮರೆಸಲು ಕವಿಗಳ ಬಾಯಿ ಮುಚ್ಚಿಸಲು ಹೊರಟಿರುವುದು ಸಹಿಸಲು ಅಸಾಧ್ಯ. ಜವಾಬ್ದಾರಿಯುತ ಸಂಸತ್ ಸದಸ್ಯರು ಹಾಡು ಹಗಲೇ ಖುಲ್ಲಂಖುಲ್ಲಾ ಗೋಲಿಮಾರೋ ಎಂದು ಕರೆ ಕೊಟ್ಟರೆ ಅದು ದೇಶದ್ರೋಹವಲ್ಲ. ಆದರೆ ಕವಿಯೊಬ್ಬ ತನ್ನ ಅಭಿವ್ಯಕ್ತಿ ಯನ್ನು ಕನ್ನಡ ಕವನದ ಮೂಲಕ ವ್ಯಕ್ತಪಡಿಸಿದರೆ ಅದು ದೇಶದ್ರೋಹ ವೆಂದು ಪರಿಗಣಿಸಲಾಗಿದೆ. ಇದು ಕನ್ನಡ ಮತ್ತು ಕಾವ್ಯಕ್ಕೆ ಮಾಡುತ್ತಿರುವ ದ್ರೋಹ ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.ರಾಜ್ಯ ಬಿ.ಜೆ.ಪಿ ಸರಕಾರ ತನ್ನ ಈ ಫ್ಯಾಸಿಸ್ಟ್ ಧೋರಣೆಯನ್ನು ಕೈ ಬಿಡಬೇಕು. ಬಂಧಿಸಿದ ಕವಿ ಪತ್ರಕರ್ತರನ್ನು ಬಿಡುಗಡೆ ಮಾಡಬೇಕು. ಅವರ ಮೇಲಿನ ಪ್ರಕರಣವನ್ನು ವಾಪಸ್ ಪಡೆಯಬೇಕು. ಸಂವಿಧಾನ ರಕ್ಷಣೆಯಲ್ಲಿರುವ ಮಹತ್ವದ ಜವಾಬಾರಿಯಲ್ಲಿರುವ ತಾವುಗಳು ಆ ನಿಟ್ಟಿನಲ್ಲಿ ಕೂಡಲೇ ಸರಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಬೇಕೆಂದು ಜಿಲ್ಲಾ ಪ್ರಗತಿಪರ ಒಕ್ಕೂಟದಿಂದ ಆಗ್ರಹಿಸುತ್ತದೆ ಎಂದರು

ಈ ಸಂದರ್ಭದಲ್ಲಿ ಎಐಟಿಯುಸಿ ಜಿಲ್ಲಾಧ್ಯಕ್ಷರಾದ ಹೊನ್ನಪ್ಪ ಮರೆಮ್ಮನವರ. ಸಿಐಟಿಯು ಜಿಲ್ಲಾ ಸಂಚಾಲಕ ವಿನಾಯಕ ಕುರುಬರ. ಡಿಎಸ್ಎಸ್ ಮುಖಂಡ ಹೊನ್ನೇಶ್ವರ ತಗಡಿನಮನಿ. ರೈತ ಮುಖಂಡ ಮಲ್ಲಿಕಾರ್ಜುನ ಬಳ್ಳಾರಿ. ಎಸ್ಎಫ್ಐ ಸಹಕಾರ್ಯದರ್ಶಿ ಬಸವರಾಜ ಭೋವಿ. ವಿದ್ಯಾರ್ಥಿ ಮುಖಂಡರಾದ ಸಿದ್ದಲಿಗೇಶ ಮರೆಮ್ಮನವರ ಸೇರಿದಂತೆ ಅನೇಕರು ಇದ್ದರು.

–ಬಸವರಾಜ ಭೋವಿ



ಹಾಸನ



ಬೆಂಗಳೂರು

ಜನವಿರೋಧಿ ಕೇಂದ್ರ ಬಜೆಟ್ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ

ಭಾರತದ ಅರ್ಥ ವ್ಯವಸ್ಥೆಯನ್ನು ಧ್ವಂಸ ಮಾಡಿ ಜನಗಳ ಮೇಲೆ ಹೆಚ್ಚಿನ ತೆರಿಗೆಯ ಹೊರೆಯನ್ನು ಹೇರುವ ಬಜೆಟ್ ವಿರುದ್ಧ ಬೆಂಗಳೂರಿನ ಸಿಪಿಐ(ಎಂ) ಜಿಲ್ಲಾ ಸಮಿತಿಗಳಿಂದ ಟೌನ್ ಹಾಲ್ ಮುಂಭಾಗ ಪ್ರತಿಭಟನೆಯನ್ನು ನಡೆಸಲಾಯಿತು.

ಬಂಗಾರ ಪೇಟೆ:

ಕೇಂದ್ರದ ಮೋದಿ ಸರಕಾರ ಭಾರತದ ಅರ್ಥ ವ್ಯವಸ್ಥೆಯನ್ನು ಧ್ವಂಸ ಮಾಡಿ ಜನಗಳ ಮೇಲೆ ಹೆಚ್ಚಿನ ತೆರಿಗೆಯ ಹೊರೆಯನ್ನು ಹೇರಿ, ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಒಂದಾದ ಮೇಲೊಂದರಂತೆ ರಿಯಾಯ್ತಿಗಳನ್ನು ಕೊಟ್ಟು ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಕಾಣದಷ್ಟು ಆರ್ಥಿಕ ಅಸಮಾನತೆಯನ್ನು ಹೆಚ್ಚಿಸಿವೆ ಎಂದು ಪಿ. ಶ್ರೀನಿವಾಸ್ ಹೇಳಿದರು.

ಕೇಂದ್ರ ಸರಕಾರದ ಜನವಿರೋಧಿ ಬಜೆಟ್ ವಿರುದ್ದ ಸಿ.ಪಿ.ಎಂ ಪಕ್ಷ ಪಟ್ಟಣದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನಾ ಪ್ರದರ್ಶನ ಮಾಡಿದರು ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ ಭಾರತದ ಜೀವನಾಡಿಯಾದ ಎಲ್.ಐ.ಸಿ ಜನಗಳ ಜೀವನ ಪರ್ಯಂತದ ಉಳಿತಾಯಗಳು ಮತ್ತು ಭದ್ರೆಯ ಭಂಡಾರವಾಗಿದೆ ಇಂತಹ ಎಲ್‌ಐಸಿಯಲ್ಲಿನ ಶೇರು ಹಿಂಪಡಿಯುವಿಕೆ ಸೇರಿದಂತೆ ರಾಷ್ಟ್ರೀಯ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗಿಕರಣ ಮಾಡಲು ಹೊರಟಿರುವ ಕೇಂದ್ರ ಸರಕಾರ ಈ ಯೋಜನೆಯನ್ನು ಕೂಡಲೆ ಕೈ ಬಿಡಬೇಕು

ಬಿಎಂಎಲ್, ಎಚ್‌ಎಎಲ್ ಕಾರ್ಖಾನೆ, ರಕ್ಷಣಾವಲಯದಲ್ಲೆ ಸೈನಿಕರಿಗೆ ವಾಹನ ತಯಾರು ಮಾಡುವ ಕಾರ್ಖಾನೆಯ ಷೇರುಗಳನ್ನು ಹೊರ ದೇಶಕ್ಕೆ ಮಾರಾಟ ಮಾಡಲು ಹೊರಟಿದೆ ಇದರಿಂದ ಕಾರ್ಖಾನೆಗಳು ಮುಚ್ಚಿ ಮತ್ತಷ್ಟು ನಿರುದ್ಯೋಗ ಸಮಸ್ಯೆಯನ್ನು ಹೆಚ್ಚು ಮಾಡಲಿದೆ. ಬಿಎಸ್‌ಎನ್‌ಎಲ್ ನಲ್ಲಿ 90 ಸಾವಿರ ಕಾರ್ಮಿಕರು ಈಗಾಗಲೆ ಹೊರ ಬಂದಿದ್ದಾರೆ. ಬಿಎಸ್‌ಎನ್‌ಎಲ್ ಬೆಳವಣಿಗೆ ಕುಂಟಿತಗೊಳಿಸಿ ಜಿಯೊ ಕಂಪನಿಯ ಬೆಳವಣಿಗೆಗೆ ಪರೋಕ್ಷವಾಗಿ ಮೋದಿ ಸರಕಾರ ಸಹಕಾರ ನೀಡಿ ನಿರುದ್ಯೋಗ ಸಮಸ್ಯೆ ಮತಷ್ಟು ಹೆಚ್ಚು ಮಾಡುತ್ತಿದ್ದಾರೆ. ಮೋದಿ ಸರಕಾರದ ಆಡಳಿತ ಅವದಿಯಲ್ಲಿ 40 ವರ್ಷಗಳ ಹಿಂದೆ ಇದ್ದ ನಿರುದ್ಯೋಗದ ಸಮಸ್ಯೆ ಇಂದು ಇದೆ. ಈ ದೇಶದ ಯುವಕರು ನಿರುದ್ಯೋಗಿ ಸಮಸ್ಯೆಯಿಂದ ಪ್ರತಿ ದಿನ 36 ನಿರುದ್ಯೋಗಿ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತಿದ್ದಾರೆ. ಹಾಗಾಗಿ ಕಾರ್ಖಾನೆ ಮುಚ್ಚುವುದರಿಂದ ನಿರುದ್ಯೋಗ ಸಮಸ್ಯೆ ಈ ದೇಶದಲ್ಲಿ ಮತ್ತಷ್ಟು ಬಿಗಡಾಯಿಸುತ್ತದೆ.

ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಟ 21 ಸಾವಿರ ಕನಿಷ್ಟ ಕೂಲಿ ನೀಡಬೇಕು. ಕೇಂದ್ರದ ಮೋದಿ ಮತ್ತು ರಾಜ್ಯದ ಯಡಿಯೂರಪ್ಪ ಸರಕಾರ ಪತ್ರಿಭಟನೆ ಹತ್ತಿಕ್ಕಲು ಎಲ್ಲಾ ಪ್ರಯತ್ನಗಳನ್ನು ಮಾಡತ್ತಿದೆ. ಸಾವಿರಾರು ಸಂಖೆಯಲ್ಲಿ ಬಿಸಿಯೂಟ ಮಹಿಳೆ ಕಾರ್ಮಿಕರು ಬೆಂಗಳೂರಿನಲ್ಲಿ ಪ್ರತಿಭಟನೆ ಮಾಡಲು ಹೋದರೆ ಅವರನ್ನು ರೈಲ್ವೇ ನಿಲ್ದಾಣದಲ್ಲಿ ತಡೆದು ಪ್ರತಿಭಟನೆ ಮಾಡಲು ಅನುಮತಿ ನೀಡದೆ ಪೋಲಿಸರ ಮೂಲಕ ಧಮಕಿ ಹಾಕಿಸುವ ಕೆಲಸ ನಡೆಯುತ್ತಿದೆ. ಹೋರಾಟ ಪ್ರತಿಭಟನೆ ಮಾಡುವುದು ಸಂವಿದಾನ ನಮಗೆ ನೀಡಿದ ಹಕ್ಕು ಅದನು ಕಸಿದುಕೊಳ್ಳಲು ಪೊಲೀಸರ ಮೂಲಕ ಬಲಪ್ರಯೊಗ ಮಾಡುವುದನ್ನು ಕಾರ್ಮಿಕರು ಸಹಿಸುವುದಿಲ್ಲ ಎಂದು ಹೇಳಿದರು.

ಈ ಪ್ರತಿಭಟನೆಯಲ್ಲಿ ಸಿಪಿಎಂ ಮುಖಂಡರಾದ ಅಪ್ಪಯ್ಯಣ್ಣ, ಸಿ.ಆರ್. ಮೂರ್ತಿ ವೆಂಕಟೇಶ್, ಕನಕರಾಜ್, ವೆಂಕಟೇಶ್, ಜಯಲಕ್ಷ್ಮಿ, ಬಾಬು, ಹಾಜರಿದ್ದರು.

ಕೋಲಾರ:

ಕೇಂದ್ರ ಸರ್ಕಾರದ ಜನವಿರೋಧಿ ಬಜೆಟ್ ನ್ನು ಖಂಡಿಸಿ ಸಿಪಿಐಎಂ ತಾಲೂಕು ಸಮಿತಿಯಿಂದ ನಗರದ ಹೊಸ ಬಸ್ ನಿಲ್ದಾಣ ಸರ್ಕಲ್ ಬಳಿ ಮಂಗಳವಾರ ಪ್ರತಿಭಟನೆ ನಡೆಸಿತು.

ನಮ್ಮ ಬಹುಪಾಲು ಜನಗಳ ಜೀವನೋಪಾಯ ಪರಿಸ್ಥಿತಿಗಳನ್ನು ಹಿಂಡಿ ಹಾಕುವ ಧೋರಣೆಗಳು. ಮೋದಿ ಸರಕಾರ ಭಾರತೀಯ ಅರ್ಥ ವ್ಯವಸ್ಥೆಯನ್ನು ಧ್ವಂಸ ಮಾಡಿ, ಜನಗಳ ಮೇಲೆ ಹೊರೆಗಳನ್ನು ತರುತ್ತಾ ಇದ್ದಾರೆ ಎಂದು ಆರೋಪಿಸಿದರು

ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನೀಡಬೇಕು ರೈತರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸದೇ ರೈತರಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿದ್ದು ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ದೇಶದಲ್ಲಿನ ಶಿಕ್ಷಣ, ಆರೋಗ್ಯ, ಸಾರ್ವಜನಿಕ ಪಡಿತರ ವ್ಯವಸ್ಥೆ, ಉದ್ಯೋಗ ಖಾತ್ರಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿ ಮಾಡಲು ಸಾಧ್ಯವಾಗುವುದಿಲ್ಲ. ಆಗಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು ಕೇಂದ್ರ ಸರ್ಕಾರವು ಕಾರ್ಪೋರೇಟ್ ಕಂಪನಿಗಳಿಗೆ ದೇಶದ ತೆರಿಗೆಯನ್ನು ದಾರೆ ಎರೆಯುವುದನ್ನು ಬಿಟ್ಟು ಜನಸಾಮಾನ್ಯರ ಜೀವನ ಮಟ್ಟವನ್ನು ಸುಧಾರಣೆಯಾಗುವ ನಿಟ್ಟಿನಲ್ಲಿ ಜನಪರ ನೀತಿಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.



ಬಂಗಾರಪೇಟೆ

ಸಿಪಿಎಂ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಎಂ. ವಿಜಿ ಕೃಷ್ಣ, ತಾಲೂಕು ಮುಖಂಡರಾದ ಎನ್.ಎನ್. ಶ್ರೀ ರಾಮ್, ವಿ. ನಾರಾಯಣರೆಡ್ಡಿ, ಆಶಾ, ಎಂ. ಬೀಮ್ ರಾಜ್, ಅಪ್ಪಯ್ಯಣ್ಣ ನಾಗರಾಜಪ್ಪ ಇದ್ದರು.

ಜನವಿರೋಧಿ ಕೇಂದ್ರ ಬಜೆಟ್ ವಿರುದ್ಧ ಹಾಸನದಲ್ಲಿ ಸಿಪಿಐ(ಎಂ) ಪ್ರತಿಭಟನೆ

ಪ್ರಸಕ್ತ ಸಾಲಿನ ಬಜೆಟ್ಟಿನಲ್ಲಿ ವ್ಯಾಪಕವಾಗಿ ತುಂಬಿರುವ ಜನ–ವಿರೋಧಿ ಧೋರಣೆಗಳು ನಮ್ಮ ಬಹುಪಾಲು ಜನಗಳ ಜೀವನೋಪಾಯ ಪರಿಸ್ಥಿತಿಗಳನ್ನು ಹಿಂಡಿ ಹಾಕುವ ಧೋರಣೆಗಳು. ಮೋದಿ ಸರಕಾರ ಭಾರತೀಯ ಅರ್ಥವ್ಯವಸ್ಥೆಯನ್ನು ಧ್ವಂಸ ಮಾಡಿ, ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರಿದೆ. ಅದೇ ವೇಳೆಗೆ, ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಒಂದಾದ ಮೇಲೊಂದರಂತೆ ರಿಯಾಯ್ತಿಗಳನ್ನು ಕೊಡುತ್ತಿದೆ. ಇವು ಸ್ವತಂತ್ರ್ಯ ಭಾರತದಲ್ಲಿ ಹಿಂದೆಂದೂ ಕಾಣದಷ್ಟು ರೀತಿಯಲ್ಲಿ ಆರ್ಥಿಕ ಅಸಮಾನತೆಗಳನ್ನು ಇನ್ನಷ್ಟು ಹೆಚ್ಚಿಸಿವೆ.

ಒತ್ತಾಯಗಳು

1. ಜನಗಳ ಜೀವನ ಪರ್ಯಂತದ ಉಳಿತಾಯಗಳು ಮತ್ತು ಭದ್ರತೆಯ ಭಂಡಾರವಾದ ಎಲ್‌ಐಸಿಯಲ್ಲಿನ ಶೇರು ಹಿಂಪಡಿಕೆ ಸೇರಿದಂತೆ ರಾಷ್ಟೀಯ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಿಸುವುದನ್ನು ಕೈಬಿಡಬೇಕು.
2. ಅಭೂತಪೂರ್ವ ಮಟ್ಟದ ನಿರುದ್ಯೋಗ ಮತ್ತು ಕಾರ್ಖಾನೆಗಳನ್ನು ಮುಚ್ಚುವುದರಿಂದ ಅಥವ ಅವುಗಳ ಗಾತ್ರ ಕುಗ್ಗಿಸುತ್ತಿರುವುದರಿಂದ ಆಗುತ್ತಿರುವ ರಿಟ್ರೆಂಚ್‌ಮೆಂಟ್‌ಗಳ ವಿರುದ್ಧ; ರೂ.21,000 ಕನಿಷ್ಟ ಕೂಲಿ ಕೊಡಬೇಕು ಮತ್ತು ಸಾಕಷ್ಟು ಪ್ರಮಾಣದ ನಿರುದ್ಯೋಗ ಭತ್ತೆ ಕೊಡಬೇಕು.
3. ಕೃಷಿ ಸಂಕಟಗಳನ್ನು ಆಳಗೊಳಿಸುವುದರ ವಿರುದ್ಧ. ರೈತರಿಗೆ ಒಮ್ಮೆ ಸಾಲ ಮನ್ನಾ ಮಾಡಬೇಕು.
4. ಬಹುಮುಖ್ಯವಾದ ಕ್ಷೇತ್ರಗಳಲ್ಲಿ ಸರಕಾರದ ವೆಚ್ಚಗಳಲ್ಲಿ ದೊಡ್ಡ ಪ್ರಮಾಣದ ಕಡಿತಗಳ ವಿರುದ್ಧ–ಆಹಾರ ಸಬ್ಸಿಡಿ (75,532 ಕೋಟಿ ರೂ.); ಕೃಷಿ ಮತ್ತು ಮೀನುಗಾರಿಕೆಯಂತಹ ಸಂಬಂಧಿತ ಕ್ಷೇತ್ರಗಳು (30,683 ಕೋಟಿ ರೂ.); ಮನರೇಗ (9500 ಕೋಟಿ ರೂ.); ಸಾಮಾಜಿಕ ಕಲ್ಯಾಣ (2640 ಕೋಟಿ ರೂ.); ನಗರಾಭಿವೃದ್ಧಿ (5765 ಕೋಟಿ ರೂ.); ಆರೋಗ್ಯ (1169 ಕೋಟಿ ರೂ.) ಇತ್ಯಾದಿ. ಕೋಟ್ಯಂತರ ಭಾರತೀಯರನ್ನು ಬಡತನಕ್ಕೆ ತಳ್ಳುವ ಕಡಿತಗಳನ್ನು ವಾಪಸ್ ಪಡೆಯಬೇಕು.

ಮೋದಿ ಸರಕಾರ ನಮ್ಮ ಸಂವಿಧಾನದ ಮೇಲೆ ಪ್ರಹಾರ ನಡೆಸುತ್ತಿರುವ, ಕಟ್ಟಾ ಹಿಂದುತ್ವ ಅಜೆಂಡಾವನ್ನು, ಸಿಎಎ – ಎನ್‌ಪಿಆರ್ – ಎನ್‌ಆರ್‌ಸಿಯನ್ನು ಜಾರಿಗೊಳಿಸುತ್ತ ಜನಗಳನ್ನು ಒಡೆಯುತ್ತಿರುವ ಮತ್ತು ದೇಶಾದ್ಯಂತ ಜನಗಳ ನಡುವೆ ಹೆಚ್ಚೆಚ್ಚು ದ್ವೇಷ ಮತ್ತು ಹಿಂಸಾಚಾರವನ್ನು ಹುಟ್ಟಿಸುತ್ತಿರುವ ಸಮಯದಲ್ಲೇ ಜನಗಳ ಜೀವನೋಪಾಯಗಳ ಮೇಲೆ ಇಂತಹ ಕ್ರಿಮಿನಲ್ ದಾಳಿಗಳನ್ನು ನಡೆಸುತ್ತಿದೆ.

ಮೋದಿ ಸರ್ಕಾರದ ಇಂತಹ ಜನ ವಿರೋಧಿ ನೀತಿಗಳ ವಿರುದ್ಧ ದೇಶಾದ್ಯಂತ ಪ್ರತಿಭಟನೆಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ಕರೆ ನೀಡಿದ್ದು ಹಾಸನದಲ್ಲಿ ಫೆಬ್ರವರಿ 19 ರಂದು ಸಿಪಿಐ(ಎಂ) ನೇತೃತ್ವದಲ್ಲಿ ಹಾಸನ ನಗರದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಯ ಎದುರು ಪ್ರತಿಭಟನೆ ನಡೆಸಿ ಈ ಮೇಲಿನಂತೆ ಒತ್ತಾಯಿಸಿತು. ●



ಕೋಲಾರ

ದೇಶವೆಂದರೆ ಒಂದು ಭೂಪ್ರದೇಶ, ಅಲ್ಲಿ ಜೀವಿಸುವ ಜನರು, ಅವರ ಅಸ್ತಿತ್ವಕ್ಕಾಗಿ ಬಳಸುವ ಜೀವನಾಧಾರ ವಸ್ತುಗಳು ಮತ್ತು ಅವನ್ನು ಪಡೆಯಲು ಸಾಮಾಜಿಕವಾಗಿ ಬಳಸುವ ಶ್ರಮ ಮತ್ತು ಸಹಜೀವಿಗಳೊಂದಿಗಿನ ಶ್ರಮಸಂಬಂಧಗಳು ಎಲ್ಲವೂ ಕೂಡಿರುವ ವಾಸ್ತವವೇ ದೇಶ. ಇವುಗಳ ಬಗೆಗಿನ ಸ್ವಾಭಾವಿಕ ಪ್ರೀತಿಯೇ ದೇಶಪ್ರೇಮ. ಹಾಗಿದ್ದ ಮೇಲೆ 'ದೇಶಭಕ್ತಿ' ಎಂಬುದು ಹುಟ್ಟಿದ್ದು ಹೇಗೆ? ದೇಶಭಕ್ತಿ ಎಂಬುದು ಊಳಿಗಮಾನ್ಯ ರಾಜಕೀಯದ ಪರಿಕಲ್ಪನೆ.
ಸಂಘಪರಿವಾರ ಈಗ ಹರಡುತ್ತಿರುವ 'ದೇಶಭಕ್ತಿ' ಮತ್ತು ದೇಶದ್ರೋಹ'ದ ಕಲ್ಪನೆಗಳ ಹಿಂದೆ ಊಳಿಗಮಾನ್ಯ ವ್ಯವಸ್ಥೆಯ ಮತ್ತು ಫ್ಯಾಸಿಸ್ಟ್ 'ದೇಶ'ದ ಪರಿಕಲ್ಪನೆಯ ಮಿಶ್ರಣ ಇದೆ.

ದೇಶಪ್ರೇಮ ಮತ್ತು ದೇಶದ್ರೋಹ



ಪ್ರೊ. ವಿ.ಎಸ್. ಲಕ್ಷ್ಮೀನಾರಾಯಣ

18–19ನೇ ಶತಮಾನದ ಸ್ಕಾಟಿಷ್ ಕವಿ, ಸರ್ ವಾಲ್ಟರ್ ಸ್ಕಾಟ್ ಬರೆದ 'Patriotism' ಎಂಬ ಕವನ ಹೀಗೆ ಪ್ರಾರಂಭವಾಗುತ್ತದೆ:

Breathes there the man with soul so dead
who never to himself hath said
'This is my own my native land'...

ಇದನ್ನು ಕುವೆಂಪುರವರು ಕನ್ನಡಿಸಿದ್ದು, ಅದು–
"ದೇಶ ನನ್ನದು, ನನ್ನದು ನಾಡು
ಎನ್ನದ ಮಾನವನೆದೆ ಸುಡುಗಾಡು... "

ಎಂದು ಪ್ರಾರಂಭವಾಗುತ್ತದೆ. ಅವರ ಅನುವಾದದಲ್ಲಿ 'Native' ಎಂಬ ಪದಕ್ಕಿರುವ ಅರ್ಥಪುಷ್ಟಿಯು ವ್ಯಕ್ತವಾಗುವುದಿಲ್ಲ.

ದೇಶಪ್ರೇಮ, ದೇಶಾಭಿಮಾನ ಮುಂತಾದ ಪದಗಳು ಮೇಲುನೋಟಕ್ಕೆ ಎಲ್ಲ ಮನುಷ್ಯರೂ, ಅವರು ಹುಟ್ಟಿ–ಬೆಳೆದು ವಾಸಿಸುವ ಅಥವಾ ವಲಸೆಹೋಗಿ ಜೀವಿಸುವ ಒಂದು ಭೂಪ್ರದೇಶಕ್ಕೂ ಅವರಿಗೂ ನಡುವೆ ಇರುವ ಭೌತಿಕ ಮತ್ತು ಭಾವನಾತ್ಮಕ ಸಂಬಂಧವನ್ನು ಕುರಿತು ಹೇಳುವಂತೆ ತೋರುತ್ತವೆ. ನಾಡು, ದೇಶ ಎಂಬ ಪದಗಳು ಮೂಲಭೂತವಾಗಿ ಭೂ ಪ್ರದೇಶವನ್ನೇ ಕುರಿತು ಹೇಳುತ್ತವೆ. ಅವುಗಳ ವಿಶಾಲತೆಯನ್ನು ಹಿಗ್ಗಿಸುತ್ತಾ ಹೋದರೆ ಖಂಡ, ವಿಶ್ವ, ಜಗತ್ತು ಎಂದಾಗಿ, ಇಡೀ ಭೂಮಿಗೆ ವಿಸ್ತರಿಸುತ್ತದೆ. ಮತ್ತೂ ವಿಸ್ತರಿಸಿದರೆ, ಸಾಂದ್ರವಾಗಿರುವ ಭೂಮಿಯ ವಾಸ್ತವತೆಯು ಅಳ್ಳಕವಾಗುತ್ತಾ ಹೋಗಿ ಎಲ್ಲವನ್ನೂ ಒಳಗೊಳ್ಳುವ 'ಬ್ರಹ್ಮಾಂಡ' ಎಂಬ ಅಮೂರ್ತವಾದ ಭಾವನೆಯಾಗಿಬಿಡುತ್ತದೆ. ಅದರೊಂದಿಗಿನ ಮನುಷ್ಯ ಸಂಬಂಧವೂ ಸಹ ವಿಶಾಲಗೊಂಡು 'ವಿಶ್ವಪ್ರೇಮ', ಎಂದಾಗುತ್ತದೆ. ಅದೇ ರೀತಿಯಲ್ಲಿ ಈ ಸಂಬಂಧವನ್ನು ಕಿರಿದುಗೊಳಿಸುತ್ತಾ, ನಿರ್ದಿಷ್ಟಗೊಳಿಸುತ್ತಾ ಹೋದರೆ ಅದರ ಬಗ್ಗೆ ಇರುವ, ಪ್ರೀತಿ, ಅಭಿಮಾನ ಮುಂತಾದವುಗಳೆಲ್ಲಾ ದೇಶ, ಪ್ರಾಂತ್ಯ, ಜಿಲ್ಲೆ, ಊರು, ಕುಟುಂಬಗಳಿಗೆ ಕುಗ್ಗುತ್ತಾ ಕೊನೆಗೆ ಮನುಷ್ಯರ ಭೌತಿಕ ಮತ್ತು ಭಾವನಾತ್ಮಕ ಗಾಢ ಸಂಬಂಧಗಳ ಕೇಂದ್ರವಾದ 'ಮನೆ'ಯನ್ನು ತಲುಪುತ್ತವೆ. 'ಮನೆ'ಯಲ್ಲಿನ ತಂದೆ, ಅಜ್ಜ, ಅಜ್ಜಿ, ಸೋದರ–ಸೋದರಿ, ಬಂಧು–ಬಳಗವನ್ನು ಒಳಗೊಳ್ಳುತ್ತದೆ. ಈ ಸಂಬಂಧಗಳನ್ನು ಮತ್ತೂ ನಿರ್ದಿಷ್ಟಗೊಳಿಸಿದರೆ, ಅದು ವ್ಯಕ್ತಿಯ ಹುಟ್ಟಿನೊಂದಿಗೆ ಬಿಡಿಸಲಾಗದಷ್ಟು ಗಾಢ ಸಂಬಂಧವಿರುವ ವ್ಯಕ್ತಿಗೆ ಅಂದರೆ ತಾಯಿಗೆ, ಇನ್ನೂ ನಿರ್ದಿಷ್ಟವಾಗಿ ತಾಯಿಯ ಗರ್ಭಕ್ಕೆ ಬಂದು ನಿಲ್ಲುತ್ತವೆ.

ತಾಯಿಯ ಗರ್ಭದಲ್ಲಿರುವವರೆಗೂ ವ್ಯಕ್ತಿಗೆ (ಅಂದರೆ, ಮಗುವಿಗೆ) ಪೋಷಣೆ ಮತ್ತು ಭದ್ರತೆಗಳು ಕುಟುಂಬದ ಹಿನ್ನೆಲೆಯಲ್ಲಿ ಸ್ವಾಭಾವಿಕವಾಗಿ ದೊರೆಯುತ್ತವೆ. ಹುಟ್ಟಿದ ಮೇಲೆ ಪೋಷಣೆ ಮತ್ತು ಭದ್ರತೆಗಳು ಪಾಲನೆಯ ರೂಪದಲ್ಲಿ ತಾಯಿ–ತಂದೆ ಮತ್ತು ಕುಟುಂಬದ ಜನರಿಂದ ಸಾಮಾಜಿಕವಾಗಿ ದೊರೆಯುತ್ತವೆ.

ಹುಟ್ಟಿನಿಂದ ಹಿಡಿದು ಸಾಯುವ ಕಡೆಯ ಕ್ಷಣದವರೆಗೂ ಪ್ರತಿ ವ್ಯಕ್ತಿಗೂ ಪೋಷಣೆ ಮತ್ತು ಭದ್ರತೆಗಳು ಬೇಕೇ ಬೇಕು. 'ಎಲ್ಲಿಗೇ ಹೋದರೂ', 'ಮನೆಗೆ' ಮರಳಬೇಕು ಎಂಬ ಹಂಬಲ ವ್ಯಕ್ತಿಗಳಲ್ಲಿ ಸದಾ ತುಡಿಯುತ್ತಿರುತ್ತದೆ. ಮನೆಯ ಸುಖ–ಕೌಟುಂಬಿಕ ನೆಮ್ಮದಿ ಇತ್ಯಾದಿ ಹಂಬಲಗಳೆಲ್ಲಾ ಹುಟ್ಟುವ ಮುಂಚಿನಿಂದಲೂ ಎಲ್ಲರಲ್ಲಿಯೂ ಇರುವಂಥವೇ. ಇವು ವಾಸ್ತವದಲ್ಲಿ ತಾಯಿಯ ಗರ್ಭದಲ್ಲಿದ್ದುಕೊಂಡು, (ಯಾವ ಯತ್ನವನ್ನೂ ಮಾಡದೆ) ಮಗುವು ಹೊಕ್ಕಳು ಬಳ್ಳಿಯ ಮೂಲಕ ತಾಯಿಯಿಂದ ನೇರವಾಗಿ ಪಡೆಯುತ್ತಿದ್ದ ಪೋಷಣೆ (ಆಹಾರ–ಶಕ್ತಿ) ಮತ್ತು ಭದ್ರತೆ (ಸುರಕ್ಷತೆ)ಗಳನ್ನು ಸದಾ ಪಡೆಯುತ್ತಿರಬೇಕೆಂಬ ಹಂಬಲಗಳ ಮುಂದುವರಿಕೆಯೇ ಆಗಿದೆ. ತಾಯಿಯನ್ನು ಕಂಡಾಗ ಆಗುವ ಸಂತೋಷ, ಎಲ್ಲಿಗೇ ಹೋದರೂ ಮತ್ತೆ, ಮನೆಗೆ ಮರಳಿದಾಗ ಆಗುವ ಸಂತೋಷಕ್ಕೆ ಸಂವಾದಿಯಾದದ್ದು. ಈ ದೃಷ್ಟಿಯಿಂದ ತಾಯಿಯ ಗರ್ಭವನ್ನು ವ್ಯಕ್ತಿಯ ಮೊದಲ 'ಮನೆ' ಎಂದು ಕರೆಯಬಹುದು. ಈ ಅರ್ಥದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಎರಡು ಮನೆಗಳಿವೆ. ಹುಟ್ಟುವುದಕ್ಕಿಂತ ಮುಂಚಿನ ಮನೆ, ಅಂದರೆ ತಾಯಿಯ ಗರ್ಭ, ಮತ್ತು ಹುಟ್ಟಿದ ಮೇಲೆ ಪೋಷಣೆ ಮತ್ತು ಭದ್ರತೆಗಳನ್ನು ಒದಗಿಸುವ, ಅನುಭವಿಸುವ ತಾಣವಾದ 'ನಮ್ಮ ಮನೆ'.

ಗರ್ಭಿಣಿ ತಾಯಿಯು ಕೃಶಳಾಗಿರಲಿ ಅಥವಾ ಆರೋಗ್ಯವಂತಳಾಗಿರಲಿ, ಹೇಗೇ ಇದ್ದರೂ ಮಗುವಿಗೆ ಆಕೆಯ ಗರ್ಭವೇ 'ಮನೆ'. ಹಾಗೆಯೇ ವ್ಯಕ್ತಿಯು ವಾಸಿಸುವ ಸ್ಥಳವು ಗುಡಿಸಿಲಾಗಿರಲಿ ಅಥವಾ ಬಂಗಲೆಯಾಗಿರಲಿ ಅದು ಮನೆಯೇ. ಈ ಎರಡರ ಸಂಯೋಜಿತ ರೂಪವೇ ತಾಯಿಯ ಮನೆ (ತವರು), ತಾಯಿಯ ಊರು (ಹುಟ್ಟಿದೂರು) ತಾಯಿಯ ಭಾಷೆ (ತಾಯ್ನುಡಿ), ಮತ್ತು ತಾಯಿ ಬದುಕುವ ನಾಡು (ತಾಯ್ನಾಡು). 'ನನ್ನ ಮನೆ' ಎಂದರೂ ಅದೇ, 'ನನ್ನ ದೇಶ' ಎಂದರೂ ಅದೇ. ಗರ್ಭಸ್ಥವಾಗಿರುವಾಗಲೇ ಭ್ರೂಣದ ಬೆಳವಣಿಗೆಯೊಂದಿಗೆ, ಮತ್ತು ಮಗುವಿನ ಮೆದುಳಿನ ಬೆಳವಣಿಗೆಯೊಂದಿಗೆ ತಳುಕುಹಾಕಿಕೊಂಡಿರುವ ತಾಯಿ ಮತ್ತು ಪೋಷಕ ಜನರ ಕುಟುಂಬ (ವಂಶ), ತಾಯ್ನುಡಿ, ತಾಯ್ನಾಡುಗಳ ಬಗೆಗಿನ ಗಾಢಪ್ರೇಮವು ಏಕಕಾಲಕ್ಕೆ ಭೌತಿಕವೂ ಹೌದು ಭಾವನಾತ್ಮಕವೂ ಹೌದು. ಈ ಕಾರಣಕ್ಕಾಗಿಯೇ ಈ ಸಂಬಂಧದ ಹೊಗಳಿಕೆ, ಪ್ರಶಂಸೆಗಳು ವ್ಯಕ್ತಿಗೆ ಅತೀವ ಸಂತೋಷವನ್ನು ಕೊಡುತ್ತದೆ. ತೆಗಳಿಕೆ ಅಥವಾ ನಿಂದನೆಗಳು ಭಾವೋದ್ರೇಕದ ತೀವ್ರ ಪ್ರತಿಕ್ರಿಯೆಗಳನ್ನು ಹುಟ್ಟಿಸುತ್ತವೆ.

ವ್ಯಕ್ತಿಗಳು ಸಣ್ಣವರಿದ್ದಾಗ ಪೋಷಣೆ ಮತ್ತು ಭದ್ರತೆಗಳನ್ನು ತಾಯಿತಂದೆಯರ ಮೂಲಕ ಕುಟುಂಬದಿಂದ ಪಡೆಯುತ್ತಾರೆ. ತಾಯಿಗೆ ಹತ್ತಿರವಿರುವ ಕುಟುಂಬದ ಸದಸ್ಯರು ಸ್ವತಹ ತಮ್ಮ ಪೋಷಣೆ ಮತ್ತು ಭದ್ರತೆಗಳನ್ನು ತಮ್ಮ ಸಾಮಾಜಿಕ ಶ್ರಮಗಳಿಂದ ಹುಟ್ಟುವ ಜೀವನಾಧಾರ ವಸ್ತುಗಳ ಮೂಲಕ, ತಾವಿರುವ ಭೂಪ್ರದೇಶದಿಂದ ಪಡೆಯುತ್ತಾರೆ. ಇವೆಲ್ಲವುಗಳ ಒಟ್ಟು ರೂಪವೇ ದೇಶ. ಈ ದೇಶದ ಬಗೆಗಿನ ವ್ಯಕ್ತಿಗಳ ಪ್ರೀತಿಯು ಏಕಕಾಲಕ್ಕೆ ಸ್ವಾಭಾವಿಕವಾದದ್ದು ಮತ್ತು ಸಾಮಾಜಿಕವಾದದ್ದು. ಹೀಗೆ, ದೇಶವೆಂದರೆ ಒಂದು ಭೂಪ್ರದೇಶ, ಅಲ್ಲಿ ಜೀವಿಸುವ ಜನರು, ಅವರ ಅಸ್ತಿತ್ವಕ್ಕಾಗಿ ಬಳಸುವ ಜೀವನಾಧಾರ ವಸ್ತುಗಳು ಮತ್ತು ಅವನ್ನು ಪಡೆಯಲು ಸಾಮಾಜಿಕವಾಗಿ ಬಳಸುವ ಶ್ರಮ ಮತ್ತು ಸಹಜೀವಿಗಳೊಂದಿಗಿನ ಶ್ರಮಸಂಬಂಧಗಳು ಎಲ್ಲವೂ ಕೂಡಿರುವ ವಾಸ್ತವವೇ ದೇಶ. ಇವುಗಳ ಬಗೆಗಿನ ಸ್ವಾಭಾವಿಕ ಪ್ರೀತಿಯೇ ದೇಶಪ್ರೇಮ.


ಹಾಗಿದ್ದ ಮೇಲೆ 'ದೇಶಭಕ್ತಿ' ಎಂಬುದು ಹುಟ್ಟಿದ್ದು ಹೇಗೆ?

ಶ್ರಮಸಂಬಂಧಗಳಲ್ಲಿ ಜೀವನಾಧಾರ ವಸ್ತುಗಳನ್ನು ಉತ್ಪಾದಿಸಲು ಬೇಕಾದ ಉತ್ಪಾದನಾ ಸಾಧನಗಳನ್ನು ಬಲಿಷ್ಠರಾದ ಕೆಲವರು ತಮ್ಮ ಕೈಲಿಟ್ಟುಕೊಂಡು ತಾವು ಶ್ರಮಪಡದೆ, ಸಾಮಾನ್ಯ ಜನರ ಶ್ರಮದಿಂದ ಜೀವಿಸುತ್ತಾ ಅವರ ಪೋಷಣೆ– ಭದ್ರತೆಗಳನ್ನು ನಿಯಂತ್ರಿಸುವ ಶೋಷಕ ವ್ಯವಸ್ಥೆಯು ಸಾವಿರಾರು ವರ್ಷಗಳ ಹಿಂದಿನ ಗುಲಾಮಪದ್ಧತಿಯಲ್ಲಿ ರೂಢಿಗೆ ಬಂದಿತು. ಈ ಆಧುನಿಕ ಕಾಲದಲ್ಲೂ ಇಂಥ ಶೋಷಕ ವ್ಯವಸ್ಥೆಯು ಬೇರೆ ಬೇರೆ ರೂಪಗಳಲ್ಲಿ, ಬೇರೆ ಬೇರೆ ಹೆಸರುಗಳಲ್ಲಿ ಇಂದಿಗೂ ಜೀವಂತವಾಗಿದೆ. ಭೂಪ್ರದೇಶ, ಉತ್ಪಾದನಾಸಾಧನಗಳು ಮತ್ತು ಶ್ರಮಶಕ್ತಿಯ ಮೂಲವಾದ ಸಾಮಾನ್ಯ ಜನರು ಮತ್ತು ಅವರ ಸಂತಾನವನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದರಲ್ಲಿ ಬಲಿಷ್ಠರ ಎರಡು ಬಣಗಳ ನಡುವೆ ಹೊಡೆದಾಟ–ಕಾದಾಟಗಳು ನಡೆದಾಗಲೆಲ್ಲಾ ಬಲಿಷ್ಠರಿಗಾಗಿ ಕಾದಾಡಿ ಪ್ರಾಣಕೊಡಲು ಸಾಮಾನ್ಯ ಜನರನ್ನೇ ಬಳಸಿಕೊಳ್ಳುವುದು ಬಹು ಹಿಂದಿನಿಂದಲೂ ಬಳಕೆಯಲ್ಲಿರುವ ಮತ್ತೊಂದು ಕ್ರೂರಪದ್ಧತಿ. ಅವರಿಗೆ ಸಮವಸ್ತ್ರವನ್ನು ಹಾಕಿ ಆಯುಧಗಳನ್ನು ಕೊಟ್ಟು ಕಾದಾಡಲು ಕಳಿಸಿದರೆ ಅವರೇ ರಾಜಭಕ್ತಿಯುಳ್ಳ ಸೈನಿಕರು ಅಥವಾ ರಾಜಭಟರು. ಈ ಪದ್ಧತಿಯಿಂದಾಗಿ, ಸಾಮಾನ್ಯ ಜನರಲ್ಲಿ ಸ್ವಾಭಾವಿಕವಾಗಿ ಮತ್ತು ಸಾಮಾಜಿಕವಾಗಿ ಇದ್ದ 'ದೇಶಪ್ರೇಮ'ವು ತಮ್ಮನ್ನು ನಿಯಂತ್ರಿಸುವ ಬಲಿಷ್ಠ ಶೋಷಕರ ಬಗ್ಗೆ ಇಟ್ಟುಕೊಳ್ಳಲೇಬೇಕಾದ ಭಯ ಮತ್ತು ಬಲವಂತದ ಗೌರವಗಳಿಗೆ ಮತ್ತೊಂದು ಹೆಸರಾದ 'ದೇಶಭಕ್ತಿ'ಯಾಗಿ ಕಾಲಕ್ರಮೇಣ ಮಾರ್ಪಟ್ಟಿತು. ಹೀಗೆ ಸಾಮಾನ್ಯ ಜನರಿಗೆ ಪೋಷಣೆ ಮತ್ತು ಭದ್ರತೆಗಳನ್ನು ಒದಗಿಸುವ 'ದೇಶ'ದ ಸ್ಥಾನವನ್ನು ಬಲಿಷ್ಠರಾದ ಶೋಷಕರು ಆಕ್ರಮಿಸಿಕೊಂಡು ತಾವೇ ದೇಶವೆಂದು, ತಮ್ಮ ಬಗ್ಗೆ ಸಾಮಾನ್ಯ ಜನರು ಇಟ್ಟುಕೊಳ್ಳಬೇಕಾದ ಭಯ–ಗೌರವಗಳೇ ದೇಶಭಕ್ತಿಯೆಂದು ಬಲಾತ್ಕರಿಸುತ್ತಾ ಬಂದದ್ದರ ಫಲವಾಗಿ 'ದೇಶಪ್ರೇಮ'ದ ಸ್ಥಾನದಲ್ಲಿ, 'ದೇಶಭಕ್ತಿ'ಯೆಂಬ ಪರಿಕಲ್ಪನೆಯು ಪ್ರತಿಷ್ಠಾಪನೆಗೊಂಡಿತು. ದೇಶಪ್ರೇಮವು ಅಥವಾ ರಾಷ್ಟ್ರಪ್ರೇಮವು ಸ್ವಾಭಾವಿಕವಾದದ್ದು ಮತ್ತು ಸಾಮಾಜಿಕವಾದದ್ದು. ದೇಶಭಕ್ತಿ ಎಂಬುದು ಊಳಿಗಮಾನ್ಯ ರಾಜಕೀಯದ ಪರಿಕಲ್ಪನೆ. ಅದನ್ನು ನಂಬುವವರ ದೃಷ್ಟಿಯಲ್ಲಿ ಜನರು ತಮ್ಮನ್ನು ನಿಯಂತ್ರಿಸುವ ಶೋಷಕರ ಬಗ್ಗೆ ಭಯ–ಭಕ್ತಿಯನ್ನು ತೋರಿಸಿದರೆ, ಅದು ದೇಶಭಕ್ತಿ. ಅವರನ್ನೇ ಪ್ರಶ್ನಿಸಿದರೆ ಅಥವಾ ಅವರ ಬಗ್ಗೆ ಭಯ–ಭಕ್ತಿಯನ್ನು ತೋರಿಸದಿದ್ದರೆ ಅದು 'ರಾಜದ್ರೋಹ' ಅಥವಾ 'ದೇಶದ್ರೋಹ'.

ಸದ್ಯದ ರಾಜಕೀಯ ಸಂದರ್ಭದಲ್ಲಿ ಸಂಘಪರಿವಾರದ ಆಳುವ ಜನರು ಪ್ರಜಾಪ್ರಭುತ್ವದ ವಿಧಾನದಲ್ಲೇ ಅಧಿಕಾರಕ್ಕೆ ಬಂದಿದ್ದರೂ ಸಹ ಅವರ ರಾಜಕೀಯ ಮೌಲ್ಯಗಳ ಬೇರುಗಳು ಇನ್ನೂ ಆಸ್ತಿಕ ಮೂಲದ ಊಳಿಗಮಾನ್ಯ ವ್ಯವಸ್ಥೆ ಯಲ್ಲೇ ಇವೆ. ಸಾಮಾನ್ಯ ಜನರಲ್ಲಿರುವ ಸ್ವಾಭಾವಿಕವಾದ ದೇಶಪ್ರೇಮವನ್ನು ಗುರುತಿಸಲಾಗದ ಅವರು ತಮ್ಮನ್ನು ಪ್ರಶ್ನಿಸುವವರೆಲ್ಲರನ್ನೂ 'ದೇಶದ್ರೋಹಿ'ಗಳೆಂದು ಜರೆದು ಶಿಕ್ಷಿಸಲು ಹಾತೊರೆಯುತ್ತಾರೆ. ಭಾರತವೆಂಬ ಭೂಪ್ರದೇಶದ ಸಾಮಾನ್ಯ ಜನರೊಂದಿಗೆ, ರಕ್ತಸಂಬಂಧಗಳಲ್ಲಿ ಹೇಗೋ ಹಾಗೆ ಸಾಮಾಜಿಕ ಶ್ರಮಸಂಬಂಧಗಳಲ್ಲಿ ಬದುಕುತ್ತಿರುವ ಎಲ್ಲರೂ ದೇಶಪ್ರೇಮಿಗಳೇ. ಆದ್ದರಿಂದ, ಜನರ ದೇಶಪ್ರೇಮವನ್ನು ಶಂಕಿಸುವ, ಸಾಬೀತುಪಡಿಸಿ ಎಂದು ಆಗ್ರಹಿಸುವ, ಅಥವಾ ಆಳುವವರನ್ನು ಪ್ರಶ್ನಿಸುತ್ತಾರೆಂಬ ಕಾರಣಕ್ಕಾಗಿ ಯಾರನ್ನೇ ಆಗಲಿ 'ದೇಶದ್ರೋಹಿ'ಗಳೆಂದು ದೂಷಿಸುವ ಕ್ರಮಗಳು ಪ್ರಜಾತಾಂತ್ರಿಕವೂ ಅಲ್ಲ, ನ್ಯಾಯಯುತವೂ ಅಲ್ಲ.

17ನೇ ಶತಮಾನದಲ್ಲಿ ಬಂಡವಾಳಶಾಹಿ

ಪುಟ 10 ಕ್ಕೆ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ನ್ಯೂಸ್‌ಸ್ಟಿಂಗ್



ಎರಡು ಹೈಕೋರ್ಟ್ ತೀರ್ಪುಗಳು ನಾಗರಿಕರ ಹಕ್ಕುಗಳನ್ನು ಎತ್ತಿ ಹಿಡಿದಿವೆ

ಸುಪ್ರಿಂ ಕೋರ್ಟ್ ಕೂಡ 'ರಾಜದ್ರೋಹ'ದ ದುರ್ಬಳಕೆ ನಿಲ್ಲಿಸಲು ಮಧ್ಯಪ್ರವೇಶಿಸಬೇಕು

ಆಳ್ವಿಕೆ ಎಂಬುದು ನಾಗರಿಕರ ಸ್ವಾತಂತ್ರ್ಯವನ್ನು ವಂಚಿಸುವಲ್ಲಿ ಎಲ್ಲ ಸಂಸ್ಥೆಗಳನ್ನು ಚಿತಾಯಿಸುವಂತೆ ಕಾಣುತ್ತಿರುವ ಒಂದು ಉಸಿರುಗಟ್ಟಿಸುವ ವಾತಾವರಣದಲ್ಲಿ, ಎರಡು ಹೈಕೋರ್ಟುಗಳ ತೀರ್ಪುಗಳು, ಸ್ವಲ್ಪ ನಿರಾಳವಾಗಿ ಉಸಿರಾಡುವಂತೆ ಮಾಡಿವೆ. ಸರಕಾರವನ್ನು ವಿರೋಧಿಸುವವರ ವಿರುದ್ಧ, ಅಥವ ಸಾಮಾಜಿಕ ಮಾಧ್ಯಮಗಳಲ್ಲಿ ಭಿನ್ನಮತವನ್ನು ವ್ಯಕ್ತಪಡಿಸುತ್ತಿರುವವರ ವಿರುದ್ಧ ಕೇಸುಗಳನ್ನು ಹಾಕದ ದಿನವೇ ಇಲ್ಲ. ಭಾರತೀಯ ದಂಡ ಸಂಹಿತೆಯ ರಾಜದ್ರೋಹದ ಸೆಕ್ಷನ್ 124ಎ, ಯುಎಪಿಎ, ಎನ್‌ಎಸ್‌ಎ ಇವೆಲ್ಲವೂ ಕೇಂದ್ರ ಸರಕಾರ ಮತ್ತು ಬಿಜೆಪಿ ರಾಜ್ಯ ಸರಕಾರಗಳ ಕೈಗಳಲ್ಲಿ ಅವರ ವಿರುದ್ಧ ಮಾತಾಡುವವರನ್ನು ಹಿಂಸಿಸುವ ಅಸ್ತ್ರಗಳಾಗಿ ಬಿಟ್ಟಿವೆ. ದಂಡಸಂಹಿತೆಯಿಂದ ಸೆಕ್ಷನ್ 124ಎ ಯನ್ನು ತೆಗೆಯಬೇಕು, ಈ ನಡುವೆ, ಸುಪ್ರಿಂ ಕೋರ್ಟ್, ಕೇದಾರನಾಥ ಕೇಸಿನಲ್ಲಿ ತನ್ನದೇ ಸಂವಿಧಾನ ಪೀಠ ನೀಡಿರುವ ಮಾರ್ಗದರ್ಶನಗಳ ಪ್ರಕಾರ ಈ ರಾಜದ್ರೋಹದ ಪರಿಚ್ಛೇದದ ದುರ್ಬಳಕೆಯನ್ನು ನಿಲ್ಲಿಸಲು ಮಧ್ಯಪ್ರವೇಶಿಸಬೇಕು.



ಪ್ರಕಾಶ ಕಾರಟ್

ಎರಡು ಹೈಕೋರ್ಟುಗಳು ನೀಡಿರುವ ಎರಡು ತೀರ್ಪುಗಳು ಪ್ರತಿಭಟನೆಯ ಹಕ್ಕು ನಾಗರಿಕರ ಮೂಲಭೂತ ಹಕ್ಕು ಎಂಬುದನ್ನು ಎತ್ತಿ ಹಿಡಿದಿವೆ. ಮುಂಬೈ ಹೈಕೋರ್ಟಿನ ಔರಂಗಾಬಾದ್ ಪೀಠದ ತೀರ್ಪು ಸಿಎಎ ವಿರುದ್ಧ ಪ್ರತಿಭಟನೆಗೆ ಅವಕಾಶ ನೀಡುವುದರ ವಿರುದ್ಧ ಅಡಿಶನಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ನೀಡಿರುವ ಆದೇಶವನ್ನು ಬದಿಗೊತ್ತಿದೆ. ಕರ್ನಾಟಕ ಹೈಕೋರ್ಟು, ಇದಕ್ಕೆ ಎರಡು ದಿನಗಳ ಮುಂಚೆ, ಬೆಂಗಳೂರು ಪೋಲೀಸು ಸಿಎಎ ವಿರುದ್ಧ ಪ್ರತಿಭಟನೆಗಳನ್ನು ತಡೆಯಲು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ ಸೆಕ್ಷನ್ 144ರ ಅಡಿಯಲ್ಲಿ ನಿಷೇಧಾಜ್ಞೆ ಹೇರಿದ್ದು ಕಾನೂನುಬಾಹಿರ ಎಂದಿದೆ.

ಈ ಎರಡು ತೀರ್ಪುಗಳು, ಉನ್ನತ ನ್ಯಾಯಾಂಗದ ವಿಭಾಗಗಳು, ಸರ್ವೋಚ್ಚ ನ್ಯಾಯಾಲಯ ಕೂಡ ಸಂವಿಧಾನಿಕ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿ ಹಿಂದೆ ಬೀಳುತ್ತಿರುವುದನ್ನು ಕಾಣುತ್ತಿರುವ ಸಮಯದಲ್ಲಿ ಬಂದಿರುವುದು ಗಮನಾರ್ಹ.

ಮುಂಬೈ ಹೈಕೋರ್ಟಿನ ಔರಂಗಾಬಾದ್ ಪೀಠದ ನ್ಯಾಯಮೂರ್ತಿಗಳಾದ ನಲವಾಡೆ ಮತ್ತು ಸಾವ್ಲೀಕರ್ ನೀಡಿರುವ ತೀರ್ಪು ಪ್ರತಿಭಟಿಸುವ ನಾಗರಿಕರ ಮೂಲಭೂತ ಹಕ್ಕುಗಳನ್ನು ಒಂದು ಶಾಂತಿಯುತವಾದ ಮತ್ತು ಕಾನೂನುಬದ್ಧವಾದ ರೀತಿಯಲ್ಲಿ ಚಲಾಯಿಸಬಹುದು ಎಂಬುದಕ್ಕೆ ಪ್ರತ್ಯಕ್ಷ ಪಾಠ. ಮೊದಲನೆಯದಾಗಿ, ಸಿಎಎ ವಿರುದ್ಧ ಪ್ರತಿಭಟಿಸುತ್ತಿರುವವರನ್ನು "ಅವರು ಒಂದು ಕಾನೂನನ್ನು ವಿರೋಧಿಸುತ್ತಿದ್ದಾರೆ ಎಂಬ ಕಾರಣಕ್ಕೆ ದೇಶದ್ರೋಹಿಗಳು ಎಂದು ಕರೆಯುವಂತಿಲ್ಲ" ಎಂದು ತೀರ್ಪು ಹೇಳಿದೆ.

"ಸಂವಿಧಾನದ ಅಂಶಗಳನ್ನು ಪರಿಶೀಲಿಸುವಾಗ, ಸಂವಿಧಾನಿಕ ಮತ್ತು ಕಾನೂನು ಚರಿತ್ರೆಯನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ" ಎನ್ನುತ್ತ ತೀರ್ಪು, ಒಂದು ಚಾರಿತ್ರಿಕ ಕಣ್ಣೋಟದಿಂದ ಪ್ರತಿಭಟನೆಯ ಸ್ವಾತಂತ್ರ್ಯವನ್ನು ಹೀಗೆ ವಿವರಿಸಿದೆ: "ಭಾರತ ಸ್ವಾತಂತ್ರ್ಯ ಪಡೆದದ್ದು ಅಹಿಂಸಾತ್ಮಕವಾಗಿದ್ದ ಚಳುವಳಿಗಳಿಂದಾಗಿ, ಮತ್ತು ಅಹಿಂಸೆಯ ಈ ದಾರಿಯನ್ನು ಈ ದೇಶದ ಜನತೆ ಇಂದಿಗೂ ಅನುಸರಿಸುತ್ತಿದ್ದಾರೆ. ಈ ದೇಶದ ಹೆಚ್ಚಿನ ಜನಗಳು ಈಗಲೂ ಅಹಿಂಸೆಯಲ್ಲಿ ನಂಬಿಕೆ ಇಟ್ಟಿರುವುದು ನಮ್ಮ ಅದೃಷ್ಟ. ಪ್ರಸಕ್ತ ವಿಷಯದಲ್ಲಿ ಕೂಡ, ಅರ್ಜಿದಾರರು ಮತ್ತು ಅವರ ಜತೆಗಾರರು ತಮ್ಮ ಪ್ರತಿಭಟನೆಯನ್ನು ತೋರಿಸಲು ಶಾಂತಿಯುತವಾಗಿ ಚಳುವಳಿ ಮಾಡ ಬಯಸುತ್ತಾರೆ".

"ನಾಗರಿಕರು ಒಂದು ನಿರ್ದಿಷ್ಟ ಕಾಯ್ದೆ ಸ್ವಾತಂತ್ರ್ಯ ಹೋರಾಟದ ಮೂಲಕ ತಾವು ಗಳಿಸಿದ ಹಕ್ಕುಗಳ ಮೇಲೆ ದಾಳಿ ಎಂದು ನಂಬಿದಾಗ, ಮತ್ತು ಜನತೆ ತಮಗೆ ಕೊಟ್ಟುಕೊಂಡ ಸಂವಿಧಾನದ ಅಂಶಗಳಿಗೆ ವಿರುದ್ಧವಾಗಿರುವಾಗ ಅವರು ಆ ಹಕ್ಕನ್ನು ಖಂಡಿತ ರಕ್ಷಿಸಿಕೊಳ್ಳುತ್ತಾರೆ ಎಂಬುದನ್ನು ಅಧಿಕಾರಶಾಹಿಗಳು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಅವರಿಗೆ ಹಾಗೆ ಮಾಡಲು ಬಿಡದಿದ್ದರೆ, ಬಲಪ್ರಯೋಗದ ಸಾಧ್ಯತೆ ಸದಾ ಇದ್ದೇ ಇರುತ್ತದೆ, ಅದರ ಫಲಿತಾಂಶವೆಂದರೆ, ಹಿಂಸಾಚಾರ, ಅಸ್ತವ್ಯಸ್ತತೆ, ಅವ್ಯವಸ್ಥೆ ಮತ್ತು ಅಂತಿಮವಾಗಿ ಈ ದೇಶದ ಐಕ್ಯತೆಗೆ ಅಪಾಯ."

ನ್ಯಾಯಾಲಯ ಬೀಡ್‌ನ್ ಒಬ್ಬ ನಿವಾಸಿ, ಇಫ್ತೆಕಾರ್ ಶೇಖ್ ಅಡಿಶನಲ್ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರ ಆದೇಶದ ಮೇರೆಗೆ ಒಂದು ಚಳುವಳಿಗೆ ಅನುಮತಿಯನ್ನು ನಿರಾಕರಿಸುವ ಪೋಲೀಸ್ ಇನ್ಸ್‌ಪೆಕ್ಟರ್‌ರವರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗೆ ಅವಕಾಶ ಮಾಡಿಕೊಟ್ಟಿತು.

ಈ ತೀರ್ಪು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಮೂಲಭೂತ ಹಕ್ಕುಗಳ ಮತ್ತು ಸಂಸತ್ತು ಅಂಗೀಕರಿಸಿದ ಯಾವುದೇ ಕಾನೂನಿನ ವಿರುದ್ಧ ಪ್ರತಿಭಟಿಸುವ ಅವರ ಹಕ್ಕಿನ ಒಂದು ಸ್ಫುಟವಾದ ವ್ಯಾಖ್ಯಾನವಾಗಿದೆ.

ಕರ್ನಾಟಕ ಹೈಕೋರ್ಟಿನ ತೀರ್ಪು ಸೆಕ್ಷನ್ 144ನ್ನು ಮನಬಂದಂತೆ ಬಳಸುವುದರ ವಿರುದ್ಧ ಕೊಟ್ಟಿರುವ ಒಂದು ಹೊಡೆತವಾಗಿದೆ. ಈ ಸೆಕ್ಷನನ್ನು ದೇಶಾದ್ಯಂತ ಸಿಎಎ ಮತ್ತು ಎನ್‌ಆರ್‌ಸಿ ವಿರುದ್ಧ ಪ್ರತಿಭಟನೆಗಳನ್ನು ದಮನ ಮಾಡಲು ಬಳಸಲಾಗುತ್ತಿದೆ. ಉದಾಹರಣೆಗೆ, ಉತ್ತರಪ್ರದೇಶದಲ್ಲಿ ಪ್ರತಿಭಟನೆಗಳನ್ನು ದಮನ ಮಾಡಲು ಇಡೀ ರಾಜ್ಯದಲ್ಲಿ ಸೆಕ್ಷನ್ 144ನ್ನು ಜಾರಿ ಮಾಡಲಾಗಿತ್ತು.

ಬೆಂಗಳೂರಿನಲ್ಲಿ ಡಿಸೆಂಬರ್ 18ರಂದು ಈ ಸೆಕ್ಷನ್ ಅಡಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ಈ ಮೂಲಕ, ಅದಕ್ಕಿಂತ ಮೊದಲು ಪ್ರತಿಭಟನಾಕಾರರಿಗೆ ನಗರದಲ್ಲಿ ರ್‍ಯಾಲಿಗಳನ್ನು ನಡೆಸಲು ನೀಡಿದ್ದ ಅನುಮತಿಗಳನ್ನು ಪೋಲಿಸರು ರದ್ದು ಮಾಡಿದರು. ಪ್ರತಿಭಟನೆಗೆ ನೆರೆದಿದ್ದ ಹಲವರನ್ನು, ಪ್ರಸಿದ್ಧ ಇತಿಹಾಸಕಾರ ರಾಮಚಂದ್ರ ಗುಹರವರನ್ನೂ ಬಂಧಿಸಲಾಯಿತು ಎಂಬುದನ್ನು ನೆನಪಿಸಿಕೊಳ್ಳಬಹುದು. ಸೆಕ್ಷನ್ 144 ಹೇರುವ ಪೋಲೀಸ್ ಕಮಿಶನರ್ ಅವರ ನಿರ್ಧಾರ ಕಾನೂನಿನ ಅಡಿಯಲ್ಲಿ ವಿಧಿಸಿರುವ ಪರೀಕ್ಷಣೆಯ ಪ್ರಕಾರ ಇಲ್ಲ ಎಂದು ನ್ಯಾಯಾಲಯ ಗಮನಿಸಿತು. ಈ ಆದೇಶ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ತಥ್ಯಗಳನ್ನು ಪ್ರಸ್ತುತಪಡಿಸಲಿಲ್ಲ, ಮತ್ತು ಪೋಲೀಸರು "ಪ್ರತಿಭಟನೆಗಳು ಮತ್ತು ತೊಂದರೆಯ ಸಾಧ್ಯತೆಗಳು ಸಮಾನಾರ್ಥಕ"ಎಂಬಂತೆ ಮಾಡಿದರು ಎಂದು ಅದು ಹೇಳಿದೆ. ವಿಚಾರಣೆಯ ವೇಳೆಯಲ್ಲಿ ಪೀಠದ ಮುಖ್ಯಸ್ಥರಾಗಿದ್ದ ಮುಖ್ಯ ನ್ಯಾಯಾಧೀಶರು ಪ್ರತಿಯೊಂದು ಪ್ರತಿಭಟನೆಯೂ ಶಾಂತಿಯನ್ನು ಕದಡುತ್ತದೆ ಎಂದು ಸರಕಾರ ಹೇಗೆ ತೀರ್ಮಾನಕ್ಕೆ ಬಂದಿದೆ, ಅಥವ ಶಾಂತಿಯುತವಾಗಿ ಸಭೆ ಸೇರಲು ನೀಡಿದ್ದ ಅನುಮತಿಯನ್ನು ರಾತ್ರಿ ಕಳೆಯುವಷ್ಟರಲ್ಲಿ ಹೇಗೆ ರದ್ದು ಮಾಡಲಾಯಿತು ಎಂದು ಪ್ರಶ್ನಿಸಿದರು.

ಈ ಎರಡು ತೀರ್ಪುಗಳು, ಆಳ್ವಿಕೆ ಎಂಬುದು ನಾಗರಿಕರ ಸ್ವಾತಂತ್ರ್ಯವನ್ನು ವಂಚಿಸುವಲ್ಲಿ ಎಲ್ಲ ಸಂಸ್ಥೆಗಳನ್ನು ಚಿತಾಯಿಸುವಂತೆ ಕಾಣುತ್ತಿರುವ ಒಂದು ಉಸಿರುಗಟ್ಟಿಸುವ ವಾತಾವರಣದಲ್ಲಿ ಸ್ವಲ್ಪ ನಿರಾಳವಾಗಿ ಉಸಿರಾಡುವಂತೆ ಮಾಡಿವೆ. ಸರಕಾರವನ್ನು ವಿರೋಧಿಸುವವರ ವಿರುದ್ಧ, ಅಥವ ಸಾಮಾಜಿಕ ಮಾಧ್ಯಮಗಳಲ್ಲಿ ಭಿನ್ನಮತವನ್ನು ವ್ಯಕ್ತಪಡಿಸುತ್ತಿರುವವರ ವಿರುದ್ಧ ಕೇಸುಗಳನ್ನು ಹಾಕದ ದಿನವೇ ಇಲ್ಲ. ಭಾರತೀಯ ದಂಡ ಸಂಹಿತೆಯ ರಾಜದ್ರೋಹದ ಸೆಕ್ಷನ್ 124ಎ, ಯುಎಪಿಎ(ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ), ಎನ್‌ಎಸ್‌ಎ(ರಾಷ್ಟ್ರೀಯ ಸುರಕ್ಷಾ ಕಾಯ್ದೆ) ಇವೆಲ್ಲವೂ ಕೇಂದ್ರ ಸರಕಾರ ಮತ್ತು ಬಿಜೆಪಿ ರಾಜ್ಯ ಸರಕಾರಗಳ ಕೈಗಳಲ್ಲಿ ಅವರ ವಿರುದ್ಧ ಮಾತಾಡುವವರನ್ನು ಹಿಂಸಿಸುವ ಅಸ್ತ್ರಗಳಾಗಿ ಬಿಟ್ಟಿವೆ.

ಕಳೆದ ಕೆಲವು ವಾರಗಳಲ್ಲಿ, ವಿಭಿನ್ನ ರಾಜ್ಯಗಳಲ್ಲಿ ಹತ್ತಾರು ರಾಜದ್ರೋಹದ ಕೇಸುಗಳನ್ನು ಹಾಕಲಾಗಿದೆ. ಅತ್ಯಂತ ಆಘಾತಕಾರಿ ಮೊಕದ್ದಮೆಯೆಂದರೆ ಬೀದರಿನಲ್ಲಿ ಇಬ್ಬರು ಮಹಿಳೆಯರ ಮೇಲೆ– ಒಬ್ಬರು ಮುಖ್ಯೋಪಾಧ್ಯಾಯರು ಮತ್ತು ಒಬ್ಬ ಒಂಬತ್ತು ವರ್ಷದ ವಿದ್ಯಾರ್ಥಿಯ ತಾಯಿಯ ಮೇಲೆ– ಸಿಎಎ ವಿರುದ್ಧ ಒಂದು ಶಾಲಾ ನಾಟಕ ಆಡಿದ್ದಕ್ಕೆ ಹಾಕಿರುವಂತದ್ದು. ಸಿಎಎ ವಿರುದ್ಧ ಮಾತಾಡಿದ್ದಕ್ಕೆ ಅಥವ ಮೋದಿ–ಷಾ ಜೋಡಿಯನ್ನು ಟೀಕಿಸಿದ್ದಕ್ಕೆ ರಾಜದ್ರೋಹದ ಕೇಸುಗಳನ್ನು ಹಾಕುತ್ತಲೇ ಇದ್ದಾರೆ. ಭಿನ್ನಮತವನ್ನು ದಮನ ಮಾಡಲು ರಾಜದ್ರೋಹದ ಪರಿಚ್ಛೇದವನ್ನು ಬಳಸುವುದು ಸಂಪೂರ್ಣವಾಗಿ ಕಾನೂನುಬಾಹಿರವಾಗಿದೆ. ಭಾರತೀಯ ದಂಡಸಂಹಿತೆಯಿಂದ ಇದನ್ನು ತೆಗೆಯಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತ ಬಂದಿದೆ. ಆದರೆ, ಈ ನಡುವೆ, ಸುಪ್ರಿಂ ಕೋರ್ಟ್, ಕೇದಾರನಾಥ ಕೇಸಿನಲ್ಲಿ ತನ್ನದೇ ಸಂವಿಧಾನ ಪೀಠ ನೀಡಿರುವ ಮಾರ್ಗದರ್ಶನಗಳ ಪ್ರಕಾರ ಈ ರಾಜದ್ರೋಹದ ಪರಿಚ್ಛೇದದ ದುರ್ಬಳಕೆಯನ್ನು ನಿಲ್ಲಿಸಲು ಮಧ್ಯಪ್ರವೇಶಿಸಬೇಕು. ಕೇದಾರನಾಥ ಮೊಕದ್ದಮೆಯಲ್ಲಿ ಸುಪ್ರಿಂ ಕೊರ್ಟಿನ ಸಂವಿಧಾನ ಪೀಠ ನೇರ ಹಿಂಸಾಚಾರ ಪ್ರಚೋದನೆ ಮತ್ತು ಸಾರ್ವಜನಿಕ ವ್ಯವಸ್ಥೆಗೆ ಬೆದರಿಕೆ ಇದ್ದಾಗ ಮಾತ್ರವೇ ಇದರ ಬಳಕೆಯನ್ನು ಸಮರ್ಥಿಸಿಕೊಳ್ಳಲು ಸಾಧ್ಯ ಎಂದು ಹೇಳಿತ್ತು.



ಬೆಂಗಳೂರಿನಲ್ಲಿ ಡಿಸೆಂಬರ್ 18ರಂದು ಪ್ರತಿಭಟನಾಕಾರರಿಗೆ ನಗರದಲ್ಲಿ ರ್‍ಯಾಲಿಗಳನ್ನು ನಡೆಸಲು ನೀಡಿದ್ದ ಅನುಮತಿಗಳನ್ನು ಪೋಲಿಸರು ರದ್ದು ಮಾಡಿದರು. ಪ್ರತಿಭಟನೆಗೆ ನೆರೆದಿದ್ದ ಹಲವರನ್ನು, ಪ್ರಸಿದ್ಧ ಇತಿಹಾಸಕಾರ ರಾಮಚಂದ್ರ ಗುಹರವರನ್ನೂ ಬಂಧಿಸಲಾಯಿತು





ಅತ್ಯಂತ ಆಘಾತಕಾರಿ ಮೊಕದ್ದಮೆಯೆಂದರೆ ಬೀದರಿನಲ್ಲಿ ಇಬ್ಬರು ಮಹಿಳೆಯರ ಮೇಲೆ–ಒಬ್ಬರು ಮುಖ್ಯೋಪಾಧ್ಯಾಯರು ಮತ್ತು ಒಬ್ಬ ಒಂಬತ್ತು ವರ್ಷದ ವಿದ್ಯಾರ್ಥಿಯ ತಾಯಿಯ ಮೇಲೆ–ಸಿಎಎ ವಿರುದ್ಧ ಒಂದು ಶಾಲಾ ನಾಟಕ ಆಡಿದ್ದಕ್ಕೆ ಹಾಕಿರುವಂತದ್ದು.

ಶಿಕ್ಷಣ ಮತ್ತು ದೇಶದ ಉಳಿವಿಗಾಗಿ ವಿದ್ಯಾರ್ಥಿ ಚಳುವಳಿ ಬಲಪಡಿಸಿ: ಡಾ. ಪುರುಷೋತ್ತಮ್ ಬಿಳಿಮಲೆ



ಶಿಕ್ಷಣದ ಶುಲ್ಕಗಳು ಇಳಿಯಲಿ– ಸಮಾನ ಗುಣಮಟ್ಟದ ಉಚಿತ ಶಿಕ್ಷಣಕ್ಕಾಗಿ ಎನ್ನುವ ಘೋಷಣೆಯಡಿಯಲ್ಲಿ ಬೆಂಗಳೂರಿನಲ್ಲಿ ಫೆಬ್ರುವರಿ 15 –16 –17ರಂದು ಕೊಂಡಜ್ಜಿ ಬಸಪ್ಪ ಭವನದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯ 15ನೇ ರಾಜ್ಯ ಸಮ್ಮೇಳನ ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಜವಾಹರ್ ಲಾಲ್ ನೆಹರು ವಿಶ್ವವಿದ್ಯಾಲಯ ಜೆಎನ್‌ಯು ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ್ ಬಿಳಿಮಲೆಯವರು ಮಾತನಾಡಿ ಇಂದಿನ ಈ ಸರ್ಕಾರ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ದಲಿತ, ಹಿಂದುಳಿದ ಅಲ್ಪಸಂಖ್ಯಾತ, ಆದಿವಾಸಿ ತಳಸಮುದಾಯಗಳಿಂದ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಕ್ಕೆ ಬರುತ್ತಿರುವವರ ಉನ್ನತ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳಲು ಮುಂದಾಗಿದೆ ಇದರ ವಿರುದ್ಧ ಶಿಕ್ಷಣ ಮತ್ತು ದೇಶದ ಉಳಿವಿಗಾಗಿ ವಿದ್ಯಾರ್ಥಿ ಚಳುವಳಿ ಬಲಪಡಲಿ ಎಂದು ಕರೆ ನೀಡಿದರು. ಇತ್ತೀಚೆಗೆ ದೆಹಲಿಯ ಜೆಎನ್ಯೂ ವಿವಿಯಲ್ಲಿ ಶುಲ್ಕ ಏರಿಕೆಯನ್ನು ವಿರೋಧಿಸಿ, ಹೊಸ ಶಿಕ್ಷಣ ನೀತಿಯ ವಿರುದ್ಧ ನಿರಂತರವಾಗಿ ಹೋರಾಟಗಳು ನಡೆಯುತ್ತಿವೆ. ಇದನ್ನು ಕೇಂದ್ರ ಸರ್ಕಾರದ ಸಹಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಜೆಎನ್ಯು, ಜಾಮೀಯಾ ಮಿಲಿಯಾ ವಿಶ್ವವಿದ್ಯಾಲಯಗಳ ಹಾಸ್ಟೆಲ್, ಗ್ರಂಥಾಲಯಗಳಲ್ಲಿ ಈ ಶಾಂತಿಯುತವಾಗಿ ಅಧ್ಯಯನ ನಿರತ ವಿದ್ಯಾರ್ಥಿಗಳ ಪೊಲೀಸ್ ಪಡೆಗಳು ಮತ್ತು ಖಾಸಗಿ ಗೂಂಡಾ ಪಡೆಗಳನ್ನು ಕಳುಹಿಸಿ ದಾಳಿ ನಡೆಸಲಾಗಿದೆ ಎಂದು ವಿವರಿಸಿದರು.

ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್ ಗೋಪಾಲಗೌಡ ಮಾತನಾಡಿ ಶಿಕ್ಷಣವು ಸಂವಿಧಾನಬದ್ದವಾಗಿ ಎಲ್ಲರಿಗೂ ಸಮಾನವಾಗಿರಬೇಕೆಂದು ದೇಶದ ಸ್ವಾತಂತ್ರ್ಯ ಚಳುವಳಿಯ ಆಶಯವಾಗಿತ್ತು. ಆದರೆ ಇಂದು ಶಿಕ್ಷಣವನ್ನು ವ್ಯಾಪಾರೀಕರಣದ ಸರಕಾಗಿ ಮಾಡಿ ಬಡವರನ್ನು ಶಿಕ್ಷಣದಿಂದ ವಂಚಿಸುವ ಹುನ್ನಾರ ನಡೆಯುತ್ತಿದೆ ಇದರ ವಿರುದ್ಧ ವಿದ್ಯಾರ್ಥಿ ಚಳುವಳಿಗಳು ಬಲ ಪಡಬೇಕೆಂದು ಇದಕ್ಕಾಗಿ ಅಧ್ಯಯನದ ಜೊತೆಗೆ ನ್ಯಾಯಾಂಗದ ಹೋರಾಟವು ಕೈಗೊಳ್ಳಬೇಕೆಂದು ಕರೆ ನೀಡಿದರು. ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಎಸ್‌ಎಫ್‌ಐ ಅಖಿಲ ಭಾರತ ಜಂಟಿ ಕಾರ್ಯದರ್ಶಿ ನಿತೀಶ್ ನಾರಾಯಣ್ ಮಾತನಾಡಿ ದೇಶದ ಶಿಕ್ಷಣ ವ್ಯವಸ್ಥೆಯನ್ನು ಬಂಡವಾಳಶಾಹಿಗಳ ಕಪಿಮುಷ್ಟಿಗೆ ಒಪ್ಪಿಸಲು ಶಿಕ್ಷಣ ವ್ಯವಸ್ಥೆಯಲ್ಲಿ ವಿದೇಶಿ ನೇರ ಬಂಡವಾಳ ಎಫ್ಡಿಐ ಹೂಡಿಕೆಗೆ ಅವಕಾಶ ಮಾಡಿಕೊಡಲು ಕೇಂದ್ರ ಸರ್ಕಾರ ಮುಂದಾಗಿದೆ ಇದರಿಂದಾಗಿ ಮುಂದೆ ಶಿಕ್ಷಣ ಆಳುವವರ್ಗಗಳ ಅದನ್ನು ಕಾಯುವ ಅಸ್ತ್ರವಾಗಿಸುವುದು ಇದರ ಹಿಂದಿನ ಉದ್ದೇಶವಾಗಿದೆ ಆದ್ದರಿಂದ ವೈಜ್ಞಾನಿಕ ವೈಚಾರಿಕ ಸಮಾನ ಗುಣಮಟ್ಟದ ಉಚಿತ ಶಿಕ್ಷಣಕ್ಕಾಗಿ ಕ್ಯಾಂಪಸ್ಸುಗಳಲ್ಲಿ ಸಂಘಟನೆಯನ್ನು ಬಲಪಡಿಸಬೇಕೆಂದು ಕರೆ ನೀಡಿದರು ಉದ್ಘಾಟನ ಸಮಾರಂಭದ ವೇದಿಕೆಯಲ್ಲಿ ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷರಾದ ವಿ.ಪಿ.ಸಾನೂ, ಉಪಸ್ಥಿತರಿದ್ದರು. ಪ್ರಸ್ತಾವಿಕವಾಗಿ ಕಾಂ. ಗುರುರಾಜ್ ದೇಸಾಯಿ ಮಾತನಾಡಿದರು ಅಧ್ಯಕ್ಷತೆಯನ್ನು ವಿ. ಅಂಬರೀಶ್ ವಹಿಸಿದ್ದರು ಸ್ವಾಗತವನ್ನು ಕೆ.ವಾಸುದೇವರೆಡ್ಡಿ ಕೋರಿದರು, ಅಮರೇಶ ಕಡಗದ ಕಾರ್ಯಕ್ರಮ ನಿರ್ವಹಣೆಯನ್ನು ಮಾಡಿದರು.

ಮೂರು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷರಾದ ಬಿಪಿ ಸಾನು ಮಾತನಾಡಿದರು ಪ್ರಸ್ತುತ ಶೈಕ್ಷಣಿಕ ರಾಜಕೀಯ ಬೆಳವಣಿಗೆಗಳನ್ನು ಹಿಮ್ಮೆಟ್ಟಿಸಲು ಸಂಘಟನೆಯನ್ನು ಘಟಕ ಮಟ್ಟದಿಂದ ಸೈದ್ಧಾಂತಿಕ, ಸಂಘಟನಾತ್ಮಕವಾಗಿ ಸಂಘಟಿಸಲು ಈ ಸಮ್ಮೇಳನದಲ್ಲಿ ಭಾಗವಹಿಸಿರುವ ಪ್ರತಿನಿಧಿಗಳು ಚರ್ಚಿಸಬೇಕೆಂದು ಮಾರ್ಗದರ್ಶನ ಮಾಡಿದರು.

ಸಮ್ಮೇಳನದ ಎರಡನೇ ದಿನ ಪೌರತ್ವ (ತಿದ್ದುಪಡಿ) ಕಾಯ್ದೆ ಸಿಎಎ, ಎನ್.ಆರ್.ಸಿ, ಎನ್.ಪಿ.ಆರ್. ವಿರುದ್ಧ ವಿಚಾರ ಸಂಕಿರಣವನ್ನು ಎಸ್‌ಎಫ್‌ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮಯೂಕ್ ಬಿಸ್ವಾಸ್ ಉದ್ಘಾಟಿಸಿ ಮಾತನಾಡಿ ಪೌರತ್ವ ತಿದ್ದುಪಡಿ ಕಾಯ್ದೆಯ ದೇಶದ ದೇಶದ ವಾಸ್ತವಿಕ ಸಮಸ್ಯೆಗಳಾದ ಆರ್ಥಿಕ ಕುಸಿತ, ಏರುತ್ತಲೇ ಇರುವ ನಿರುದ್ಯೋಗ, ರೈತರ ಆತ್ಮಹತ್ಯೆ ಮಹಿಳೆಯರು ಅಲ್ಪಸಂಖ್ಯಾತರು, ಆದಿವಾಸಿಗಳ ಮೇಲಿನ ದಾಳಿಯನ್ನು ಮರೆಮಾಚಲು ಕೋಮುವಾದಿ ಬಿಜೆಪಿ ಸರ್ಕಾರ ಸಂವಿಧಾನ ವಿರೋಧಿಯಾದ ಜಾತ್ಯತೀತ ವಿರೋಧಿಯಾದ ಪೌರತ್ವ ಕಾಯ್ದೆಯನ್ನು ಮುನ್ನೆಲೆಗೆ ಎಂದು ಆರೋಪಿಸಿದರು ಇದರಿಂದ ದೇಶದ ಐಕ್ಯತೆ ಮತ್ತು ಸಂವಿಧಾನಕ್ಕೆ ಅದಕ್ಕೆ ಯಾಗುತ್ತಿದೆ ಇದರ ವಿರುದ್ಧ ಎಡ ಪ್ರಗತಿಪರ ಜಾತ್ಯತೀತ ಶಕ್ತಿಗಳು ಒಂದಾಗಿ ದೇಶವನ್ನು ಉಳಿಸಬೇಕಾದರೆ ವಿದ್ಯಾರ್ಥಿಗಳು ಪ್ರಮುಖ ಪಾತ್ರವನ್ನು ಎನ್ನುವುದಕ್ಕೆ ವಿವಿಧ ದೇಶಗಳ ವಿಮೋಚನಾ ಚಳುವಳಿಗಳು ಸಾಕ್ಷಿಯಾಗಿದೆ ಎಂದು ತಿಳಿಸಿದರು ಈ ವಿಚಾರ ಸಂಕಿರಣದಲ್ಲಿ ಕರ್ನಾಟಕ ರಾಜ್ಯದ ಎಡ ಪ್ರಗತಿಪರ, ಜಾತ್ಯಾತೀತ ವಿದ್ಯಾರ್ಥಿ ಸಂಘಟನೆಗಳಾದ ಎಸ್‌ಎಫ್‌ಐ, ಎಐಎಸ್‌ಎಫ್,



ಎಐಎಸ್‌ಎ, ಕೆವಿಎಸ್, ಎನ್‌ಎಸ್ಯೂಐ, ಎಐಡಿಎಸ್‌ಓ, ಎಎಸ್‌ಎ, ವಿಜೆಡಿಎಸ್ ಸಂಘಟನೆಗಳ ರಾಜ್ಯ ಮುಖಂಡರು ಭಾಗವಹಿಸಿದ್ದರು. ಈ ಸಂಕಿರಣದ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅಂಬರೀಶ್ ವಹಿಸಿದ್ದರು.

ಸಮ್ಮೇಳನದಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳು:

ತಿದ್ದುಪಡಿ ಕಾಯ್ದೆ ವಿರೋಧಿಸಿ ರಾಜ್ಯ ವ್ಯಾಪ್ತಿ ಪ್ರಚಾರಾಂದೋಲನವನ್ನು ಕೈಗೊಳ್ಳುವುದು ಸರ್ಕಾರಿ ಶಾಲಾ ಕಾಲೇಜು ಹಾಸ್ಟೆಲ್ಗಳ ಮೂಲ ಸೌಕರ್ಯಗಳಿಗಾಗಿ, ಪದವಿಯ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ಟಾಪ್ ಹಾಗೂ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆಗಾಗಿ, ಯೂನಿವರ್ಸಿಟಿ ಮತ್ತು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳು ಜಾರಿಯ ಮೂಲಕ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ, ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯಗಳ ತಡೆಗಾಗಿ ಹೈದ್ರಾಬಾದ್ ಕರ್ನಾಟಕ 371ಜೆ ಕಲಂ ಸಮರ್ಪಕ ಜಾರಿಗಾಗಿ ಶಿಕ್ಷಣಕ್ಕೆ ಬಜೆಟ್ನಲ್ಲಿ 30 ಪರ್ಸೆಂಟ್ ಮೀಸಲಿಡಲು ಇದರ ಶಾಲೆಯ ಮೇಲಿನ ದೇಶದ್ರೋಹಿ ಪ್ರಕರಣ ಕೈಬಿಡಲು ಸಾಹಿತಿ ಸಿರಾಜ್ ಬಿಸರಳ್ಳಿ ಕವನದ ಮೇಲೆ ಎಫ್‌ಐಆರ್ ದಾಖಲು ಖಂಡಿಸಿ ಇನ್ನೂ ಮುಂತಾದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನೂತನ ರಾಜ್ಯ ಸಮಿತಿ ಆಯ್ಕೆ:

45 ಜನರ ಹೊಸ ರಾಜ್ಯ ಸಮಿತಿ, (15 ಖಾಲಿ) 13 ಜನರ ರಾಜ್ಯ ಪದಾಧಿಕಾರಿಗಳ ಸಮಿತಿಯನ್ನು ಪ್ರಜಾಸತ್ತಾತ್ಮಕವಾಗಿ ಸರ್ವಾನುಮತದಿಂದ ಸಮ್ಮೇಳನದಲ್ಲಿ ಆಯ್ಕೆ ಮಾಡಲಾಯಿತು. ನೂತನ ಸಮಿತಿಯ ರಾಜ್ಯಾಧ್ಯಕ್ಷರಾಗಿ ಕಾಂ. ಅಮರೇಶ್ ಕಡಗದ, ರಾಜ್ಯ ಕಾರ್ಯದರ್ಶಿಯಾಗಿ ಕಾ. ಕೆ. ವಾಸುದೇವರೆಡ್ಡಿ, ಆಯ್ಕೆಯಾಗಿದ್ದಾರೆ. ರಾಜ್ಯ ಉಪಾಧ್ಯಕ್ಷರು ಕಾಂ. ಆರ್.ಎನ್ ಗಾಯತ್ರಿ, ದಿಲೀಪ್ ಶೆಟ್ಟಿ, ಶಿವಕುಮಾರ್ ಮ್ಯಾಗಳಮನಿ, ಜಂಟಿ ಕಾರ್ಯದರ್ಶಿಗಳಾಗಿ ಭೀಮನ ಗೌಡ, ಎನ್.ಶಿವಪ್ಪ, ಗ್ಯಾನೇಶ್ ಕಡಗದ್, ಪದಾಧಿಕಾರಿ ಸಮಿತಿ ಸದಸ್ಯರಾಗಿ ರಮೇಶ್ ವೀರಾಪುರ, ಜ್ಯೋತಿ ದೊಡ್ಡಮನಿ, ಸೋಮಶೇಖರ್ ಆಯ್ಕೆಯಾದರು. ಈ ಸಮ್ಮೇಳನದಲ್ಲಿ ಕಾಂ. ವಿ. ಅಂಬರೀಶ್, ಗುರುರಾಜ್ ದೇಸಾಯಿ, ಕಾಂ. ಶಬ್ಬೀರ್, ಕಾಂ. ಮಾಧುರಿ ಬೋಳಾರ್, ಕಾ. ಚಿಕ್ಕರಾಜು, ಕಾ. ಆಶಾ, ಸಿ. ಅಮರೇಶ್, ಹನುಮಂತ ದುರ್ಗಾದ್, ಸುಭಾಷ್, ವಸಂತ್ ಕಲಾಲ್, ಬಸವರಾಜ, ರಾಜ್ಯ ಸಮಿತಿಯಿಂದ ಬಿಡುಗಡೆಗೊಂಡರು. ಸಮ್ಮೇಳನದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಎಸ್‌ಎಫ್‌ಐ 50 ಆಚರಣಾ ಸಮಿತಿ ಕಾರ್ಯಾಧ್ಯಕ್ಷರು ಕಾಂ. ಕೆ.ಎಸ್.ಲಕ್ಷ್ಮೀ ಮಾತನಾಡಿದರು. ಸಮ್ಮೇಳನದಲ್ಲಿ 221 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ವರದಿ : ಕೆ. ವಾಸುದೇವರೆಡ್ಡಿ





ರಾಜ್ಯ ಕಾರ್ಯದರ್ಶಿ ಕಾ. ಕೆ. ವಾಸುದೇವರೆಡ್ಡಿ



ರಾಜ್ಯಾಧ್ಯಕ್ಷರು ಕಾಂ. ಅಮರೇಶ್ ಕಡಗದ



ಮಾದರಿ ಕೃಷಿ ಭೂಮಿ ಗುತ್ತಿಗೆ ಕಾನೂನು 2016
ಕರ್ನಾಟಕಕ್ಕೆ ಬೇಡ–ರೈತ ಸಂಘಗಳ ದುಂಡು ಮೇಜಿನ ಸಭೆ ಕರೆ

ವರದಿ: ಟಿ ಯಶವಂತ

ರೈತಾಪಿ ಕೃಷಿಯನ್ನು ನಾಶಮಾಡಿ ಇಡೀ ದೇಶದ ಕೃಷಿ ರಂಗವನ್ನು ಕಾರ್ಪೊರೇಟ್ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ವಹಿಸುವ ದುರುದ್ದೇಶದ ಮಾದರಿ ಕೃಷಿ ಭೂಮಿ ಗುತ್ತಿಗೆ ಕಾನೂನು–2016 ಅನ್ನು ರೈತ ಸಮುದಾಯ ತಿರಸ್ಕರಿಸಬೇಕೆಂದು ರೈತ ಸಂಘಗಳು ಒಮ್ಮತದ ಕರೆ ನೀಡಿವೆ.

ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಯಾವುದೇ ಕಾರಣಕ್ಕೂ ಇಂತಹ ಕಾನೂನುಗಳನ್ನು ಜಾರಿಗೆ ತರುವ ಪ್ರಯತ್ನ ಮಾಡಬಾರದು ಎಂದು ರಾಜ್ಯ ಸರ್ಕಾರವನ್ನು ಎಚ್ಚರಿಸಲು ಫೆ.27 ರಂದು ರಾಜ್ಯಾದ್ಯಂತ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರಸ್ತಾಪಿತ ತಿದ್ದುಪಡಿ ಕಾಯ್ದೆ ಪ್ರತಿ ಸುಟ್ಟು ಪ್ರತಿಭಟಿಸಲು ರೈತಾಪಿ ಸಮುದಾಯಕ್ಕೆ ಕರೆಯನ್ನು ಸಹ ನೀಡಿವೆ.

ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ವತಿಯಿಂದ ಬೆಂಗಳೂರಿನ ಎಸ್‌ಸಿಎಂ ಹೌಸ್ ನಲ್ಲಿ ನಡೆದ ಕೃಷಿ ಭೂಮಿಯನ್ನು ಕಂಪನಿಗಳಿಗೆ ಗುತ್ತಿಗೆ ನೀಡುವ ಕರ್ನಾಟಕ ರಾಜ್ಯ ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ಪರಿಣಾಮಗಳ ಕುರಿತ ದುಂಡು ಮೇಜಿನ ಸಭೆಯಲ್ಲಿ ರಾಜ್ಯದಲ್ಲಿ ಕ್ರಿಯಾಶೀಲವಾಗಿರುವ ಬಹುತೇಕ ರೈತ ಸಂಘಗಳ ನಾಯಕರು ರಾಜ್ಯದ ಬೀಳು ಭೂಮಿ ಮಾತ್ರವಲ್ಲ; ಇಡೀ ರೈತರ ಎಲ್ಲಾ ಹಿಡುವಳಿ ಭೂಮಿಯನ್ನು ಕಂಪನಿಗಳ ವಶಕ್ಕೆ ವರ್ಗಾಯಿಸಿವ ಸಾಧನವಾಗಿ ಈ ತಿದ್ದುಪಡಿ ಕಾನೂನುಗಳು ಬಳಕೆ ಆಗುತ್ತವೆ ಎಂದು ತೀವ್ರವಾಗಿ ಆತಂಕವನ್ನು ವ್ಯಕ್ತಪಡಿಸಿದರು.

ದುಂಡು ಮೇಜಿನ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತಾನಾಡಿದ ಕೆಪಿಆರ್ ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಯು ಬಸವರಾಜು ಗೇಣಿದಾರರ ಹಿತ ರಕ್ಷಣೆ ಹಾಗೂ ಬೀಳು ಭೂಮಿಯನ್ನು ಕೃಷಿಗೆ ಒಳಪಡಿಸಿ ಕೃಷಿ ರಂಗದ ಬೆಳವಣಿಗೆ ಸಾಧಿಸುವ ಉದ್ದೇಶದ ಹೆಸರಿನಲ್ಲಿ ಬರುತ್ತಿರುವ ಕಾಯ್ದೆ ಕೃಷಿ ಭೂಮಿಯನ್ನು ಕಂಪನಿಗಳು ಗುತ್ತಿಗೆ ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಇದು ಕ್ರಮೇಣ ಕೃಷಿ ಭೂಮಿಯನ್ನು ಕಂಪನಿಗಳ ವಶಕ್ಕೆ ನೀಡಿ ಇಡೀ ರೈತ ಸಮುದಾಯವನ್ನು ದಿವಾಳಿ ಮಾಡಲಿದೆ. ಕೃಷಿ ಬಿಕ್ಕಟ್ಟಿನಿಂದ ನರಳುತ್ತಿರುವ ರೈತರಿಂದ ಕೃಷಿ ಭೂಮಿ ಕಿತ್ತು ಕಂಪನಿಗಳಿಗೆ ವರ್ಗಾಯಿಸುವ ದುರುದ್ದೇಶ ಈ ಕಾಯ್ದೆಯಲ್ಲಿ ಅಡಗಿದೆ. ಇದು ಹಸುವಿನ ವೇಷದ ಹೆಬ್ಬುಲಿ ಎಂದು ವಿವರಿಸಿ ಚರ್ಚೆಗೆ ಚಾಲನೆ ನೀಡಿದರು. ನಂತರ ಮಾತಾನಾಡಿದ ಎಐಕೆಎಸ್ ನ ಅಖಿಲ ಭಾರತ ಉಪಾಧ್ಯಕ್ಷ ಕೆ ವರದರಾಜನ್ ರವರು, ಹಿಂದೆ ಎಲ್ಲಾ ಸರ್ಕಾರಗಳು ಪ್ರತಿಭಟನೆಗಳಿಗೆ ಸ್ವಲ್ಪವಾದರೂ ಮಣಿಯುತ್ತಿದ್ದವು. ಆದರೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರತಿಭಟನೆ ಮಾಡಿದಷ್ಟೂ ಸೇಡಿನ ರೀತಿ ತನ್ನ ಜನವಿರೋಧಿ ಕ್ರಮಗಳನ್ನು ಹೆಚ್ಚಿಸುತ್ತಿದೆ. ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋತ ಸೇಡಿಗಾಗಿ ಅಡುಗೆ ಅನಿಲದ ಬೆಲೆಯನ್ನು ಪ್ರತಿ ಸಿಲಿಂಡರ್ ಗೆ 149 ರೂ. ನಷ್ಟು ಹೆಚ್ಚಿಸಿದೆ. ಜನಾಭಿಪ್ರಾಯ ವನ್ನು ಸರ್ವಾಧಿಕಾರಿ ಕ್ರಮಗಳ ಮೂಲಕ ಹತ್ತಿಕ್ಕುತ್ತಿದೆ. ಇದರ ವಿರುದ್ಧ ಒಗ್ಗಟ್ಟಿನ ಹೋರಾಟ ಅತಿ ಮುಖ್ಯ. ಕೃಷಿ ರಂಗದ ರಕ್ಷಣೆಯಲ್ಲೇ ದೇಶದ ರಕ್ಷಣೆ ಅಡಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ **(KRRS)** ಗೌರವ ಅಧ್ಯಕ್ಷರಾದ ಚಾಮರಾಸ ಪಾಟೀಲ್ ರವರು ಸತತ ನಷ್ಟ ಅನುಭವಿಸಿ ಬೇಸತ್ತಿರುವ ರೈತರು ಕಂಪನಿಗಳಿಗೆ ಗುತ್ತಿಗೆಗೆ ಕೊಟ್ಟರೆ ಆದಾಯ ಖಾತರಿ ಎಂದು ತಿಳಿಯುವ ಅಪಾಯ ಇದೆ. ಇಂತಹ ಒಂದು ಮನಸ್ಥಿತಿಯನ್ನು ಸರ್ಕಾರಗಳು ತಮ್ಮ ರೈತ ವಿರೋಧಿ ಧೋರಣೆಗಳ ಮೂಲಕ ಹುಟ್ಟು ಹಾಕಿವೆ. ಅದ್ದರಿಂದ ಈ ಕಾಯ್ದೆಯ ಅಂಶಗಳನ್ನು ಗ್ರಾಮ ಮಟ್ಟದಲ್ಲಿ ವ್ಯಾಪಕವಾಗಿ ಪ್ರಚಾರ ನಡೆಸುವುದು ಅಗತ್ಯ. ಇಂತಹ ಮಹತ್ವದ ವಿಷಯದ ಬಗ್ಗೆ ಗಮನ ಸೆಳೆಯುತ್ತಿರುವ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಅಭಿನಂದನೆಗಳು ಎಂದರು. ಎಎಸ್‌ಹೆಚ್‌ಎ ಸಂಘಟನೆಯ ಕವಿತಾ ಕುರುಗಂಟೆ ರವರು, ಇವತ್ತು ಚರ್ಚಿಸುತ್ತಿರುವ ಕಾಯ್ದೆ ಅಲ್ಲದೆ ಇನ್ನೂ ಕೆಲವು ಕಾಯ್ದೆಗಳು ಕೃಷಿ ಭೂಮಿ ಕಿತ್ತುಕೊಳ್ಳುವ ಉದ್ದೇಶವನ್ನು ಹೊಂದಿವೆ. ಇಡೀ ದೇಶದ ರೈತರ ಪ್ರತಿರೋಧದ ಕಾರಣದಿಂದ ಕೇಂದ್ರ ಸರ್ಕಾರ ಭೂ ಸ್ವಾಧೀನ ಸುಗ್ರೀವಾಜ್ಞೆಯನ್ನು ವಾಪಸ್ಸು ಪಡೆದರೂ, ಅದೇ ರೀತಿಯ ಕಾನೂನು ಕರ್ನಾಟಕದಲ್ಲಿ ಈಗ ಜಾರಿಯಲ್ಲಿದೆ. ಈ ಕಾನೂನು ಜೊತೆ ಮಾದರಿ ಕೃಷಿ ಗುತ್ತಿಗೆ ಕಾನೂನು 2016 ಸಹ ಕರ್ನಾಟಕದಲ್ಲಿ ಜಾರಿಗೆ ಬಂದರೆ ಕೃಷಿ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸವ ಪ್ರಕ್ರಿಯೆ ವೇಗವನ್ನು ಪಡೆದುಕೊಳ್ಳಲಿದೆ. ಕೇರಳದ ಎಲ್‌ಡಿಎಫ್ ಸರ್ಕಾರ ಬೀಳು ಭೂಮಿಯನ್ನು ಮಹಿಳಾ ಸ್ವ ಸಹಾಯ ಸಂಘಗಳ ಮೂಲಕ ಯಶಸ್ವಿಯಾಗಿ ಕೃಷಿ ನಡೆಸುತ್ತಿದೆ. ಈ ಅನುಭವವನ್ನು ನಾವು ಗಮನದಲ್ಲಿಟ್ಟುಕೊಂಡು ರೈತರ ಸ್ವಾಧೀನದಲ್ಲೇ ಕೃಷಿ ಭೂಮಿ ಉಳಿಯುವಂತೆ ಹೋರಾಟ ರೂಪಿಸಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್ ರವರು ಆಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಭೇಟಿ, ಕೃಷಿ ರಂಗದಲ್ಲಿ ಅಮೆರಿಕ ಕಂಪನಿ ಪ್ರವೇಶಕ್ಕೆ ದಾರಿ ಮಾಡಿಕೊಡುವ ಉದ್ದೇಶವನ್ನು ಹೊಂದಿದೆ. ನಮ್ಮ ದೇಶದ ಹೈನುಗಾರಿಕೆ, ರೇಷ್ಮೆ, ಕಬ್ಬು ಮುಂತಾದ ಕೃಷಿಗೆ ಭಾರಿ ಪೆಟ್ಟು ಬೀಳಲಿದೆ. ಈಗಾಗಲೇ ಪೆಪ್ಸಿ ಕಂಪನಿ ಎರಡು ಲಕ್ಷ ಎಕರೆ ಭೂಮಿಯನ್ನು ಗುತ್ತಿಗೆ ಪಡೆದಿದೆ. ರಾಜ್ಯದ 60 ತಾಲ್ಲೂಕುಗಳಲ್ಲಿ ಅದಾನಿ, ಅಂಬಾನಿ, ಜಿಂದಾಲ್ ಮುಂತಾದ ಕಂಪನಿಗಳ ಸೋಲಾರ್ ಘಟಕ ದ ಹೆಸರಿನಲ್ಲಿ ಗುತ್ತಿಗೆಗೆ ಭೂಮಿ ಪಡೆದಿದೆ. ಇಷ್ಟು ಸಾಲದು ಎಂದು ರಾಜ್ಯದಲ್ಲಿ 22 ಲಕ್ಷ ಬೀಳು ಭೂಮಿಯನ್ನು ಕಂಪನಿಗಳಿಗೆ ನೀಡಲು ಗುರುತಿಸಿದೆ. ಇವು ದಾಖಲೆಗಳಲ್ಲಿ ಬೀಳು ಎಂದಿದ್ದರೂ ವಾಸ್ತವವಾಗಿ ರೈತರು ಬೇಸಾಯ ಮಾಡುತ್ತಿರುವ ಭೂಮಿಗಳಾಗಿವೆ ಎಂದು ಹೇಳಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ರವರು ನಮ್ಮ ದೇಶದ ಮಣ್ಣು ಅಮೂಲ್ಯವಾಗಿದೆ. ಅತ್ಯಂತ ಫಲವತ್ತತೆಯಿಂದ ಕೂಡಿದೆ. ವರ್ಷಪೂರ್ತಿ ಬೇಸಾಯ ಮಾಡುವ ಅವಕಾಶ ಈ ನೆಲಕ್ಕಿದೆ. ಅದ್ದರಿಂದಲೇ ಬಹು ರಾಷ್ಟ್ರೀಯ ಕಂಪನಿಗಳ ಕಣ್ಣು ಬಿದ್ದಿದೆ. ಕೃಷಿಕರಿಂದ ಕಿತ್ತುಕೊಂಡು ಲೂಟಿಕೋರರಿಗೆ ಭೂಮಿ ಕೊಡುವ ಹುನ್ನಾರ ಗ್ರಾಮೀಣ ನಿರುದ್ಯೋಗ, ವಲಸೆ ಹಾಗೂ ಹಸಿವನ್ನು ಹೆಚ್ಚಿಸುತ್ತದೆ. ಇದು ನಿಜವಾದ ದೇಶದ್ರೋಹ ಎಂದು ಅಭಿಪ್ರಾಯ ಪಟ್ಟರು.

ಎಐಕೆಎಸ್ ನ ಅಖಿಲ ಭಾರತ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ರವರು ಮಾತಾನಾಡಿ, ದೇಶದಲ್ಲಿ ಕೃಷಿಯು ಗೇಣಿದಾರರಿಂದ ನಡೆಯುತ್ತಿರುವ ಪ್ರಮಾಣದಲ್ಲಿ ಏರಿಕೆ ಕಾಣುತ್ತಿದೆ. ಈ ಹಿನ್ನಲೆಯಲ್ಲಿ ಗೇಣಿದಾರ ರೈತರ ಹಿತರಕ್ಷಣೆಗಾಗಿ ನಡೆದ ಹೋರಾಟದ ಫಲವಾಗಿ ಆಂದ್ರಪ್ರದೇಶದಲ್ಲಿ 2011 ರಲ್ಲಿ ಗೇಣಿದಾರರನ್ನು ಪಹಣಿಯಲ್ಲಿ ನೊಂದಾಯಿಸುವ ಕಾನೂನು ಬಂದಿದೆ. ಅದೇ ರೀತಿ ಒರಿಸ್ಸಾ, ತೆಲಂಗಾಣ ದಲ್ಲಿ ಸಹ ಕೃಷಿ ಸೌಲಭ್ಯಗಳನ್ನು ಗೇಣಿದಾರರು ಪಡೆಯಲು ಸಾಧ್ಯವಾಗಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 14.5 ಕೋಟಿ ರೈತರಿಗೆ ವಾರ್ಷಿಕ ಆರು ಸಾವಿರ ರೂ. ನೀಡುವುದಾಗಿ ನರೇಂದ್ರ ಮೋದಿ ರವರು ಘೋಷಿಸಿದ್ದರು. ಶೇಕಡಾ 75 ರಷ್ಟು ಕುಟುಂಬಗಳಿಗೆ ಒಂದು ಕಂತು ಸಹ ಬಂದಿಲ್ಲ. ಕೇವಲ ಶೇಕಡಾ 25 ರೈತರಿಗೆ ಮಾತ್ರ ಕೆಲವು ಕಂತುಗಳ ಹಣ ಬಂದಿದೆ. ಭಾರತದಲ್ಲಿ ಗೇಣಿದಾರರಿಂದ ಹೆಚ್ಚಿನ ಪ್ರಮಾಣದ ಕೃಷಿ ನಡೆಯುತ್ತಿರುವುದರಿಂದಲೇ ಪಿಎಂ ಕಿಸಾನ್ ನಂತಹ ಯೋಜನೆಗಳು ಫಲಾನುಭವಿಗಳನ್ನು ಪೂರ್ಣವಾಗಿ ತಲುಪುವುದಿಲ್ಲ. ಕೇಂದ್ರ ಬಜೆಟ್ ರೈತ ವಿರೋಧಿ ಯಾಗಿದ್ದು ಗ್ರಾಮೀಣಾಭಿವೃದ್ಧಿ ಗೆ ಸಾಮಾಜಿಕ ಸುರಕ್ಷಾ ಕಾರ್ಯಕ್ರಮಗಳಿಗೆ ತೀವ್ರವಾಗಿ ಹಣ ಕಡಿತ ಮಾಡಿದೆ. ಕೃಷಿಯನ್ನು ಕೃಷಿ ಕಾರ್ಪೊರೇಟ್ ಕಂಪನಿಗಳಿಗೆ ವಹಿಸುವ ಕಾರಣದಿಂದಲೇ ಕರ್ನಾಟಕದಲ್ಲಿ ಕೃಷಿ ಉದ್ಯಮ ಅಭಿವೃದ್ಧಿ ನಿಗಮದ ಮೂಲಕ ಎತ್ತಿನ ಗಾಡಿ ಸವಾರಿ, ಮೇಕೆಗೆ ಹುಲ್ಲು ತಿನ್ನಿಸುವುದು ಮುಂತಾದ ಕೃಷಿ ಪ್ರವಾಸೋದ್ಯಮವನ್ನು ಬೆಳೆಸುವ ಪ್ರಸ್ತಾಪವನ್ನು ಹೊಂದಿದೆ. ಸರ್ಕಾರಿ–ಖಾಸಗಿ ಸಹಭಾಗಿತ್ವ ಹಾಗೂ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಎರಡು ಸಾವಿರ ಎಕರೆ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಆದರೆ ಕೇರಳದಲ್ಲಿ ಬೀಳು ಭೂಮಿಯನ್ನು 65 ಸಾವಿರಕ್ಕೂ ಹೆಚ್ಚಿನ ಕೃಷಿ ಸಹಕಾರ ಸಂಘಗಳ ಮೂಲಕ ಮೂರು ಲಕ್ಷ ಮಹಿಳೆಯರು 1.5 ಲಕ್ಷ ಎಕರೆ ಭೂಮಿಯಲ್ಲಿ ನೈಸರ್ಗಿಕವಾಗಿ ಕೃಷಿ ನಡೆಸಿ ವಿಷ ರಹಿತವಾಗಿ ತರಕಾರಿ, ಭತ್ತ ಬೆಳೆಯುತ್ತಿದ್ದಾರೆ ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿ ದುಂಡು ಮೇಜಿನ ಸಭೆಯ ಕಲಾಪಗಳನ್ನು ನಿರ್ವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ ರವರು, 2016 ರ ಮಾದರಿ ಕೃಷಿ ಭೂಮಿ ಗುತ್ತಿಗೆ ಕಾಯ್ದೆಯನ್ನು, ಮಾದರಿ ಒಪ್ಪಂದ ಕೃಷಿ ಕಾಯ್ದೆಯನ್ನು ಕೇಂದ್ರ ಸರ್ಕಾರ ಅಂಗೀಕರಿಸಿ, ಕರ್ನಾಟಕವು ಸೇರಿದಂತೆ ಎಲ್ಲಾ ರಾಜ್ಯಗಳ ಮೇಲೆ ಇದೇ ರೀತಿಯ ಕಾಯ್ದೆಯನ್ನು ಜಾರಿ ಮಾಡುವಂತೆ ಒತ್ತಡ ಹಾಕುತ್ತಿದೆ. ಈ ಒತ್ತಡಕ್ಕೆ ಮಣಿದಿರುವ ಯಡಿಯೂರಪ್ಪ ನೇತೃತ್ವದ ಬಿಜೆಪಿ ರಾಜ್ಯ ಸರ್ಕಾರ ಈ ಅಧಿವೇಶನದಲ್ಲೇ ಕಂಪನಿಗಳಿಗೆ ಕೃಷಿ ಭೂಮಿ ಗುತ್ತಿಗೆ ನೀಡುವ ಕಾಯ್ದೆಯನ್ನು ಅಂಗೀಕರಿಸಲು ಎಲ್ಲಾ ರೀತಿಯ ತಯಾರಿ ನಡೆಸಿದೆ. ರಾಜ್ಯದ ಜನರನ್ನು ಇಂತಹ ರೈತ ವಿರೋಧಿ ಕಾಯ್ದೆ ಕುರಿತು ಗಮನ ಸೆಳೆಯಲು ಫೆ.27 ರ ರಾಜ್ಯಾದ್ಯಂತ ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಎಲ್ಲಾ ರೈತ ಸಂಘಗಳ ಪರವಾಗಿ ವಿನಂತಿಸಿದರು.

ಕಾರ್ಪೊರೇಟ್ ಪರ ಗೇಣಿ ಶಾಸನ ರದ್ದು ಮಾಡಿ, ಬೇಸಾಯಗಾರ ರೈತರ ಪರ ಶಾಸನಗಳನ್ನು ಜಾರಿ ಮಾಡಬೇಕು. ಜೀವ ಪರಿಸರಾತ್ಮಕ ಕೃಷಿಗೆ ನೀಡುವಂತೆ ರೈತ ಹೋರಾಟಗಳನ್ನು ಕಟ್ಟಬೇಕು. ಭೂ ಕೇಂದ್ರೀಕರಣಗಳಿಗೆ ಉತ್ತೇಜನ ಕಾಯ್ದೆಗಳ ವಿರುದ್ಧ ಜನಾಭಿಪ್ರಾಯ ರೂಪಿಸಬೇಕು. ಇದಕ್ಕಾಗಿ ವ್ಯಾಪಕ ಪ್ರಚಾರಾಂದೋಲನ ಹಮ್ಮಿಕೊಳ್ಳಬೇಕೆಂಬ ಧ್ವನಿಗಳು ದುಂಡು ಮೇಜಿನ ಸಭೆಯಲ್ಲಿ ಕೇಳಿ ಬಂದವು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ, ರೈತ ಮಹಿಳಾ ಹಕ್ಕುಗಳ ವೇದಿಕೆಯ ಕವಿತಾ ಶ್ರೀನಿವಾಸ್, ಕರ್ನಾಟಕ ಜನಶಕ್ತಿಯ ಕುಮಾರ್ ಸಮತಲ, ಕರ್ನಾಟಕ ಕಿಸಾನ್ ಸಂಘದ ಡಿ.ಎಚ್. ಪೂಜಾರ್, ಕರ್ನಾಟಕ ರಾಜ್ಯ ರೈತ ಸಂಘದ ಗೋಪಾಲ್, ಹೋರಾಟಗಾರರಾದ ನೂರ್ ಶ್ರೀಧರ್, ಪರಿಸರವಾದಿ ಸಿ. ಯತಿರಾಜ್ ಮುಂತಾದವರು ದುಂಡು ಮೇಜಿನ ಸಭೆಯಲ್ಲಿ ಮಾತಾನಾಡಿದರು. ಈ ಕಾರ್ಯಕ್ರಮ ದ ಸ್ವಾಗತವನ್ನು ಕೆಪಿಆರ್‌ಎಸ್ ರಾಜ್ಯ ಸಮಿತಿ ಸದಸ್ಯ ಟಿ. ಯಶವಂತ ಮಾಡಿದರೆ, ಕೊನೆಯಲ್ಲಿ ಎಲ್ಲರಿಗೂ ಕೆಪಿಆರ್‌ಎಸ್ ರಾಜ್ಯ ಸಹ ಕಾರ್ಯದರ್ಶಿ ಹೆಚ್. ಆರ್. ನವೀನ್ ಕುಮಾರ್ ವಂದಿಸಿದರು.



ಬೈಂದೂರು ತಾಲೂಕಿಗೆ ಕಾರ್ಮಿಕ ನಿರೀಕ್ಷಕರ ಕಚೇರಿ ತೆರೆಯಲು ಆಗ್ರಹ

ಕುಂದಾಪುರ ತಾಲೂಕಿನಿಂದ ಇಪ್ಪತ್ತಾರು ಗ್ರಾಮಗಳು ಪ್ರತ್ಯೇಕ ಗೊಂಡು, ಬೈಂದೂರು ತಾಲೂಕು ಅಸ್ತಿತ್ವಕ್ಕೆ ಬಂದು ಎರಡು ವರ್ಷ ಕಳೆದಿದೆ. ಗ್ರಾಮೀಣ ಪ್ರದೇಶಗಳನ್ನೊಳಗೊಂಡಂತೆ ಬಹುತೇಕ ಕೂಲಿ ಕಾರ್ಮಿಕರು, ಪ್ರಮುಖವಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದಲ್ಲಿ ಸಹಸ್ರಾರು ಕಾರ್ಮಿಕರು ದುಡಿಯುತ್ತಾ, ತಮ್ಮ ಜೀವನವನ್ನು ಕಂಡು ಕೊಂಡಿದ್ದಾರೆ. ಯಾವುದೇ ಸಾಮಾಜಿಕ ಭದ್ರತೆಯಿಲ್ಲದ ಇವರಿಗೆ ಕಾರ್ಮಿಕರ ಸಂಘಟಿತ ಹೋರಾಟದ ಫಲವಾಗಿ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆಗೊಂಡು ಸೆಸ್ ಸಂಗ್ರಹದ ಮೂಲಕ ಸಮಾರು ರೂಪಾಯಿ ಏಳು ಸಾವಿರ ಕೋಟಿಗೂ ಮಿಕ್ಕಿ ಹಣ ಸಂಗ್ರಹಿಸಲಾಗಿದೆ. ಇದರಿಂದಾಗಿ ಸಾಮಾಜಿಕ ಸುರಕ್ಷತೆಗಾಗಿ ಕಾರ್ಮಿಕರಿಗೆ 12 ವಿವಿಧ ಆರ್ಥಿಕ ಸೌಲಭ್ಯ ಕಾರ್ಮಿಕರಿಗೆ ಕೊಡಲಾಗುತ್ತಿದೆ. ಕಾರ್ಮಿಕರಿಗೆ ಕಾರ್ಮಿಕ ಇಲಾಖಾ ಗುರುತಿನ ಚೀಟಿ, ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ಸಹಾಯ ಧನ, ಮದುವೆ ಸಹಾಯ ಧನ, ಪಿಂಚಣಿ, ಮರಣ ಪರಿಹಾರ, ವೈದ್ಯಕೀಯ ಸಹಾಯ ಧನ, ಹೆರಿಗೆ ಸಹಾಯಧನ ಮುಂತಾದ ಸೌಲಭ್ಯ ಪಡೆಯಲು ಅರ್ಜಿಗಾಗಿ ದೂರದ ಕುಂದಾಪುರ ವೃತ್ತ ಕಾರ್ಮಿಕ ನಿರೀಕ್ಷಕರ ಕಚೇರಿಯನ್ನು ಅವಲಂಬಿಸಬೇಕಾಗಿತ್ತು. ಇದೀಗ ಪ್ರತ್ಯೇಕ ಬೈಂದೂರು ತಾಲೂಕು ಅಸ್ತಿತ್ವಕ್ಕೆ ಬಂದಿರುವುದರಿಂದ ಈ ಕೂಡಲೆ ಬೈಂದೂರಿಗೆ ಕಾರ್ಮಿಕ ನಿರೀಕ್ಷಕರ ಕಚೇರಿ ಕಾರ್ಯಾರಂಭ ಮಾಡಬೇಕು ಎಂದು ಬೈಂದೂರು ತಾಲೂಕು ಸಿಐಟಿಯು ಕಾರ್ಮಿಕ ಸಂಘದ ಮುಖಂಡ ವೆಂಕಟೇಶ ಕೋಣಿ ಸರಕಾರವನ್ನು ಈ ಮೂಲಕ ಆಗ್ರಹಿಸಿದ್ದಾರೆ.



ಡಿಎಚ್‌ಎಸ್ ರಾಜ್ಯ ಸಂಚಾಲಕರು ಮನವಿ ಪತ್ರವನ್ನು ಫೆಬ್ರವರಿ 13, 2020 ರಂದು ರಾಷ್ಟ್ರೀಯ ಎಸ್‌ಸಿ ಆಯೋಗ ಅಧ್ಯಕ್ಷರಾದ ರಾಮ್ ಶಂಕರ್ ಕಟೀಲ್ ರವರಿಗೆ ಸಲ್ಲಿಸಿದ್ದರು.

ದೇಶಪ್ರೇಮ ಮತ್ತು ದೇಶದ್ರೋಹ.......... ಪುಟ 6 ರಿಂದ

ವ್ಯವಸ್ಥೆ ಯುರೋಪಿನಲ್ಲಿ ಉದಯಿಸಿ ಬೇರು ಬಿಡಲು ಆರಂಭಿಸಿದಾಗ ಬೆಳೆದು ಬಂದ 'ದೇಶ'ದ ಪರಿಕಲ್ಪನೆ ನಮ್ಮ ಈಗಿನ 'ದೇಶ'ದ ಕಲ್ಪನೆಯನ್ನು ಪ್ರಧಾನವಾಗಿ ರೂಪಿಸುತ್ತಿದೆ. 'ದೇಶ'ವನ್ನು ಆಯಾ ಬಂಡವಾಳಶಾಹಿ ವರ್ಗದ ಪ್ರಭುತ್ವದ ಅಧಿಪತ್ಯದಲ್ಲಿರುವ – ಸ್ವಂತ ಮಾರುಕಟ್ಟೆಯಾಗಿ; ಭೂಮಿ, ಗಣಿ ಮತ್ತಿತರ ಪ್ರಾಕೃತಿಕ ಸಂಪನ್ಮೂಲಗಳು ಹಾಗೂ ಬಂಡವಾಳ ಇತ್ಯಾದಿ ಸೇರಿದ ಒಟ್ಟು ಸಂಪತ್ತು ಆಗಿ;– ನೋಡುವುದು; ಯುದ್ಧ ಅಥವಾ ಇತರ ಆಕ್ರಾಮಕ ಕ್ರಮಗಳಿಂದ ಇತರ ದೇಶಗಳನ್ನು ಅವುಗಳ 'ಮಾರುಕಟ್ಟೆ' ಮತ್ತು 'ಸಂಪತ್ತು'ಗಳನ್ನು ಗೆದ್ದುಕೊಳ್ಳಬೇಕಾದ ಅಧೀನಕ್ಕೊಳಪಡಿಸಬೇಕಾದ ದ್ವೇಷಕ್ಕೆ ಯೋಗ್ಯವಾದವುಗಳಾಗಿ ನೋಡುವುದು – ಆಗ ಬೆಳೆದು ಬಂದ 'ದೇಶ'ದ ಪರಿಕಲ್ಪನೆ. ಯುರೋಪಿನ ಪ್ರಮುಖ 'ದೇಶ'ಗಳು ಜಗತ್ತಿನಾದ್ಯಂತ 'ವಸಾಹತು'ಗಳನ್ನು ಗೆದ್ದುಕೊಳ್ಳಲು ಆರಂಭಿಸಿದ ಮೇಲೆ ಮತ್ತು ವಸಾಹತುಗಳಿಗಾಗಿ ಪೈಪೋಟಿಯ ಭಾಗವಾಗಿ ಮಹಾಯುದ್ಧ ನಡೆದ ಮೇಲಂತೂ ಈ ಕಲ್ಪನೆ ಇನ್ನಷ್ಟು ಗಟ್ಟಿಯಾಯಿತು.

ದೇಶಭಕ್ತಿ ಎಂದರೆ 'ದೇಶ'ದ ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಳನ್ನು ಪ್ರಶ್ನಿಸದಿರುವುದು, ಕಣ್ಣು ಮುಚ್ಚಿ ಎತ್ತಿ ಹಿಡಿಯುವುದು, ಇತರ ದೇಶಗಳನ್ನು ಹಗೆಗಳಂತೆ ಕಂಡು ದ್ವೇಷಿಸುವುದು ಎಂದಾಯಿತು. ದೇಶಭಕ್ತಿ ಎಂದರೆ ದೇಶದ ಆಳುವ ವರ್ಗ, ಅದರ ಪ್ರಭುತ್ವ, ಅದರ ಆಗಿನ ಸರಕಾರ ಇವೆಲ್ಲವನ್ನು ಒಂದೇ ಎಂದು ಬಗೆದು ಅವುಗಳಿಗೆ ಭಯ–ಭಕ್ತಿಯಿಂದ ನಡೆದುಕೊಳ್ಳುವುದು ಎಂದಾಯಿತು. ಫ್ಯಾಸಿಸ್ಟ್ ದೇಶದ ಪರಿಕಲ್ಪನೆ ಇದರ ಪರಾಕಾಷ್ಠೆಯಾಗಿತ್ತು. ಇದರಲ್ಲಿ – ದೇಶ, ಪ್ರಭುತ್ವ, ಸರಕಾರ – ಇವೆಲ್ಲವೂ ಒಬ್ಬ ಸರ್ವಾಧಿಕಾರಿಯಲ್ಲಿ ಮೂರ್ತೀಭವಿಸಿ ಅವನಿಗೆ ಭಯ ಭಕ್ತಿಯಿಂದ ನಡೆದುಕೊಳ್ಳುವುದು ದೇಶಭಕ್ತಿ ಎಂದಾಯಿತು. ವಸಾಹತುಶಾಹಿ–ವಿರೋಧಿ ಚಳುವಳಿಗಳು, ಅಕ್ಟೋಬರ್ ಕ್ರಾಂತಿಯಿಂದಾರಂಭಿಸಿ ಜನತಾ ಪ್ರಜಾಪ್ರಭುತ್ವ ಅಥವಾ ಸಮಾಜವಾದಿ ಪ್ರಭುತ್ವ ಸ್ಥಾಪಿಸಿದ ದೇಶಗಳಲ್ಲಿ ಇದಕ್ಕೆ ತದ್ವಿರುದ್ಧವಾದ ಜನ–ಕೇಂದ್ರಿತ ಮತ್ತು ಮೇಲೆ ಹೇಳಿದ ಪರಿಕಲ್ಪನೆಗೆ ತದ್ವಿರುದ್ಧವಾದ ಪರಿಕಲ್ಪನೆಯನ್ನು ರೂಪಿಸಲಾಯಿತು. ಆದರೆ 1990ರ ದಶಕದಲ್ಲಿ ಇವುಗಳ ಅವನತಿಯೊಂದಿಗೆ ಬಂಡವಾಳಶಾಹಿ ಮತ್ತು ಫ್ಯಾಸಿಸ್ಟ್ 'ದೇಶ'ದ ಮತ್ತು 'ದೇಶಭಕ್ತಿ'ಯ ಪರಿಕಲ್ಪನೆ ಮತ್ತೆ ವ್ಯಾಪಕವಾಗಿ ಮುನ್ನೆಲೆಗೆ ಬಂದಿದೆ.

ಸಂಘಪರಿವಾರ ಈಗ ಹರಡುತ್ತಿರುವ 'ದೇಶಭಕ್ತಿ' ಮತ್ತು ದೇಶದ್ರೋಹ'ದ ಕಲ್ಪನೆಗಳ ಹಿಂದೆ ಊಳಿಗಮಾನ್ಯ ವ್ಯವಸ್ಥೆಯ ಮತ್ತು ಫ್ಯಾಸಿಸ್ಟ್ 'ದೇಶ'ದ ಪರಿಕಲ್ಪನೆಯ ಮಿಶ್ರಣ ಇದೆ. ●

ಸಿರಾಜ್ ಬಿಸರಳ್ಳಿ ಕವಿತಾ ವಾಚನ ಕಾರ್ಯಕ್ರಮ ಎನ್‌ಆರ್‌ಸಿ, ಸಿಎಎ ವಿರೋಧಿಸಿ



ನಿನ್ನ ದಾಖಲೆ ಯಾವಾಗ ನೀಡುತ್ತಿ? ಎಂದು ಕವಿತೆ ಬರೆದು ಪ್ರಭುತ್ವದ ಬಂಧನಕ್ಕೀಡಾಗಿದ್ದ ಜನತೆಯ ಧ್ವನಿಯ ಕವಿ, ಪತ್ರಕರ್ತ ಸಿರಾಜ್ ಬಿಸರಳ್ಳಿ ಅವರ ಕವಿತೆಯನ್ನು ಸಾಮೂಹಿಕವಾಗಿ ವಾಚನ (ಓದುವ) ಕಾರ್ಯಕ್ರಮವನ್ನು ಹಾವೇರಿಯ ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆಸಲಾಯಿತು.

ಡಾ. ಬಿ.ಆರ್ ಅಂಬೇಡ್ಕರ್ ರವರ ಪುತ್ಥಳಿ ಗೆ ಮಾಲಾರ್ಪಣೆ ಮಾಡುವುದರ ಮೂಲಕ ಗೌರವ ಸಲ್ಲಿಸುವ ಮೂಲಕ ಚಾಲನೆ ನೀಡಲಾಯ್ತು.

ಎನ್‌ಆರ್‌ಸಿ ವಿರೋಧಿಸಿ ಅಭಿಪ್ರಾಯ ವ್ಯಕ್ತಪಡಿಸಿದ ಕಾರಣಕ್ಕೆ ರಾಯಚೂರು ಜಿಲ್ಲೆಯ ಡಿಎಸ್‌ಎಸ್ ಮುಖಂಡ ಹನುಮಂತಪ್ಪ ಕಾಕರಗಲ್ ಅವರನ್ನು ಬಂಧಿಸಿರುವುದನ್ನು ಈ ವೇದಿಕೆಯ ಮೂಲಕ ತೀವ್ರವಾಗಿ ಖಂಡಿಸಿತ್ತು.

ನಂತರ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ, ಕೆಸ್‌ಎಂ ರಾಜ್ಯ ಕಾರ್ಯದರ್ಶಿ ಅಕ್ಷತಾ ಕೆ.ಸಿ, ಎಐಎಲ್‌ಯು ಮುಖಂಡರಾದ ಜಿವಿ ಹಿರೇಮಠ ಮಾತನಾಡಿ ಕವಿತಾ ವಾಚನ ಮಾಡಿದರು.

ಈ ಸಂದರ್ಭದಲ್ಲಿ ಡಿಎಸ್‌ಎಸ್ ಹಿರಿಯ ಮುಖಂಡರಾದ ಹೊನ್ನೇಶ್ವರ ತಗಡಿನಮನಿ, ಉಡಚಪ್ಪ ಮಾಳಗಿ, ಅಶೋಕ ಮರೆಣ್ಣವರ, ಲಿಂಗರಾಜ ದಂಡೆಮ್ಮನವರ, ಯುವ ಮುಖಂಡರಾದ ಪ್ರಸನ್ನ ಹಿರೇಮಠ, ವೆಂಕಟೇಶ ಡಿಬಿ, ರಹಮತುಲ್ಲಾ, ಅಬ್ದುಲ್ ಖಾದರ್ ಧಾರವಾಡ, ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆಯ ಮಹಮ್ಮದ್, ಸಾಕ್ಷಿ ಎಸ್.ಜಿ, ಸೈಯದ್ ಉಮರ್, ನಗರ ಸಭಾ ಸದಸ್ಯಾರಾದ ಲಾಲ್ ಸಾಬ್ ಚೋಪದಾರ್, ದಾದಾಫೀರ್ ಚೂಡಿಗಾರ, ಮುಖಂಡರಾದ ಅನ್ವರ್ ಚಿಮಣಿ, ಸಂತೋಷ ಹೆರಕಲ್, ವೆಂಕಟೇಶ ಎಲ್, ಪ್ರತಾಪ್.ಬಿ, ಆನಂದ ಪಿ ಮುಂತಾದವರು ಪಾಲ್ಗೊಂಡಿದ್ದರು. ಬೀದಿ ಬೀದಿಗಳಲಿ, ಸಾಮಾನ್ಯ ಜನ–ಮನಗಳಲ್ಲೂ ಈಗ ಸಿರಾಜ್ ಬಿಸರಳ್ಳಿ ಕಾವ್ಯ ಉಸಿರಾಡುತಿದೆ ಎಂದರು.

ಪ್ರತಿರೋಧದ ಕಥನಗಳು......... ಪುಟ 16 ರಿಂದ

ಅಲ್ಲ ಉಪನ್ಯಾಸಕಿಯರನ್ನೂ ಸಹ ತುಂಬಾ ಕಾಡಿತು. ಇದರ ಜೊತೆಗೆ ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿ ನಿಲಯಗಳ ಸ್ಥಿತಿ ಸಹ ಬಹಳ ಹದಗೆಟ್ಟಿದ್ದು ಅದರ ಬಗೆಗಿನ ಹೋರಾಟಕ್ಕೆ ಸರ್ಕಾರ ಎಚ್ಚೆತ್ತುಕೊಂಡು ಅವುಗಳ ಸ್ಥಿತಿಯನ್ನು ಉತ್ತಮಗೊಳಿಸುವಂತೆ ಮಾಡುವಲ್ಲಿ ವಿದ್ಯಾರ್ಥಿಗಳ ಹೋರಾಟ ದಕ್ಷಿಣ ಕರ್ನಾಟಕದಲ್ಲಿ ಸ್ವಲ್ಪಮಟ್ಟಿಗೆ ಸಫಲವಾಯಿತು.

ಅದಕ್ಕೆ ಇತರ ಸಂಘಟನೆಗಳು ಬೆಂಬಲವನ್ನೂ, ಸರ್ಕಾರಕ್ಕೆ ಈ ಬಗ್ಗೆ ಒತ್ತಡವನ್ನೂ ತಂದಿದ್ದವು. ಈ ಮೇಲಿನ ಸಮಸ್ಯೆಗಳಲ್ಲಿ ಕೆಲವೊಂದನ್ನು ವಿದ್ಯಾರ್ಥಿ ಸಮುದಾಯ ದಿಟ್ಟವಾಗಿ ಎದುರಿಸಿದರೆ, ಕೆಲವು ವ್ಯಕ್ತಿಗಳು ಒಂಟಿಯಾಗಿಯೇ ನಿಂತು ಹೋರಾಡಿ ಗೆಲುವು ಸಾಧಿಸಿದರು. ಸೋಲು–ಗೆಲುವು ಎರಡೂ ರೀತಿಯ ಫಲಿತಾಂಶಗಳನ್ನು ಆ ಘಟ್ಟ ನಮ್ಮೆದುರು ಬಿಚ್ಚಿಟ್ಟಿತು.

ಸಂವಿಧಾನಾತ್ಮಕ ಆವರಣಗಳು ಸಂಕುಚಿತವಾಗುತ್ತಿರುವ ಈ ಸಂದರ್ಭದಲ್ಲಿ ಯುವಜನತೆ ಸಂವಿಧಾನವನ್ನು ಅರ್ಥಮಾಡಿಕೊಂಡು ಅದರ ಆಶಯಗಳನ್ನು ಗೌರವಿಸಿ, ಮೈಗೂಡಿಸಿಕೊಂಡು ದೇಶವನ್ನು ಉನ್ನತ ದೆಶೆಗೆ ತೆಗೆದುಕೊಂಡು ಹೋಗುವ ಜವಾಬ್ದಾರಿಯನ್ನು ಹೊರಬೇಕಾದಂತಹ ಪರಿಸ್ಥಿತಿ ಇದು. ಅನೇಕ ರೀತಿಯ ಹೋರಾಟಗಳು ನಿರಂತರವಾಗಿ ನಡೆಯುತ್ತಿರುವ ಈ ನಾಡಿನಲ್ಲಿ ಮಾನವ ಹಕ್ಕುಗಳ ಹೋರಾಟಗಾರರು, ದಲಿತ, ಮಹಿಳೆ, ಮಕ್ಕಳ, ಪ್ರಕೃತಿಯ ಬಗೆಗಿನ ಹೋರಾಟಗಾರರೂ ಸಹ ಯುವ ಜನತೆಯೊಂದಿಗೆ ಕೈಗೆ ಕೈ, ಭುಜಕ್ಕೆ ಭುಜ ಸೇರಿಸಿ ನಿಂತಿರುವುದು ಸಂತಸದ ವಿಷಯವೇ.

ಈಗಿನ ಕೆಲ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿರುವ ಅನಾವಶ್ಯಕ ದ್ವೇಷಪೂರಿತ ಪ್ರಚೋದನೆ, ಹಲ್ಲೆ ನಡೆಸುವ ವಿಕೃತ ಕ್ರೂರ ಮನೋಭಾವನೆ, ಪ್ರಜಾತಾಂತ್ರಿಕ ಹಾಗೂ ನಾಗರಿಕ ಹಕ್ಕುಗಳ ಬಗ್ಗೆ ಇರುವ ಅಸಡ್ಡೆಯನ್ನು ನೋಡಿದರೆ, ನಮ್ಮ ಯುವಜನತೆಯಲ್ಲಿ ಕಾಲು ಭಾಗ ಅರಿವಿನ/ಜ್ಞಾನದ, ವೈಜ್ಞಾನಿಕ ಮನೋಭಾವದ, ಶಾಂತಿ–ಸಹನೆಗಳ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿರುವುದು ಭಾಸವಾಗುತ್ತದೆ. ಈ ಯುವಜನತೆಗೆ, ಆತ್ಮಾವಲೋಕನ ಮತ್ತು ಸ್ವವಿಮರ್ಶೆ ಮಾಡಿಕೊಂಡು ಜ್ಞಾನದ–ಶಾಂತಿಯ ಮಾರ್ಗವನ್ನು ಹಿಡಿಯಲು ಸ್ವಲ್ಪ ಸಮಯ ಬೇಕಾಗುತ್ತದೆ. ಅದಕ್ಕೆ ಆಶಾದಾಯಕವಾದ ಸಂದರ್ಭವೂ ಒದಗಿಬರುವ ಸೂಚನೆಗಳು ಕಂಡಿವೆ ಕೂಡ.

ಆಸ್ಟ್ರೇಲಿಯಾದ ಕಾಡುಗಳಲ್ಲಿ ಕಾಡ್ಗಿಚ್ಚಿಗಾಹುತಿಯಾಗಿ ಸುಟ್ಟುಹೋದ ಮರಗಳಿಂದ ಸುಂದರವಾದ ಚಿಗುರುಗಳು ಮೊಳೆತಿವೆ! ಅಲ್ಲೀಗ ದಪ್ಪ ದಪ್ಪ ಆಲಿಕಲ್ಲುಗಳ ಮಳೆ! ಅಲ್ಲಿ ತಾಯಿಯ ಮರಣದಿಂದ ಅನಾಥವಾಗಿದ್ದ ಕೋಲಾದ ಮರಿಗಳಿಗೆ, ಅದೇ ಬೆಂಕಿಯಲ್ಲಿ ತನ್ನ ಮರಿಗಳನ್ನು ಕಳೆದುಕೊಂಡ ನರಿಯೊಂದು ಹಾಲುಣಿಸುತ್ತಿರುವುದು ಸೋಜಿಗವಾದರೂ ನಿಜ. ಮರಿಗಳಿಗೆ ಸಿಗುವ ತಾಯಿ ಪ್ರೀತಿ ಹಾಗೂ ನರಿಗೆ ಸಿಗುವ ಆಪ್ಯಾಯಮಾನತೆ ಎರಡೂ ಮೌಲ್ಯಾತೀತ. ಪ್ರಕೃತಿ ತನ್ನ ಭವಿಷ್ಯಕ್ಕಾಗಿ ಇಂತಹ ಪರಿಹಾರಗಳನ್ನೂ, ಪರ್ಯಾಯವನ್ನೂ ಕಂಡುಕೊಳ್ಳುವಾಗ ನಾವೂ ಸಹ ಅದೇ ಸಿದ್ಧಾಂತವನ್ನು ಪಾಲಿಸಬಹುದು. ಪ್ರಕೃತಿಯ ಭಾಗವಾದ ಮಾನವ ಸಂಕುಲ ಅದರಲ್ಲೂ ವಿಚಾರವಂತಿಕೆಯ ಮನೋಬಲ ಹೊಂದಿರುವ ನಮ್ಮ ಮುಕ್ಕಾಲು ಭಾಗ ಯುವಜನತೆ ಆರೋಗ್ಯಕರ ಸಮಾಜವನ್ನು ರೂಪಿಸಿ ಭಾರತವನ್ನು ಸಂವಿಧಾನಾತ್ಮಕವಾಗಿ ಮುನ್ನಡೆಸುವುದರ ಬಗ್ಗೆ ಯಾವುದೇ ಸಂದೇಹವಿಲ್ಲ. ಇಂದಿನ

ಸಂವಿಧಾನಾತ್ಮಕ ವಿದ್ಯಾರ್ಥಿ ಹೋರಾಟಗಳನ್ನು ನೋಡಿ ಬಹುತೇಕ ಭಾರತದ ಪ್ರತಿಯೊಬ್ಬ ಪ್ರಜೆಯೂ ಬಹಿರಂಗವಾಗಿ ಇನ್ನುಳಿದ ಅಲ್ಪಸ್ವಲ್ಪ ಅಂತರಂಗದಿಂದಾದರೂ ಅವರನ್ನು ಬೆಂಬಲಿಸುತ್ತಿರುವುದನ್ನು ನೋಡಿದಾಗ, ಅದು ನಿಸ್ಸಂಶಯಾತ್ಮಕವಾಗಿ, ಸೂಕ್ತ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಗಾಗಿಯೇ ಎನಿಸುತ್ತದೆ.

ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳಿ ಎಂದು ಯುವ ಜನಾಂಗಕ್ಕೆ ಕರೆಕೊಟ್ಟಿದ್ದ ಕುವೆಂಪುರವರು, 'ಚತುರ್ಮುಖ ಬ್ರಹ್ಮನೇ ಬಂದು ಹೇಳಿದರೂ ಯಾವುದನ್ನೂ ಕಣ್ಣುಮುಚ್ಚಿ ನಂಬಬೇಡಿ, ಅರ್ಥವಿಲ್ಲದ ಯಾವುದೇ ನಿಯಮವನ್ನೂ ಗೋಣು ಆಡಿಸಿ ಒಪ್ಪಬೇಡಿ, ಅರೆಬೆಂದ ಸತ್ಯಗಳೆದುರು ಹೊಸ ಸತ್ಯಗಳನ್ನು ಆವಿಷ್ಕರಿಸುತ್ತಾ ಮುನ್ನಡೆಯಿರಿ, ಯಾವುದೇ ಸಂಕುಚಿತತೆ ನಿಮ್ಮನ್ನು ಸುತ್ತುವರಿಯಲು ಬಿಡಬೇಡಿ, ದೂರದರ್ಶಿತ್ವವನ್ನು ಬೆಳೆಸಿಕೊಂಡು ಹೊಸನಾಡೊಂದನ್ನು ಕಟ್ಟಿ ವಿಶ್ವಮಾನವರಾಗುತ್ತಾ ಸಾಗಿರಿ' ಎನ್ನುವಂತಹ ಸಂದೇಶವನ್ನು ಕೊಟ್ಟು ಇಂದಿಗೂ ನಮ್ಮೊಂದಿಗಿದ್ದಾರೆ. ಕುವೆಂಪುವಿನ ರಾಮ ಬಿಟ್ಟ ಬಾಣ ಶಂಭೂಕನಿಗೆ ವಂದಿಸಿ ಅಜ್ಞಾನ, ಸಂಕುಚಿತತೆ, ದಾರ್ಷ್ಟ್ಯವನ್ನು ನಾಶಪಡಿಸಿದಂತೆಯೇ ಬದಲಾವಣೆಯನ್ನು ತರುವತ್ತ ಯುವಜನತೆ ವಿಚಾರಯುಕ್ತ ವಿನಯತೆಯೊಂದಿಗೆ ಮುನ್ನುಗ್ಗಬೇಕು. ಇದು ನಮ್ಮ ಆಶಯ.

ಶತಮಾನೋತ್ಸವ ಲೇಖನ ಮಾಲೆ-14

1936ರ ದತ್-ಬ್ರಾಡ್ಲಿ ಪ್ರಬಂಧ

1936ರಲ್ಲಿ ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷ(ಸಿಪಿಜಿಬಿ)ದ ರಜನಿ ಪಾಮೆ ದತ್ ಮತ್ತು ಬೆನ್ ಬ್ರಾಡ್ಲಿಯವರು ಭಾರತದಲ್ಲಿನ ಸಾಮ್ರಾಜ್ಯಶಾಹಿ ವಿರೋಧಿ ಜನತಾ ರಂಗಕ್ಕಾಗಿ ಪ್ರಕಟಿಸಿದ ಪ್ರಬಂಧವು ಭಾರತದ ಕಮ್ಯುನಿಸ್ಟ್ ಚಳುವಳಿಯ ಮೇಲೆ ಅಗಾಧ ಪ್ರಭಾವ ಬೀರಿತು. ಈ ದತ್ – ಬ್ರಾಡ್ಲಿ ಪ್ರಬಂಧವು ಕಮ್ಯುನಿಸ್ಟ್ ಚಳುವಳಿಗೆ ಬಹಳವಾಗಿ ಸಹಾಯ ಮಾಡಿದೆ. ಈ ಅವಧಿಯಲ್ಲಿ ಕಮ್ಯುನಿಸ್ಟರ ಮಧ್ಯಪ್ರವೇಶದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಅಪಾರ ಕೊಡುಗೆ ನೀಡಿರುವ ಕಾರ್ಯಕರ್ತರು ಮತ್ತು ಹೊಸ ತಲೆಮಾರಿನ ಮುಖಂಡರು ಹೊರಹೊಮ್ಮಿದರು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ದತ್ – ಬ್ರಾಡ್ಲಿ ಪ್ರಬಂಧವು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಪತ್ರಿಕೆ 'ಇಂಟರ್‌ನ್ಯಾಷನಲ್ ಪ್ರೆಸ್ ಕರೆಸ್ಪಾಂಡೆನ್ಸ್'(ಇಂಪ್ರೆಕರ್)ನಲ್ಲಿ ಫೆಬ್ರವರಿ 29, 1936ರಲ್ಲಿ ಪ್ರಕಟವಾಯಿತು. ಅದನ್ನು ಭಾರತದಲ್ಲಿನ 'ಸಾಮ್ರಾಜ್ಯಶಾಹಿ–ವಿರೋಧಿ ಜನತಾ ರಂಗ'ಕ್ಕಾಗಿನ ಪ್ರಬಂಧವೆಂದೂ ಕರೆಯಲಾಯಿತು. ಗಮನಾರ್ಹ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಪ್ರಬಂಧವನ್ನು ಪ್ರಕಟಿಸಲಾಯಿತು. ಅಂತರ್ರಾಷ್ಟ್ರೀಯವಾಗಿ ಫ್ಯಾಸಿಸಂ ಏರುಗತಿಯಲ್ಲಿರುವಾಗಲೇ, ಭಾರತದಲ್ಲಿ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡ ಸಮಯದಲ್ಲಿ ರಾಷ್ಟ್ರೀಯ ಚಳುವಳಿಯ ಯುವಜನರಲ್ಲಿ ದೊಡ್ಡ ನಿರಾಸೆಯುಂಟಾಗಿತ್ತು. 1934ರಲ್ಲಿ ಸ್ಥಾಪನೆಯಾದ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷ(ಸಿ.ಎಸ್.ಪಿ)ವು ವಸಾಹತು ಪ್ರಶ್ನೆಯ ವಿಷಯದಲ್ಲಿ ಮಾರ್ಕ್ಸ್‌ವಾದಿ ಧೋರಣೆಯಿಂದ ಹೆಚ್ಚು ಪ್ರಭಾವಗೊಂಡಿತ್ತು. ಸಿ.ಎಸ್.ಪಿ.ಯ ಸ್ಥಾಪನೆಯೊಂದಿಗೆ ಪಂಥೀಯವಲ್ಲದ ಒಂದು ಚಿಂತನೆಯ ಪ್ರವೃತ್ತಿ ಬೆಳೆಯಿತು.

ಸಮಾಜವಾದಕ್ಕಾಗಿನ ಹೋರಾಟದ ಸಾಧನವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತಾನಾಗಿಯೇ ಪರಿವರ್ತನೆ ಹೊಂದಲಿದೆ ಎಂದು ಸಿ.ಎಸ್.ಪಿ.ಯ ಒಂದು ಗಮನಾರ್ಹ ವಿಭಾಗ ನಿರೀಕ್ಷೆ ಮಾಡಿತ್ತು. ಸಾಮ್ರಾಜ್ಯಶಾಹಿ–ವಿರೋಧಿ ಜನರನ್ನು ಸಂಘಟಿಸಿ ಬಂಡವಾಳಶಾಹಿಗಳನ್ನು ಬಯಲುಮಾಡುವ ಮೂಲಕ ಹೋರಾಟಗಳಲ್ಲಿ ಸೇರಿಕೊಂಡು ಕಾಂಗ್ರೆಸ್ಸಿನ ಡೋಲಾಯಮಾನ ಹಾಗೂ ವಂಚನೆಯನ್ನು ಪರಿಣಾಮಕಾರಿಯಾಗಿ ವಿರೋಧಿಸುವುದು ಕಮ್ಯುನಿಸ್ಟರ ಮತ್ತು ಸೋಶಿಯಲಿಸ್ಟರ ಕೆಲಸವೆಂದು ಕಮ್ಯುನಿಸ್ಟರು ಸ್ಪಷ್ಟಪಡಿಸಿದರು. ಕಾಂಗ್ರೆಸ್ಸಿನ ಬಂಡವಾಳಶಾಹಿ ನಾಯಕತ್ವ ಮತ್ತು ಕಾರ್ಯಕರ್ತರ ನಡುವೆ ಯಾವುದೇ ಭಿನ್ನತೆಯನ್ನು ಪರಿಗಣಿಸದೆ ಇಡೀ ಕಾಂಗ್ರೆಸ್ಸನ್ನು ವಿರೋಧಿಸುವ ತನ್ನ ತಪ್ಪು ತಿಳುವಳಿಕೆಯನ್ನು ಸರಿಪಡಿಸಿಕೊಳ್ಳಲು ಕಮ್ಯುನಿಸ್ಟ್ ಪಕ್ಷವು ಈ ಪ್ರಕ್ರಿಯೆಯ ಮೂಲಕ ಆರಂಭಿಸಿತು. ವಾಸ್ತವದಲ್ಲಿ ಈ ತಪ್ಪು ತಿದ್ದಿಕೊಳ್ಳುವ ಪ್ರಕ್ರಿಯೆಯ ಪರಿಣಾಮವಾಗಿಯೇ ಒಂದು ಸಾಮ್ರಾಜ್ಯಶಾಹಿ–ವಿರೋಧಿ ರಂಗದ ಕಲ್ಪನೆ ಮೂಡಿದ್ದು.

ಪ್ರಾಥಮಿಕವಾಗಿ ಈ ಕೆಳಗಿನ ಪ್ರಮುಖ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನವನ್ನು ದತ್ – ಬ್ರಾಡ್ಲಿ ಪ್ರಬಂಧವು ಮಾಡಿತು: "(ಅಂದು ಅಸ್ತಿತ್ವದಲ್ಲಿದ್ದ) ಸನ್ನಿವೇಶವನ್ನು ಬದಲಾಯಿಸುವುದು ಹೇಗೆ? ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಪ್ರತಿರೋಧವಾಗಿ ಮತ್ತು ಜನರ ಅಗತ್ಯಗಳಿಗಾಗಿ ನಾವು ಹೇಗೆ ಒಗ್ಗೂಡುವುದು ಮತ್ತು ಒಂದು ಶಕ್ತಿಯುತ ಚಳುವಳಿಯನ್ನು ಅಣಿನೆರೆಸುವುದು ಹೇಗೆ? ಚುನಾಯಿತರಾದ ರಾಷ್ಟ್ರೀಯ ಪ್ರತಿನಿಧಿಗಳ ನೀತಿಗಳು ಏನಾಗಿರಬೇಕು? ಸಾಮ್ರಾಜ್ಯಶಾಹಿಯನನು ಹಿಮ್ಮೆಟ್ಟಿಸಲು ರಾಷ್ಟ್ರೀಯ ಹೋರಾಟಗಳ ಮುಂದಿನ ದಾರಿಯ ನಿಲುವು ಏನಾಗಿರಬೇಕು?

"ಸಮಾನ ಹೋರಾಟದಲ್ಲಿರುವ ಎಲ್ಲಾ ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳ ಐಕ್ಯತೆ ಪ್ರಸ್ತುತ ಸನ್ನಿವೇಶದಲ್ಲಿನ ಪ್ರಮುಖ ಅಗತ್ಯ. ನಿರಂತರವಾಗಿ ತೀವ್ರಗೊಳ್ಳುತ್ತಿರುವ ದಾಳಿ ದಬ್ಬಾಳಿಕೆಗಳ ವಿರುದ್ಧ ಯಶಸ್ವಿ ಹೋರಾಟಕ್ಕಾಗಿ ಇದು ತೀರ ಅನಿವಾರ್ಯವಾದ ಸ್ಥಿತಿ. ಆದರೆ ಐಕ್ಯತೆ ಅಂದರೇನು? ಎಲ್ಲರೂ ಇವತ್ತು ಐಕ್ಯತೆ ಮತ್ತು ಸಂಯುಕ್ತ ರಂಗದ ಬಗ್ಗೆ ಮಾತನಾಡುತ್ತಿದ್ದಾರೆ. ಅದರ ಹೆಸರಿನಲ್ಲಿ ಹಲವಾರು ಪ್ರಸ್ತಾಪಗಳನ್ನು ಮುಂದಿಡಲಾಗುತ್ತಿದೆ.

"ಬ್ರಿಟಿಷ್ ಆಳರಸರ ಮಿತ್ರರು ಬಲಪಂಥೀಯ ಜನಗಳು ಯಾರ ಉದ್ದೇಶ ಸಾಮ್ರಾಜ್ಯಶಾಹಿಯೊಂದಿಗೆ ಸಹಕಾರ ಮತ್ತು ಅಧಿಕಾರದ ಸ್ಥಾನಗಳಿಗೆ ಪ್ರವೇಶ ಪಡೆಯುವುದಾಗಿದೆಯೋ.. .ಅಂಥವರು ಐಕ್ಯತೆಯ ಪ್ರಸ್ತಾಪವನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಾರೆ; ಸಾಮ್ರಾಜ್ಯಶಾಹಿಗೆ ಅವರ ಸೇವೆಯನ್ನು ಮುಂದುವರಿಸುತ್ತಾರೆ; ಅವರಿಗೆ ಅವರದ್ದೇ ಆದ ಯಾವುದೇ ಅನುಯಾಯಿಗಳು ಇಲ್ಲ; ಪಟ್ಟ ಪಡೆಯಲು ಹಾತೊರೆದು ಅದು ಜಯಿಸಿದ ಮೇಲೆ ತಮ್ಮ ಕಾರ್ಯ ಸಿದ್ಧಿಸಿಕೊಳ್ಳುವುದು ಅವರ ಇರಾದೆ. ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟವನ್ನು ತ್ಯಜಿಸಿ ಬ್ರಿಟಿಷರ ಮಿತ್ರರೊಂದಿಗೆ ಒಗ್ಗೂಡುವುದು, ಸಾಮ್ರಾಜ್ಯಶಾಹಿ–ವಿರೋಧಿ ಸಂಯುಕ್ತ ರಂಗವನ್ನು ದುರ್ಬಲಗೊಳಿಸುತ್ತದೆಯೇ ವಿನಃ ಬಲಪಡಿಸುವುದಿಲ್ಲ.

"ಐಕ್ಯತೆಯು ಒಂದು ಅಮೂರ್ತವಾದದ್ದೆಂದು ಪರಿಗಣಿಸದೆ, ಸಾಮ್ರಾಜ್ಯಶಾಹಿ– ವಿರೋಧಿ ಹೋರಾಟದ ಆಧಾರದಲ್ಲಿ ಮಾತ್ರ ಆ ಐಕ್ಯತೆ ಸಾಧನೆಯಾಗಬೇಕು. ವಿದೇಶಿಯರ ಆಳ್ವಿಕೆಯ ವಿರುದ್ಧದ ಹೋರಾಟದಲ್ಲಿ ಎಲ್ಲಾ ಭಾರತೀಯರನ್ನೂ ಒಗ್ಗೂಡಿಸಬೇಕೆಂದು ನಾವು ಎಷ್ಟೇ ಬಯಸಿದರೂ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಎಲ್ಲಾ ಭಾರತೀಯ ಜನರ, ನೂರಕ್ಕೆ ನೂರರಷ್ಟು, ಎಲ್ಲಾ ವಿಭಾಗಗಳ ಮತ್ತು ವರ್ಗಗಳೊಂದು ಅಮೂರ್ತ 'ಐಕ್ಯತೆ' ಸಾಧ್ಯವಿಲ್ಲ ಎಂಬುದನ್ನು ನಾವು ಅರಿಯಬೇಕು. ಕೆಲವು ವಿಭಾಗದವರು ಸಾಮ್ರಾಜ್ಯಶಾಹಿ ಹಿತಾಸಕ್ತಿಯೊಂದಿಗೆ ಜೋಡಣೆಯಾಗಿರುತ್ತಾರೆ; ಉದಾಹರಣೆಗೆ ರಾಜರುಗಳು, ಭೂಮಾಲಕರು, ಬಡ್ಡಿ ಸಾಹುಕಾರರು, ಕೋಮು ಭಿನ್ನತೆಗಳನ್ನು ದುರುಪಯೋಗ ಮಾಡಿಕೊಳ್ಳುವ ಪ್ರತಿಗಾಮಿ ಧಾರ್ಮಿಕ ಹಾಗೂ ರಾಜಕೀಯ ಜನರು, ವರ್ತಕರು ಮತ್ತು ಶ್ರೀಮಂತ ವರ್ಗದವರು ಸಾಮ್ರಾಜ್ಯಶಾಹಿಗಳೊಂದಿಗೆ ಸಖ್ಯ ಬಯಸುತ್ತಾರೆ. ರಾಷ್ಟ್ರೀಯ ಹೋರಾಟದ ಶಕ್ತಿಗಳನ್ನು ಅಂದಾಜು ಮಾಡುವಾಗ ಸಾಮ್ರಾಜ್ಯಶಾಹಿ ಪರಿಸ್ಥಿತಿಯಡಿಯಲ್ಲಿನ ಜನರ ವರ್ಗ ಸಂರಚನೆಯ ವಾಸ್ತವಗಳನ್ನು' ನಾವು ಗಮನಕ್ಕೆ ತಗೊಳ್ಳಬೇಕು.

"ಆದರೆ ಸಾಮ್ರಾಜ್ಯಶಾಹಿಯ ವಿರುದ್ಧ ಜನಸಂಖ್ಯೆಯ ಅಪಾರ ಬಹುಸಂಖ್ಯಾತರ – ಅಂದರೆ ಸಾಮ್ರಾಜ್ಯಶಾಹಿ ಆಳ್ವಿಕೆಯಡಿಯಲ್ಲಿ ನರಳುತ್ತಿರುವ ಎಲ್ಲ ಜನಸಮೂಹಗಳ ಮತ್ತು ರಾಷ್ಟ್ರೀಯ ವಿಮೋಚನೆಗಾಗಿನ ಸಾರ್ವತ್ರಿಕ ಹೋರಾಟದಲ್ಲಿ ಸೇರಿಕೊಳ್ಳಲು ಸಿದ್ಧರಿರುವಕಿತರ ವರ್ಗಗಳ ಎಲ್ಲ ಜನರ ಐಕ್ಯತೆ ಸಾಧ್ಯವಿದೆ.

"ಅಂತಹ ಗುಂಪುಗಳಿಗೆ ಕನಿಷ್ಠ ಅಗತ್ಯ ಆಧಾರವೆಂದರೆ: 1) ಸಾಮ್ರಾಜ್ಯಶಾಹಿಯ ವಿರುದ್ಧ ಮತ್ತು ಈಗಿರುವ ಗುಲಾಮಿ ಸಂವಿಧಾನದ ವಿರುದ್ಧ, ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಅಚಲವಾದ ಹೋರಾಟದ ನಿಲುವು; 2) ದುಡಿಯುವ ಜನರ ಬದುಕಿನ ಅಗತ್ಯಗಳಿಗಾಗಿ ಕ್ರಿಯಾಶೀಲ ಹೋರಾಟ ಎಂಬುದು ಸ್ಪಷ್ಟವಾಗಿದೆ. ಭಾರತೀಯ ಜನರ ಇಂತಹ ಐಕ್ಯತೆಯನ್ನು, ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕಾಗಿನ ಒಂದು ಸಾಮ್ರಾಜ್ಯಶಾಹಿ–ವಿರೋಧಿ ಸಂಯುಕ್ತ ಜನತಾ ರಂಗವನ್ನು ನಾವು ಬಯಸುವುದು.

"ರಾಷ್ಟ್ರೀಯ ಕಾಂಗ್ರೆಸ್ಸಿನ ಇಂದಿನ ನಾಯಕತ್ವ ಮತ್ತು ತಂತ್ರಗಳನ್ನು ನಾವು ಎಡಪಂಥೀಯರು ಅನೇಕ ಬಾರಿ ತೀಕ್ಷ್ಣವಾಗಿ ಟೀಕೆಮಾಡಿದ್ದೇವೆ. ಅನೇಕ ತೀರ್ಮಾನಗಳು ಮತ್ತು ನೀತಿಗಳು . . ರಾಷ್ಟ್ರೀಯ ಹೋರಾಟದ ನೈಜ ಹಿತಾಸಕ್ತಿಗೆ ವಿನಾಶಕಾರಿಯಾಗಿವೆ ಮತ್ತು ಅವು ಸಾಮ್ರಾಜ್ಯಶಾಹಿಗಳಿಗೆ ಶರಣಾಗುವುದಕ್ಕೆ ಸಮಾನವಾಗಿವೆ ಎಂದು ನಮಗೆ ಕಂಡು ಬಂದಿದೆ. ಈ ತೀರ್ಮಾನಗಳು ಮತ್ತು ನೀತಿಗಳು ಈಗಿರುವ ಪ್ರಬಲ ಬಂಡವಾಳಶಾಹಿ ನಾಯಕತ್ವದ ಕಾರಣದಿಂದ ಆಗಿವೆ; ಅವರ ಹಿತಾಸಕ್ತಿಗಳು ಮತ್ತು ಸಾಮಾನ್ಯ ಜನರ ಹಿತಾಸಕ್ತಿಗೆ ಮತ್ತು ರಾಷ್ಟ್ರೀಯ ಹೋರಾಟದ ಹಿತಾಸಕ್ತಿಗಳ ನಡುವೆ ಸಂಘರ್ಷ ವಿರುವುದರಿಂದಾಗಿ ಹೀಗಾಗಿದೆ ಎಂಬುದನ್ನು ನಾವು ಗುರುತಿಸಿದ್ದೇವೆ. ಈ ಟೀಕೆಗಳು ನಿರ್ದಿಷ್ಟ ನೀತಿಗಳ ವಿರುದ್ಧ ಮಾಡಿದ್ದೇ ಹೊರತು ಯಾವುದೇ ಕಾರಣಕ್ಕೂ ಕಾಂಗ್ರೆಸ್ಸಿನ ಸಾಮಾನ್ಯ ಕಾರ್ಯಕರ್ತರ ವಿರುದ್ಧ ಮಾಡಿದ ಟೀಕೆಗಳು ಎಂದು ಭಾವಿಸಬಾರದು. ನಿರ್ದಿಷ್ಟ ನಾಯಕತ್ವ ಮತ್ತು ನಿರ್ದಿಷ್ಟ ನೀತಿಗಳ ಬಗೆಗಿನ ನಮ್ಮ ವಿರೋಧವು ಕಾಂಗ್ರೆಸ್ ಪ್ರತಿನಿಧಿಸುವ ರಾಷ್ಟ್ರೀಯ ಚಳುವಳಿಯ ಕಾಲಾಳುಗಳಿಗಸಾಮೂಹಿಕ ಪಡೆಗಳಿಗೆ ' ಸಹಾಯ ಮಾಡುವ ಮತ್ತು ರಾಷ್ಟ್ರೀಯ ಚಳುವಳಿಗೆ ಸಹಾಯ ಮಾಡಿ ಬಲಪಡಿಸ ಆಧಯವನ್ನಷ್ಟೇ ಹೊಂದಿದೆ.

"ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲಕ ಈಗ ಸಾಧಿಸಿರುವ ಐಕ್ಯತೆಯ ಹಂತಕ್ಕೆ ಭಂಗವಾಗದಂತೆ ನಾವೀಗ ಅಗತ್ಯವಾಗಿ ಮಾಡಬೇಕಿರುವುದು ಏನೆಂದರೆ ಒಂದು ವಿಶಾಲ ರಂಗದತ್ತ ಈ ಐಕ್ಯತೆಯನ್ನು ಬಲಪಡಿಸಬೇಕು ಮತ್ತು ವಿಸ್ತರಿಸಬೇಕು: ಆ ಮೂಲಕ ಸಾಮ್ರಾಜ್ಯಶಾಹಿಯ ವಿರುದ್ಧದ ಸಾಮೂಹಿಕ ಹೋರಾಟದ ಸಂಘಟನೆಯ ಹಾಗೂ ನಾಯಕತ್ವದ ಹೊಸ ಹಂತಕ್ಕೆ ಹೋಗಬೇಕಿದೆ.

"ಆದ್ದರಿಂದ, ಈಗಿರುವ ಕಾರ್ಮಿಕ ಸಂಘಗಳು, ರೈತರ ಸಂಘಗಳು, ಯುವಜನ ಸಂಘಗಳು ಅಥವಾ ಇತರ ಸಾಮ್ರಾಜ್ಯಶಾಹಿ ವಿರೋಧಿ ಸಾಮೂಹಿಕ ಸಂಘಟನೆಗಳೊಂದಿಗೆ ರಾಷ್ಟ್ರೀಯ ಕಾಂಗ್ರೆಸಿನ ಒಂದು ಸಂಯುಕ್ತ ರಂಗವನ್ನು, ಸಾಮ್ರಾಜ್ಯಶಾಹಿಯ ಮತ್ತು ಅದರ ಸಂವಿಧಾನದ ವಿರುದ್ಧ ಹೋರಾಟದ ಆಧಾರದಲ್ಲಿ ಹಾಗೂ ಜನಸಾಮಾನ್ಯರ ತಕ್ಷಣದ ಬೇಡಿಕೆಗಳಿಗಾಗಿ ಹೋರಾಟವನ್ನು ಸಂಘಟಿಸಲು, ಒಂದು ವಿಶಾಲವಾದ ಸಾಮ್ರಾಜ್ಯಶಾಹಿ–ವಿರೋಧಿ ಜನತಾ ರಂಗವನ್ನು ಸ್ಥಾಪಿಸುವುದು ನಮ್ಮ ಮೊದಲ ಗುರಿಯಾಗಬೇಕು.

"ಭಾರತದ ಸಂಪೂರ್ಣ ಸ್ವಾತಂತ್ರ್ಯ ಭಾರತದ ರಾಷ್ಟ್ರೀಯ ಚಳುವಳಿಯ ಬದಲಿಸಲಾಗದ ಗುರಿಯಾಗಿದೆ, ಗಳಿಸುವ ಉದ್ದೇಶ ಅದರಿಂದಾಗಿ ಅರೆಬರೆ ಕ್ರಮಗಳು, ಸಂವಿಧಾನ ರಚನೆಗೆ ಸಹಕರಿಸುವುದು ಮುಂತಾದ ಸಾಮ್ರಾಜ್ಯಶಾಹಿಗಳೊಂದಿಗೆ ಎಲ್ಲ ರಾಜಿಗಳನ್ನು ಮತ್ತು ಮಾತುಕತೆಗಳನ್ನು ತಿರಸ್ಕರಿಸಬೇಕು ಎನ್ನುವುದನ್ನು ನಿಸ್ಸಂದಿಗ್ಧವಾಗಿಯೂ ಮನಗಾಣಿಸಬೇಕಾಗಿದೆ.

"ಅಲ್ಲದೆ, ಸ್ವಾತಂತ್ರ್ಯ ಚಳುವಳಿಯ ಹೋರಾಟದ ಕಾರ್ಯಕ್ರಮವನ್ನು, ಸಾಮ್ರಾಜಶಾಹಿಯ ವಿರುದ್ಧದ ತಕ್ಷಣದ ರಾಜಕೀಯ ಬೇಡಿಕೆಗಳಿಗಾಗಿನ ಹೋರಾಟದೊಂದಿಗೆ ಹಾಗೂ ಕಾರ್ಮಿಕರು ಮತ್ತು ರೈತರ ಬದುಕಿನ ಅಗತ್ಯಗಳಿಗೆ ತಕ್ಷಣದ ಬೇಡಿಕೆಗಳ ಹೋರಾಟದೊಂದಿಗೆ ಜೋಡಿಸುವ ಅವಶ್ಯಕತೆ ಇದೆ.

"ಉದಾಹರಣೆಗೆ ಈ ಕಾರಣ ಅಂತಹ ಕಾರ್ಯಕ್ರಮವು ಇವುಗಳನ್ನು ಒಳಗೊಂಡಿರಬೇಕು:

1. ಭಾರತದ ಸಂಪೂರ್ಣ ಸ್ವಾತಂತ್ರ್ಯದ ಗುರಿ;
2. ವಾಕ್, ಪತ್ರಿಕಾ, ಸಂಘಟನಾ, ಒಟ್ಟುಸೇರುವ, ಮುಷ್ಕರದ ಮತ್ತು ಪಿಕೆಟಿಂಗ್ ಮಾಡುವ ಸ್ವಾತಂತ್ರ್ಯ;
3. ಎಲ್ಲ ಅಸಾಧಾರಣ ಮತ್ತು ದಮನಕಾರಿ ಕಾನೂನುಗಳನ್ನು, ಸುಗ್ರೀವಾಜ್ಞೆಗಳನ್ನು ಮತ್ತು ಕಾರ್ಮಿಕ ವಿರೋಧಿ ಕಾನೂನುಗಳನ್ನು(ಅಪರಾಧ ತಿದ್ದುಪಡಿ ಕಾಯಿದೆ, ಪತ್ರಿಕಾ ಕಾಯಿದೆ, ಇತ್ಯಾದಿ) ಹಿಂತೆಗೆದುಕೊಳ್ಳಬೇಕು;
4. ಎಲ್ಲಾ ರಾಜಕೀಯ ಖೈದಿಗಳನ್ನು, ಬಂಧಿತರನ್ನು ಮತ್ತು ಇಂಟರ್ನಿಗಳನ್ನು ಬಿಡುಗಡೆ ಮಾಡಬೇಕು;
5. ಕೂಲಿ ಕಡಿತಗೊಳಿಸುವುದು ಮತ್ತು ಕೆಲಸದಿಂದ ಕಿತ್ತುಹಾಕುವುದರ ವಿರುದ್ಧ, ಕನಿಷ್ಠ ವೇತನ ಮತ್ತು 8 ಗಂಟೆ ಕೆಲಸಕ್ಕೆ ಒತ್ತಾಯಿಸಿ, ಗೇಣಿಗಳನ್ನು ಶೇಕಡಾ 50ಕ್ಕೆ ಇಳಿಸಲು ಒತ್ತಾಯಿಸಿ, ಸಾಲಕ್ಕಾಗಿ ರೈತರ ಜಮೀನನ್ನು ಸಾಮ್ರಾಜ್ಯಶಾಹಿಗಳು, ಸ್ಥಳೀಯ ರಾಜರುಗಳು, ಜಮೀನ್ದಾರರು ಮತ್ತು ಬಡ್ಡಿ ಸಾಹುಕಾರರು ಜಪ್ತಿ ಮಾಡುವುದರ ವಿರುದ್ಧ;

"ಸಾಮ್ರಾಜ್ಯಶಾಹಿ ವಿರೋಧಿ ಜನತಾ ರಂಗವನ್ನು ಸಾಕಾರಗೊಳಿಸುವ ಸಲುವಾಗಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನ ಸಂವಿಧಾನ, ಸಂಘಟನೆ, ನೀತಿ ಮತ್ತು ಕಾರ್ಯಗಳಲ್ಲಿ ಈ ತುರ್ತಾದ ಅಗತ್ಯವಾದ ಬದಲಾವಣೆಗಳನ್ನು ತರುವ ದಿಕ್ಕಿನಲ್ಲಿ ಕಾಂಗ್ರೆಸ್ಸಿನಲ್ಲಿರುವ ಎಡ ಪಂಥೀಯ ಜನರು ಈ ಬದುಕಿನ ಅಗತ್ಯಗಳಿಗಾಗಿ ಸಮಾನ ವೇದಿಕೆಯಲ್ಲಿ ಒಟ್ಟಾಗಿ ಹೋರಾಡಬೇಕಿದೆ . . .ವಿಶೇಷವಾಗಿ ಕಾಂಗ್ರೆಸ್ಸಿನಲ್ಲಿ ತೀವ್ರಗಾಮಿ ಬದಲಾವಣೆ ಬಯಸುವ ಗುಂಪಾಗಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಈ ವಿಷಯದಲ್ಲಿ ಪ್ರಮುಖ ಪಾತ್ರ ವಹಿಸಲು ಸಾಧ್ಯವಿದೆ ಕಾಮಗ್ರೆಸ್ ಸೋಶಲಿಸ್ಟ್ ಪಕ್ಷದ ಕಾರ್ಯಕ್ರಮ ಮತ್ತು ತಂತ್ರಗಾರಿಕೆ ಪ್ರಶ್ನೆಗಳನ್ನು ಸ್ಪಷ್ಟಪಡಿಸುವ ಎಲ್ಲಾ ಪ್ರಯತ್ನಗಳನ್ನು ನಡೆಸುವುದು ಅತ್ಯಂತ ಮಹತ್ವದ್ದಾಗಿದೆ.

"ಈ ರೀತಿಯಾಗಿ ಮೊದಲ ಹಂತದ ಸಾಮ್ರಾಜ್ಯಶಾಹಿ ವಿರೋಧಿ ಜನತಾ ರಂಗವನ್ನು ಕಟ್ಟಬಹುದು, ಮುಖ್ಯವಾಗಿ ಸ್ಥಳೀಯ, ಜಿಲ್ಲಾ ಮತ್ತು ಪ್ರಾಂತೀಯ ಆಧಾರದಲ್ಲಿ ಹೆಚ್ಚು ಒತ್ತು ಕೊಡುತ್ತಾ ಅದಾಗಲೇ ಸಮಾನ ಹೋರಾಟವಾಗಿ ನಡೆಯುತ್ತಿದೆ."

"ಸಾಮ್ರಾಜ್ಯಶಾಹಿ ವಿರೋಧಿ ರಂಗಕ್ಕೆ ಚುನಾವಣೆಗಳ ಪ್ರಶ್ನೆ ಅತ್ಯಂತ ಮಹತ್ವದ್ದು. ಒಂದು ಕಡೆಯಲ್ಲಿ, ಸಾಮ್ರಾಜ್ಯಶಾಹಿ ವಿರೋಧಿ ರಂಗದ ಸ್ಪಷ್ಟ ನಿಲುವು, ಸಂಪೂರ್ಣ ಸ್ವಾತಂತ್ರ್ಯಕ್ಕಾಗಿನ ನಿರಂತರ ಹೋರಾಟದ ನಿಲುವು, ಸಾಮ್ರಾಜ್ಯಶಾಹಿಯೊಂದಿಗೆ ಸಹಕಾರದ ವಿರುದ್ಧ ಮತ್ತು ಜನಸಾಮಾನ್ಯರ ಬೇಡಿಕೆಗಳ ಪರವಾಗಿನ ನಿಲುವುಗಳನ್ನು ಚುನಾವಣೆಗಳಲ್ಲಿ ಸ್ಪಷ್ಟವಾಗಿ ಸವಾಲಿನಂತೆ ಎತ್ತಬೇಕು; ರಾಷ್ಟ್ರೀಯ ಚಳುವಳಿಯ ಈ ವಿಶಾಲ ವಿಭಾಗಗಳ ದೃಷ್ಟಿಕೋನ ನಿಗ್ರಹಕ್ಕೆ ಒಳಗಾಗಬಾರದು. . . ಚುನಾವಣೆಗಳಲ್ಲಿನ ರಾಷ್ಟ್ರೀಯ ರಂಗವು ಒಡೆದುಹೋಗದಂತೆ ಸರ್ವಪ್ರಯತ್ನ ನಡೆಸಬೇಕು; ಆದರೆ ಇಂತಹ ಐಕ್ಯತೆಯನ್ನು ಸಾಮ್ರಾಜ್ಯಶಾಹಿ ವಿರೋದಿ ಬಣದಲ್ಲಿನ ಎಡ ಪಂಥೀಯ ಶಕ್ತಿಗಳನ್ನು ನಿಗ್ರಹಿಸಲು ಬಳಸದಂತೆ ನೋಡಿಕೊಳ್ಳಬೇಕು.

"ಚಳುವಳಿಯ ಅಸ್ತಿತ್ವದಲ್ಲಿರುವ ಹಂತಗಳಿಗೆ ಅನುಸಾರವಾಗಿ, ಸಾರ್ವತ್ರಿಕ ಹಾಗೂ ಸಮಾನ ಮತದಾನ ಮತ್ತು ನೇರ ಹಾಗೂ ಗುಪ್ತ ಮತದಾನದ ಆಧಾರದ ಮೇಲೆ ಸಂವಿಧಾನ ಸಭೆ ರಚನೆಯಾಗಬೇಕು ಎಂಬ ನಮ್ಮ ಕೇಂದ್ರ ಘೋಷಣೆಯನ್ನು ಎತ್ತಲು ಈಗ ಸಮಯ ನಿಸ್ಸಂದೇಹವಾಗಿಯೂ ನಮಗೆ ಅನುಕೂಲಕರವಾಗಿದೆ,

"ವಿಶಾಲ ನೆಲೆಯ, ಎಲ್ಲವನ್ನೂ ಅಪ್ಪಿಕೊಂಡ ಮತ್ತು ಶಕ್ತಿಯುತ ಸಾಮ್ರಾಜ್ಯಶಾಹಿ–ವಿರೋಧಿ ಜನತಾ ರಂಗ ಸಾಕಾರಗೊಂಡು ಭಾರತೀಯ ರಾಷ್ಟ್ರೀಯ ಚಳುವಳಿಗೆ ಹೊಸ ಮುನ್ನೋಟಗಳಿಗೆ ಹಾದಿಯನ್ನು ತ್ವರಿತವಾಗಿ ತೆರೆಯುವಂತಾಗಬೇಕು."

ದತ್ – ಬ್ರಾಡ್ಲಿ ಪ್ರಬಂಧವು ಕಮ್ಯುನಿಸ್ಟ್ ಚಳುವಳಿಗೆ ಬಹಳವಾಗಿ ಸಹಾಯ ಮಾಡಿದೆ. ಈ ಅವಧಿಯಲ್ಲಿ ಕಮ್ಯುನಿಸ್ಟರ ಮಧ್ಯಪ್ರವೇಶದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಅಪಾರ ಕೊಡುಗೆ ನೀಡಿರುವ ಕಾರ್ಯಕರ್ತರು ಮತ್ತು ಹೊಸ ತಲೆಮಾರಿನ ಮುಖಂಡರು ಹೊರಹೊಮ್ಮಿದರು.

ರಜನಿ ಪಾಮೆ ದತ್ ಮತ್ತು ಬೆನ್ ಬ್ರಾಡ್ಲಿ




ಶಿಕ್ಷಣಕ್ಕೆ ಬಜೆಟ್ ವೆಚ್ಚ ಅಚ್ಛೇದಿನ್ ಆರಂಭದಲ್ಲಿ 4.1 ಶೇ., ನ್ಯೂ ಇಂಡಿಯಾದಲ್ಲಿ 3.3 ಶೇ.

ಈ ವರ್ಷದ ಬಜೆಟಿನಲ್ಲಿ ಶಿಕ್ಷಣಕ್ಕೆ 5ಶೇ. ಹೆಚ್ಚು ಹಣ ನೀಡಲಾಗಿದೆ ಎಂದು ಸರಕಾರ ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವವಾಗಿ ಏನೂ ಹೆಚ್ಚಳವಾಗಿಲ್ಲ, ಉನ್ನತ ಶಿಕ್ಷಣಕ್ಕಂತೂ ಕಡಿತವೇ ಆಗಿದೆ ಎನ್ನುತ್ತಾರೆ ಹಿರಿಯ ಸಾಮಾಜಿಕ ಕಾರ್ಯಕರ್ತ ಭರತ್ ಡೋಗ್ರ.(ನ್ಯೂಸ್‌ಕ್ಲಿಕ್, ಫೆ.15). ಕೆಲವು ಬಾಬ್ತುಗಳಲ್ಲಿ ತುಸು ಹೆಚ್ಚಳವಾಗಿರುವುದು ಪರಿಷ್ಕೃತ ಬಜೆಟ್ ಅಂದಾಜಿನ ಮೇಲೆ, ಇದು ಕಳೆದ ವರ್ಷದ ಬಜೆಟ್ ಅಂದಾಜಿಗಿಂತ ಬಹಳಷ್ಟು ಮಹತ್ವದ ಬಾಬ್ತುಗಳಲ್ಲಿ ಕಡಿಮೆಯೇ ಆಗಿದೆ ಎಂಬುದೂ ಗಮನಾರ್ಹ.

2014–15ರ ಬಜೆಟಿನಲ್ಲಿ ಶಿಕ್ಷಣಕ್ಕೆ 4.1ಶೇ. ಕೊಟ್ಟಿದ್ದರೆ 2020–21ರಲ್ಲಿ ಅದು 3.3ಶೇ.ಕ್ಕೆ ಇಳಿದಿದೆ. ಒಟ್ಟು ಜಿಡಿಪಿಯ 0.55ಶೇ. ಇದ್ದದ್ದು 0.44ಶೇ.ಕ್ಕೆ ಇಳಿದಿದೆ.

'ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನ್' ಉಚ್ಚ ಶಿಕ್ಷಣವನ್ನು ಎಲ್ಲರಿಗೂ ಲಭ್ಯಗೊಳಿಸುವ ಉದ್ದೇಶದ ಒಂದು ಮಹತ್ವದ ಯೋಜನೆ. 2018–19ರ ಬಜೆಟಿನಲ್ಲಿ ಇದಕ್ಕೆ ಅತಿ ಹೆಚ್ಚು ಅಂದರೆ 2100 ಕೋಟಿ ರೂ. ಕೊಡಲಾಗಿತ್ತು. ಆದರೆ 2019–20ರ ಪರಿಷ್ಕೃತ ಅಂದಾಜು 1380 ಕೋಟಿ ರೂ. ಎಂದು ತೋರಿಸುತ್ತದೆ. ಇನ್ನೂ ಆಘಾತಕಾರಿ ಸಂಗತಿಯೆಂದರೆ 2020–21 ರ ಬಜೆಟ್ ಇದನ್ನು ಕೇವಲ 300 ಕೊಟಿ ರೂ.ಗೆ ಇಳಿಸಿದೆ ಎನ್ನುತ್ತಾರೆ ಭರತ್ ಡೋಗ್ರ. ಸಾರ್ವಜನಿಕ ನಿಧಿಯಿಂದ ನಡೆಯುವ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ಈ ಸರಕಾರದ ಕೆಂಗಣ್ಣು ಕಳೆದ ಒಂದು ವರ್ಷದಲ್ಲಂತೂ ಎದ್ದು ಕಂಡಿದೆ.

ಇದರಲ್ಲಿ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆಂದು ಇಟ್ಟಿರುವ ಮೊತ್ತ ಕಳೆದ ವರ್ಷ 412 ಕೋಟಿ ರೂ. ಇದ್ದದ್ದು ಈ ಬಜೆಟಿನಲ್ಲಿ 50 ಕೋಟಿ ರೂ.ಗಳಿಗೆ ಇಳಿದಿದೆ. ಪರಿಶಿಷ್ಟ ಬುಡಕಟ್ಟುಗಳಿಗೆ 222 ಕೋಟಿ ರೂ.ಗಳಿಂದ 25 ಕೋಟಿ ರೂ.ಗಳಿಗೆ ಇಳಿದಿದೆ. ಇದಂತೂ ಭಾರೀ ಪ್ರಮಾಣದ ಕಡಿತ.

'ಕಾಲೇಜು ಮತ್ತು ವಿವಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ'ದ ಬಾಬ್ತಿನಲ್ಲೂ ಪರಿಶಿಷ್ಟ ಜಾತಿಗಳಿಗೆ ಕೊಡಮಾಡಿರುವ ಮೊತ್ತ 39 ಕೋಟಿ ರೂ.ಗಳಿಂದ 15 ಕೋಟಿ ರೂ.ಗಳಿಗೆ ಮತ್ತು ಬುಡಕಟ್ಟುಗಳಿಗೆ ರೂ. 19 ಕೋಟಿಯಿಂದ 8 ಕೋಟಿಗೆ ಇಳಿದಿದೆ.

ಏನಾದರೂ ಉನ್ನತ ಶಿಕ್ಷಣದಲ್ಲಿ ಹಣನೀಡಿಕೆ ಹೆಚ್ಚಳವಾಗಿದ್ದರೆ, ಅದು ಕೆಲವು ಪ್ರತಿಷ್ಠೆಯ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ.

ಶಾಲಾಶಿಕ್ಷಣಕ್ಕೆ ಮತ್ತು ಉನ್ನತ ಶಿಕ್ಷಣಕ್ಕೂ ಮಾಡುವ ವೆಚ್ಚ ಬಹುಪಾಲು ಶಿಕ್ಷಣದ ಅಧಿಭಾರ (ಸೆಸ್) ಎಂದು ಜನಗಳಿಂದಲೇ ಸಂಗ್ರಹಿಸುವ ಹಣದಿಂದ ಬರುತ್ತಿದೆ. ಈ ಬಜೆಟಿನಲ್ಲಿ 74% ದಷ್ಟು ಈ ಸೆಸ್‌ಗಳಿಂದಲೇ ಬರುತ್ತಿದೆ, ಇದು ಇನ್ನೊಂದು ಆಘಾತಕಾರಿ ಸಂಗತಿ ಎನ್ನುತ್ತಾರೆ ಭರತ್ ಡೋಗ್ರ.

ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಬಹಳಷ್ಟು ಸದ್ದು ಮಾಡುತ್ತಿದ್ದರೂ, 'ಬೇಟಿ ಬಚಾವೊ, ಬೇಟಿ ಪಢಾವೊ' ಯೋಜನೆಗೆ ಕಳೆದ ಬಜೆಟಿನಲ್ಲಿ 280 ಕೋಟಿ ರೂ. ಕೊಟ್ಟಿದ್ದರೂ, ಅಷ್ಟೂ ಖರ್ಚು ಮಾಡಲಿಲ್ಲ, ಪರಿಷ್ಕೃತ ಅಂದಾಜಿನಲ್ಲಿ ಅದನ್ನು 200 ಕೋಟಿ ರೂ.ಗೆ ಇಳಿಸಲಾಗಿದೆ. ಇದಕ್ಕೆ ಹೋಲಿಸಿದರೆ ಪ್ರಸಕ್ತ ಬಜೆಟಿನಲ್ಲಿ ತುಸು ಹೆಚ್ಚಳವಾಗಿದೆ, 220 ಕೋಟಿ ರೂ. ಮಾಡಲಾಗಿದೆ, ಆದರೆ ಕಳೆದ ವರ್ಷವನ್ನು ನೆನಪಿಸಿಕೊಂಡರೆ, ಇಷ್ಟನ್ನೂ ಖರ್ಚು ಮಾಡುವ ಬಗ್ಗೆ ಸಂದೇಹವಿದೆ.

ಬಾಲ ದುಡಿಮೆಯನ್ನು ತಪ್ಪಿಸುವ ಉದ್ದೇಶದ ರಾಷ್ಟ್ರೀಯ ಬಾಲದುಡಿಮೆಗಾರರ ಪ್ರಾಜೆಕ್ಟ್‌ಗೆ ಕಳೆದ ಬಜೆಟಿನಲ್ಲಿ 100 ಕೋಟಿ ರೂ. ಕೊಡಲಾಗಿತ್ತು, ಆದರೆ ಪರಿಷ್ಕೃತ ಅಂದಾಜು 79 ಕೋಟಿ ರೂ. ತೋರಿಸುತ್ತದೆ. ಈ ವರ್ಷದ ಬಜೆಟಿನಲ್ಲಿ 120 ಕೋಟಿ ತೋರಿಸಲಾಗಿದೆ, ಆದರೆ ಪರಿಷ್ಕೃತ ಬಜೆಟ್ ಎಷ್ಟು ತೋರಿಸಲಿದೆಯೋ ಕಾದು ನೋಡಬೇಕು.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ನ್ಯೂಇಂಡಿಯ ನ್ಯೂಸ್

ಮತ್ತೊಂದು ಮಹತ್ವದ 'ಸಂಶೋಧನೆ'


ಆರೆಸ್ಸೆಸ್ ಮುಖ್ಯಸ್ಥರ ಇನ್ನೊಂದು ಸಮಾಜಶಾಸ್ತ್ರೀಯ ಸಂಶೋಧನೆ ಪ್ರಕಟವಾಗಿದೆ. ವಿವಾಹ ವಿಚ್ಛೇದನೆಯ ಕೇಸುಗಳು ಶ್ರೀಮಂತರು ಮತ್ತು ವಿದ್ಯಾವಂತರ ನಡುವೆಯೇ ಹೆಚ್ಚು, ಶಿಕ್ಷಣ ಮತ್ತು ಸಂಪತ್ತಿನಿಂದ ಹುಟ್ಟುವ ದುರಹಂಕಾರದಿಂದಾಗಿ ಕುಟುಂಬಗಳು ಮುರಿದು ಬೀಳುತ್ತವೆ ಎಂದು ಅವರು ಅಹಮದಾಬಾದಿನಲ್ಲಿ ಆರೆಸ್ಸೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತ ಖೇದದಿಂದ ಹೇಳಿರುವುದಾಗಿ ವರದಿಯಾಗಿದೆ.

ಮಹಿಳೆಯರ ಮಾನಭಂಗ 'ಭಾರತ' (ಅಂದರೆ ಗ್ರಾಮೀಣ ಪ್ರದೇಶ)ಕ್ಕಿಂತ 'ಇಂಡಿಯಾ'(ಅಂದರೆ ಶಿಕ್ಷಿತ ನಗರ ಪ್ರದೇಶ)ದಲ್ಲಿಯೇ ಹೆಚ್ಚು ಎಂಬುದು ಅವರ ಈ ಹಿಂದಿನ ಇಂತಹ ಮಹತ್ವದ 'ಸಂಶೋಧನೆ' ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕುಟಂಬದಲ್ಲಿನ, ಅಟೇ ಏಕೆ ಸಮಾಜದಲ್ಲಿನ ಸಮಸ್ಯೆಗಳಿಗೆ ಮಹಿಳೆಯರೇ ಕಾರಣ, ಅದರಲ್ಲು ಅವರು ಮನುಸ್ಮೃತಿ ವಿಧಿಸಿದ ಕಟ್ಟುಕಟ್ಟಲೆಗಳನ್ನು ಮೀರುತ್ತಿರುವುದೇ ಕಾರಣ ಎನ್ನುವುದು ಈ ಎರಡೂ 'ಸಂಶೋಧನೆ'ಗಳಲ್ಲಿನ ಮೂಲ ತತ್ವ ಎಂದು ಒಬ್ಬರು ಈ ಬಗ್ಗೆ ವಿಶ್ಲೇಷಿಸುತ್ತ ಹೇಳಿದ್ದಾರೆ.

ವಿವಾಹ ವಿಚ್ಛೇದನೆ ಉಳ್ಳವರು ಮತ್ತು ವಿದ್ಯಾವಂತರ ನಡುವೆ ಹೆಚ್ಚು ಎಂಬುದು ನಿಜವಿರಬಹುದು, ಆದರೆ ಅದಕ್ಕೆ ಅವರ ದುರಹಂಕಾರ ಕಾರಣವಲ್ಲ, ಈ ಕಾನೂನಿನ ಅರಿವು ಮತ್ತು ಅದಕ್ಕೆ ತಗಲುವ ವೆಚ್ಚ ಕಾರಣ ಎಂದು ಇನ್ನೊಬ್ಬ ವಿಶ್ಲೇಷಕರು ಹೇಳಿದ್ದಾರೆ.

ಈಗಿನ ಸರಕಾರದ ಕುಲಗುರುಗಳ ಈ ತತ್ವದಿಂದ ಪ್ರೇರಿತರಾಗಿಯೇ ದಿಲ್ಲಿ ಪೋಲೀಸರು ಗ್ರಂಥಾಲಯಗಳಿಗೆ ನುಗ್ಗಿ ವಿದ್ಯಾರ್ಥಿಗಳನ್ನು ಥಳಿಸುತ್ತಿರಬೇಕು ಎಂದು ಮತ್ತೊಬ್ಬರು ವಿಶ್ಲೇಷಿಸಿದ್ದಾರೆ. ನಿಜ, ಇದು ಕುಟುಂಬಗಳು ಒಡೆಯದಂತೆ ಮಾಡುವ ಒಂದು ದಾರಿ ಎಂದೇನೂ ಅವರು ಸಮರ್ಥಿಸಿಕೊಂಡಿಲ್ಲ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

2018ರಲ್ಲಿ ಪ್ರತಿದಿನ ಸರಾಸರಿ 63 ಭಾರತೀಯ ಗೃಹಿಣಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇದು ಈ 'ಸಂಶೋಧನೆ'ಯ ಪ್ರಕಟಣೆಯ ಬೆನ್ನ ಹಿಂದೆಯೇ ಬಂದಿರುವ ಸುದ್ದಿ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ (ಎನ್‌ಸಿಆರ್‌ಬಿ) ಪ್ರಕಟಿಸಿರುವ ಮಾಹಿತಿಗಳ ಪ್ರಕಾರ 2018ರಲ್ಲಿ ದಾಖಲಾದ ಆತ್ಮಹತ್ಯೆಗಳಲ್ಲಿ 17.1 ಶೇ. ಗೃಹಿಣಿಯರು. 2001ರಿಂದ ಪ್ರತಿವರ್ಷ ಸರಾಸರಿ 20ಸಾವಿರ ಗೃಹಿಣಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಎನ್‌ಸಿಆರ್‌ಬಿ ಮಾಹಿತಿಗಳ ವಿಶ್ಲೇಷಣೆ ಹೇಳುತದೆ.

ಹಿರಿಯರು ನಿಶ್ಚಯಿಸಿದ ಮದುವೆಗಳು, ಬೇಗನೇ ತಾಯ್ತನ, ಮನೆಯೊಳಗಿನ ಹಿಂಸಾಚಾರ ಮತ್ತು ಆರ್ಥಿಕ ಅವಲಂಬನೆ ಇದಕ್ಕೆ ಕಾರಣಗಳು ಎಂದು ಈ ವಿಶ್ಲೇಷಣೆ ಹೇಳುತ್ತದೆ. ಜತೆಗೆ ಇವಕ್ಕೆ ಪ್ರತಿರೋಧ ಒಡ್ಡುವ 'ದುರಹಂಕಾರ'ವನ್ನು ತೋರಲಾಗದೇ ಇದ್ದದ್ದು ಎಂದೂ ಈಗ ಸೇರಿಸಬಹುದೇನೋ. ಇವರ ಕುಟುಂಬಗಳ ಗತಿಯೇನಾಗಿರಬಹುದು?

ದಲಿತರ ಮೇಲೆ ಹಿಂಸಾಚಾರ: ಉತ್ತರ ಪ್ರದೇಶಕ್ಕೆ ಮೊದಲ ಸ್ಥಾನ

ಇದೇ ಎನ್‌ಸಿಆರ್‌ಬಿ ಮಾಹಿತಿಗಳ ಪ್ರಕಾರ ದಲಿತರ ಮೇಲೆ ಹಿಂಸಾಚಾರಗಳ ಪ್ರಮಾಣ ಉತ್ತರಪ್ರದೇಶದಲ್ಲಿ 2014ರಿಂದ 2018ರ ನಡುವೆ 47ಶೇ.ದಷ್ಟು ಹೆಚ್ಚಿದೆ. ಈ ಹೆಚ್ಚಳದಲ್ಲಿ ಅದರದ್ದೇ ಪ್ರಥಮ ಸ್ಥಾನ. 2ನೇಸ್ಥಾನ ದಲ್ಲಿರುವುದು ಇನ್ನೊಂದು 'ಮಾದರಿ' ರಾಜ್ಯ ಗುಜರಾತ. ಅಲ್ಲಿ 26ಶೇ. ಹೆಚ್ಚಳವಾಗಿದೆ, 3ನೇಸ್ಥಾನದಲ್ಲಿರುವುದು ಹರ್‍ಯಾಣ. ಇಲ್ಲಿ 15ಶೇ. ಹೆಚ್ಚಳವಾಗಿದೆ. ನಂತರದ ಎರಡು ರಾಜ್ಯಗಳೂ, ಮಧ್ಯಪ್ರದೇಶ(14ಶೇ.) ಮತ್ತು ಮಹಾರಾಷ್ಟ್ರ (11ಶೇ.) ಈ ಮಾಹಿತಿ ಸಂಗ್ರಹದ ವೇಳೆಯಲ್ಲಿ 'ನ್ಯೂಇಂಡಿಯಾ'ದ ಪಕ್ಷದ ಆಳ್ವಿಕೆಯಲ್ಲಿದ್ದವುಗಳು ಎಂಬುದು ಕೇವಲ ಕಾಕತಾಳೀಯವೇ?



ಜಾಮಿಯ ವಿವಿಗೆ ಪೋಲೀಸ್ ಕಾರ್ಯಾಚರಣೆಯಿಂದ 2.66 ಕೋಟಿ ರೂ. ಹಾನಿ

ಡಿಸೆಂಬರ್ 15 ರಂದು ಜಾಮಿಯ ವಿಶ್ವವಿದ್ಯಾಲಯದಲ್ಲಿ ದಿಲ್ಲಿ ಪೋಲೀಸ್ ನಡೆಸಿದ ಕಾರ್ಯಾಚರಣೆಯಿಂದಾಗಿ ತನಗೆ 2,66,16,390 ರೂ. ಗಳಷ್ಟು ಹಾನಿಯಾಗಿದೆ ಎಂದು ವಿಶ್ವವಿದ್ಯಾಲಯ ಮಾನವ ಸಂಪನ್ಮೂಲ ಇಲಾಖೆಗೆ ಸಲ್ಲಿಸಿದ ಅಂದಾಜು ಹೇಳಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್(ಫೆ.19) ವರದಿ ಮಾಡಿದೆ.

ಈ ಕಾರ್ಯಾಚರಣೆಯಲ್ಲಿ 25 ಸಿಸಿಟಿವಿಗಳು ಮುರಿದು ಹೋಗಿವೆ. ಇದನ್ನು ನಡೆಸಿದವರು ಬಹುಮಟ್ಟಿಗೆ ಪೋಲೀಸರೇ ಎಂಬುದು ಈಗ ಸಾರ್ವಜನಿಕಗೊಂಡಿರುವ ಸಿಸಿಟಿವಿ ಚಿತ್ರಗಳಲ್ಲೇ ಕಾಣುತ್ತಿದೆ.

ಕಳೆದ ವಾರ ಪೋಲಿಸರು ವಿವಿಯ ಎಂಫಿಲ್ ಲೈಬ್ರೆರಿಗೆ ನುಗ್ಗಿ ಅಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಮನಬಂದಂತೆ ಥಳಿಸಿದ ಒಂದು ವೀಡಿಯೋ ಪ್ರಕಟವಾಯಿತು. ಇದರಿಂದ ಕುಪಿತಗೊಂಡ ಪೋಲೀಸ್ ಇಲಾಖೆ ಕೊಟ್ಟ ಇನ್ನೊಂದು ವೀಡಿಯೋವನ್ನು ಸರಕಾರದ ಬಾಲಂಗೋಚಿ ಮಾಧ್ಯಮಗಳು ಪ್ರದರ್ಶಿಸಿದವು. ಆದರೆ ಅದರ ಪೂರ್ಣ ವೀಡಿಯೋವನ್ನು ನೋಡಿದಾಗ ಮುಸುಕುಧಾರೀ ಪೋಲೀಸರೇ ಮೇಜು–ಕುರ್ಚಿಗಳು, ಟ್ಯೂಬ್‌ಲೈಟ್‌ಗಳ ಜತೆಗೆ ಸಿಸಿಟಿವಿ ಕ್ಯಾಮರಾಗಳನ್ನೂ ಒಡೆಯುವುದು ಕಾಣ ಬಂದಿದೆ.

ತಾವು ಲೈಬ್ರೆರಿ ಪ್ರವೇಶಿಸಲೇ ಇಲ್ಲ, ವಿದ್ಯಾರ್ಥಿಗಳಿಗೆ ಹೊಡೆದೇ ಇಲ್ಲ ಎಂದ ದಿಲ್ಲಿ ಪೋಲೀಸರು ಈ ವೀಡಿಯೋ ಸಾರ್ವಜನಿಕವಾದ ಮೇಲೆ, ಕಲ್ಲೆಸೆದು ಧಾಂಧಲೆ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಹಿಂಬಾಲಿಸಿ ತಾವು ಹೋದುದಾಗಿ ಸಮರ್ಥಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ನಡುವೆ ಆಳುವ ಪಕ್ಷದ ಐಟಿ ಸೆಲ್ ಪೋಲೀಸ್ ಕಾರ್ಯಾಚರಣೆಯನ್ನು ಸಮರ್ಥಿಸಲು ಹಲವು ಸುಳ್ಳು ಮಾಹಿತಿಗಳನ್ನು ಹರಡಿತು. ವಿದ್ಯಾರ್ಥಿಗಳು ಲೈಬ್ರೆರಿಯಲ್ಲಿ ಓದುತ್ತಿದ್ದಂತೆ ಕಾಣುತ್ತಿಲ್ಲ, ಅವರಲ್ಲಿ ಕೆಲವರು ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದರು ಏಕೆ, ಕೆಲವರ ಕೈಯಲ್ಲಿ ಕಲ್ಲು ಏಕೆ ಇತ್ಯಾದಿ.

ಇದಕ್ಕೆ ಪ್ರತಿಯಾಗಿ, ಪೋಲೀಸರು ಎಲ್ಲರೂ ಮುಸುಕುಧಾರಿಗಳಾಗಿದ್ದರು ಏಕೆ ಎಂಬ ಪ್ರಶ್ನೆ ಎದ್ದಿದೆ, ಏಕೆಂದರೆ ಈ ವೀಡಿಯೋ ದಾಖಲಾಗುವ ಹೊತ್ತಿಗೆ ನೆಲ ಅಂತಸ್ತಿನಲ್ಲಿ ಆಗಲೇ ಪೋಲೀಸರು ನುಗ್ಗಿ ಧಾಂಧಲೆ ಆರಂಭಿಸಿದ್ದರು, ಅಶ್ರುವಾಯು ಸಿಡಿಸುವುದನ್ನೂ ಆರಂಭಿಸಿದ್ದರು, ಆದ್ದರಿಂದಲೇ ಅವರು ಮುಖ ಮುಚ್ಚಿಕೊಂಡಿದ್ದರು, ಇದರಿಂದ ಮೇಲಂತಸ್ತಿನಲ್ಲಿದ್ದ ವಿದ್ಯಾರ್ಥಿಗಳು ಗಲಿಬಿಲಿಗೊಂಡಿದ್ದರು, ಪೋಲೀಸರು ಆಶ್ರುವಾಯುವಿನೊಂದಿಗೆ ನುಗ್ಗುತ್ತಿದ್ದಂತೆಯೇ ಮುಖ ಮುಚ್ಚಿಕೊಳ್ಳಬೇಕಾಗಿ ಬಂತು ಎಂದು ಈಗ ತಿಳಿದು ಬಂದಿದೆ. ವಿದ್ಯಾರ್ಥಿಯೊಬ್ಬನ ಕೈಯಲ್ಲಿ ಕಾಣ ಬರುತ್ತಿರುವುದು ಕಲ್ಲು ಅಲ್ಲ, ಬದಲಿಗೆ ಆತನ ಪರ್ಸ್ ಮತ್ತು ಮೊಬೈಲ್ ಎಂದು ಆಲ್ಟ್‌ನ್ಯೂಸ್ ನಂತರ ಸಾಬೀತು ಮಾಡಿ ತೋರಿಸಿದೆ.

ಹೀಗೆ ಇವು ಪೋಲೀಸರ ಧಾಂಧಲೆಗಳೇ ಎಂದು ಬಯಲಾಗಿದ್ದರೂ ಅವರ ಮೇಲೆ ಏಕೆ ಕ್ರಮ ಕೈಗೊಳ್ಳಲಾಗಿಲ್ಲ ಎಂಬ ಪ್ರಶ್ನೆಗಳನ್ನು ಈಗ ಕೇಳಲಾಗುತ್ತಿದೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಲೈಸೆನ್ಸ್ ಶುಲ್ಕ ಬಾಕಿ: ಖಾಸಗಿ ಟೆಲಿಕಾಂ ಕಂಪನಿಗಳ 'ದಕ್ಷತೆ' ಮತ್ತು ಸರಕಾರಕ್ಕೆ ನ್ಯಾಯಾಲಯದ ತರಾಟೆ



'ಸಂಚಾರ್ ಭವನ'ದಲ್ಲಿರುವ ಕೆಲವು ಕಿರಿಯ ಅಧಿಕಾರಿಗಳು ಸುಪ್ರಿಂ ಕೋರ್ಟ್ ಆದೇಶವನ್ನು ಉಲ್ಲಂಘಿಸುವ ನಿರ್ದೇಶನವನ್ನು ಕೊಟ್ಟಿದ್ದಾರೆ ಎಂದರೆ ನಂಬಬಹುದೇ?. ಇಲ್ಲಿ ನ್ಯಾಯಮೂರ್ತಿ ಅರುಣ್ ಮಿಶ್ರ ಹೇಳಿದ ವಿಪುಲ ಹಣಬಲದ ಟಿಪ್ಪಣಿಯನ್ನು ನೆನಪಿಸಿಕೊಳ್ಳದಿರಲು ಸಾಧ್ಯವಿಲ್ಲ. ಇದಲ್ಲದೆ, ಗಂಭೀರ ಹಣಕಾಸು ಕೊರತೆಯನ್ನು ಎದುರಿಸುತ್ತಿರುವ ಸರಕಾರ 1.47 ಲಕ್ಷ ಕೋಟಿ ರೂ.ಗಳ ಒಂದು ಭಾರೀ ಮೊತ್ತವನ್ನು ಪಡೆಯಲು ಅನುವು ಮಾಡಿಕೊಟ್ಟ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಲು ಉತ್ಸುಕವಾಗಿಲ್ಲ ಏಕೆ ಎಂಬ ಪ್ರಶ್ನೆಯೂ ಏಳುತ್ತದೆ. 2007ರಿಂದ 2012 ರ ನಡುವೆ ತನ್ನ ಒಡೆತನದ ಬಿಎಸ್‌ಎನ್‌ಎಲ್‌ನ್ನು ದುರ್ಬಲಗೊಳಿಸಿ, ಈ ಖಾಸಗಿ ಕಂಪನಿಗಳು ಅಪಾರ ಲಾಭಗಳನ್ನು ಪೇರಿಸಲು ಅವಕಾಶ ಕಲ್ಪಿಸಿದ ಸರಕಾರ ಮಾತ್ರವೇ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಬೇಕು.

ಪಿ. ಅಭಿಮನ್ಯು

ಫೆಬ್ರುವರಿ 14, 2020 ರಂದು ಸುಪ್ರಿಂ ಕೋರ್ಟ್, ಲೈಸೆನ್ಸ್ ಶುಲ್ಕ ಬಾಕಿಯನ್ನು ತೆರದೆ ತಪ್ಪಿಸಿಕೊಳ್ಳುತ್ತಿರುವ ಖಾಸಗಿ ಟೆಲಿಕಾಂ ಕಂಪನಿಗಳನ್ನು ಕಾಪಾಡುವ ಪ್ರಯತ್ನ ನಡೆಸುತ್ತಿದೆ ಎಂದು ಸರಕಾರವನ್ನು ತರಾಟೆಗೆ ತಗೊಂಡಿತು. ವೊಡಾಫೋನ್ ಇಂಡಿಯ, ಏರ್‌ಟೆಲ್ ಮತ್ತು ಟಾಟಾ ಟೆಲಿಸರ್ವಿಸಸ್ ಇವು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸದೇ ಇರುವುದಕ್ಕೆ ತೀವ್ರ ಟೀಕೆಗೆ ಒಳಗಾಗಿರುವ ಖಾಸಗಿ ಟೆಲಿಕಾಂ ಕಂಪನಿಗಳು.

ಅಕ್ಟೋಬರ್ 24, 2019ರಂದು ನ್ಯಾಯ ಮೂರ್ತಿಗಳಾದ ಅರುಣ್ ಮಿಶ್ರ, ಎಸ್.ಅಬ್ದುಲ್ ನಝೀರ್ ಮತ್ತು ಎಂ.ಆರ್.ಷಾ ಇದ್ದ ಸುಪ್ರಿಂ ಕೋರ್ಟ್ ಪೀಠ ಈ ಮೂರು ಕಂಪನಿಗಳು ಲೈಸೆನ್ಸ್ ಶುಲ್ಕ ಬಾಕಿ ರೂ.1.47 ಲಕ್ಷ ಕೋಟಿ ರೂ.ಗಳನ್ನು ಮೂರು ವಾರದೊಳಗೆ ಪಾವತಿ ಮಾಡಬೇಕು ಎಂದು ಆದೇಶಿಸಿತು. ಈ ಆದೇಶದ ಪ್ರಕಾರ ವೊಡಾಫೋನ್ 53,038 ಕೋಟಿ ರೂ., ಏರ್‌ಟೆಲ್ 35,586 ಕೋಟಿ ರೂ. ಮತ್ತು ಟಾಟಾ ಟೆಲಿಸರ್ವಿಸಸ್ 13,823 ಕೋಟಿ ರೂ.ಗಳನ್ನು ಪಾವತಿ ಮಾಡಬೇಕಾಗಿದೆ. ಆದರೆ ಈ ಆದೇಶದ ನಂತರ ನಾಲ್ಕು ತಿಂಗಳು ಕಳೆದರೂ ಈ ಖಾಸಗಿ ಕಂಪನಿಗಳು ಒಂದು ರೂಪಾಯಿಯನ್ನೂ ತೆತ್ತಿಲ್ಲ.

ಸುಪ್ರಿಂ ಕೋರ್ಟ್ ಅತ್ಯಂತ ಕೋಪೋದ್ರಿಕ್ತ ಗೊಂಡದ್ದು, ಇದಕ್ಕಿಂತ ಹೆಚ್ಚಾಗಿ, ಈ ಖಾಸಗಿ ಕಂಪನಿಗಳಿಂದ ಈ ಬಾಕಿಗಳನ್ನು ವಸೂಲಿ ಮಾಡಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದ ದೂರಸಂಪರ್ಕ ಇಲಾಖೆ ತನ್ನ ಕರ್ತವ್ಯ ನಿರ್ವಹಿಸುವ ಬದಲಿಗೆ, ಈ ಪಾವತಿಯನ್ನು ತಪ್ಪಿಸಿಕೊಳ್ಳಲು ಅದೇ ಅನುಕೂಲ ಕಲ್ಪಿಸಿಕೊಟ್ಟದ್ದು. ಜನವರಿ 23, 2020ರಂದು ಇಲಾಖೆ, ಸುಪ್ರಿಂ ಕೋರ್ಟ್ ಆದೇಶದಂತೆ ಈ ಟೆಲಿಕಾಂ ಕಂಪನಿಗಳಿಂದ ಯಾವುದೇ ಬಾಕಿ ಪಾವತಿಗೆ ಒತ್ತಾಯ ಹಾಕಬಾರದು ಎಂದು ಅಕೌಂಟೆಂಟ್ ಜನರಲ್‌ಗೆ ನಿರ್ದೇಶನ ನೀಡಿತು, ಮತ್ತು ಮುಂದಿನ ಆದೇಶದ ವರೆಗೆ, ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳಬಾರದು ಎಂದೂ ಹೇಳಿತು.

ಈ ನಿರ್ದೇಶನವನ್ನು ಪ್ರಸ್ತಾಪಿಸುತ್ತ ನ್ಯಾಯಮೂರ್ತಿ ಅರುಣ್ ಮಿಶ್ರ "ಇಲ್ಲಿ ಎಷ್ಟೊಂದು ಹಣಬಲ ಇದೆ, ನನಗೆ ಬಹಳ ಯಾತನೆಯಾಗುತ್ತಿದೆ, ಈ ವ್ಯವಸ್ಥೆಯಲ್ಲಿ ಈ ನ್ಯಾಯಾಲಯದಲ್ಲಿ ಕೆಲಸ ಮಾಡಬಾರದು ಎಂದು ನನಗನಿಸುತ್ತಿದೆ" ಎಂದು ಟಿಪ್ಪಣಿ ಮಾಡಿದರು.

ಈ ಮೊಕದ್ದಮೆ ಆರಂಭವಾದದ್ದು, 1999ರಲ್ಲಿ. 1995ರಲ್ಲಿ ಖಾಸಗಿ ಕಂಪನಿಗಳಿಗೆ ಟೆಲಿಕಾಂ ಸೇವೆಗಳನ್ನು ಒದಗಿಸಲು ಲೈಸೆನ್ಸ್‌ಗಳನ್ನು ಕೊಡಲಾಯಿತು. ಲೈಸೆನ್ಸ್ ಶರತ್ತುಗಳ ಪ್ರಕಾರ ಈ ಕಂಪನಿಗಳು ಒಂದು ನಿಗದಿತ ಲೈಸೆನ್ಸ್ ಶುಲ್ಕವನ್ನು ತೆರಬೇಕಾಗಿತ್ತು. ಆದರೆ 1995ರಿಂದ 1999ರ ವರೆಗೂ ಈ ಕಂಪನಿಗಳು ಯಾವುದೇ ಲೈಸೆನ್ಸ್ ಶುಲ್ಕವನ್ನು ತೆರಲಿಲ್ಲ. ಹೀಗೆ ಬಾಕಿಯಾದ ಶುಲ್ಕಗಳ ಮೊತ್ತ ಹಲವು ಸಾವಿರ ಕೋಟಿ ರೂ.ಗಳಿಗೇರಿತು. 1999ರಲ್ಲಿ ಆಗಿನ ಪ್ರಧಾನ ಮಂತ್ರಿ ವಾಜಪೇಯಿಯವರು ಉದಾರ ಮನಸ್ಸಿನಿಂದ ಸಂಪೂರ್ಣ ಲೈಸೆನ್ಸ್ ಶುಲ್ಕಗಳಿಗೆ ವಿನಾಯ್ತಿ ನೀಡಿದರು. ಅಲ್ಲದೆ, ನಿಗದಿತ ಲೈಸೆನ್ಸ್ ಶುಲ್ಕದ ಮಾದರಿಯ ಬದಲಿಗೆ, ರೆವಿನೂ ಪಾಲುದಾರಿಕೆಯ ಮಾದರಿಯನ್ನು ತಂದರು.

ಇದರ ಪ್ರಕಾರ ಖಾಸಗಿ ಟೆಲಿಕಾಂ ಕಂಪನಿಗಳು, ತಮ್ಮ ರೆವಿನ್ಯೂ ಗಳಿಕೆಯ ಒಂದು ಭಾಗವನ್ನು ಲೈಸೆನ್ಸ್ ಶುಲ್ಕವಾಗಿ ತೆರಬೇಕು. ಆರಂಭದಲ್ಲಿ ಇದನ್ನು 15ಶೇ. ಎಂದು ನಿಗದಿ ಮಾಡಲಾಯಿತು, ನಂತರ ಇದನ್ನು 13ಶೇ.ಕ್ಕೆ ಇಳಿಸಲಾಯಿತು, ಅಂತಿಮವಾಗಿ 8ಶೇ. ಎಂದು ನಿಗದಿ ಮಾಡಲಾಯಿತು.

ಈ ರೆವಿನ್ಯೂ ಪಾಲುದಾರಿಕೆ ಮಾದರಿಯನ್ನು ಬಳಸಿಕೊಂಡು ಈ ಟೆಲಿಕಾಂ ಕಂಪನಿಗಳು ತಮ್ಮ ರೆವಿನ್ಯೂ ಸಂಗ್ರಹವನ್ನು ಸತತವಾಗಿ ಕಡಿಮೆಗೊಳಿಸಿ ತೋರಿಸಲಾರಂಭಿಸಿ, ಸರಕಾರಕ್ಕೆ ಲೈಸೆನ್ಸ್ ಶುಲ್ಕವನ್ನು ವಂಚಿಸಿದರು. ದೂರಸಂಪರ್ಕ ಇಲಾಖೆ ಹೊರಗಣ ಆಡಿಟರ್‌ಗಳಿಂದ ನಡೆಸಿದ ತಪಾಸಣೆಗಳು ಈ ವಂಚನೆಯನ್ನು ತೋರಿಸಿಕೊಟ್ಟವು. ಇದರಿಂದಾಗಿ, ಅವು ಲೈಸೆನ್ಸ್ ಶುಲ್ಕ ತೆರುವಂತೆ ಮಾಡಲಾಯಿತು.

ಇದಲ್ಲದೆ, ಆರಂಭದಿಂದಲೇ, ಈ ಖಾಸಗಿ ಕಂಪನಿಗಳು ಎಜಿಆರ್(ಸರಿಹೊಂದಿಸಿದ ಒಟ್ಟು ರೆವಿನೂ ಆದಾಯ)ದ ಲೆಕ್ಕಾಚಾರದಲ್ಲಿ ಕೈಚಳಕ ನಡೆಸಿಕೊಂಡು ಬಂದವು. ಈ ಎಜಿಆರ್‌ನಲ್ಲಿ ಟೆಲಿಕಾಂ ಸೇವೆಯಿಂದ ಬರುವ ಆದಾಯವನ್ನು ಮಾತ್ರ ತೆಗೆದುಕೊಳ್ಳಬೇಕು, ಹ್ಯಾಂಡ್‌ಸೆಟ್‌ಗಳ ಮಾರಾಟ, ರದ್ದಿಗಳು ಇತ್ಯಾದಿಗಳಿಂದ ಬರುವ ಆದಾಯಗಳು ಇದರ ವ್ಯಾಪ್ತಿಗೆ ಬರುವುದಿಲ್ಲ ಎಂಬ ನಿಲುವು ತಳೆದವು. ಆದರೆ ಸರಕಾರ ಎಜಿಆರ್‌ನಲ್ಲಿ ಇವೆಲ್ಲ ಆದಾಯಗಳೂ ಸೇರುತ್ತವೆ ಎಂಬ ನಿಲುವು ತಳೆಯಿತು (ಆದರೆ ಈಗಿನ ಸರಕಾರ ಅಂತಹ ನಿಲುವು ತಳೆಯಬಾರದಿತ್ತು ಎಂದು ಖೇದಗೊಳ್ಳುತ್ತಿರಬಹುದು). ಈ ವಿವಾದ ಬಹಳ ವರ್ಷಗಳ ಕಾಲ ನೆನೆಗುದಿಗೆ ಬಿದ್ದಿತ್ತು. ಕಳೆದ ಅಕ್ಟೋಬರ್ 24ರಂದು ಸುಪ್ರಿಂ ಕೋರ್ಟ್ ಆದೇಶದೊಂದಿಗೆ ಅದು ಇತ್ಯರ್ಥಗೊಂಡಿತು.

ನ್ಯಾಯಮೂರ್ತಿ ಅರುಣ್ ಮಿಶ್ರರವರ ಫೆಬ್ರುವರಿ 14, 2020ರ ಟಿಪ್ಪಣಿಯಿಂದ ಖಂಡಿತವಾಗಿಯೂ ಎರಡು ಪ್ರಶ್ನೆಗಳು ಏಳುತ್ತವೆ. ಮೊದಲನೆಯದ್ದು, ಜನವರಿ 23ರಂದು ದೂರಸಂಪರ್ಕ ಇಲಾಖೆ ಅಕೌಂಟೆಂಟ್ ಜನರಲ್‌ರಿಗೆ ಕೊಟ್ಟ ನಿರ್ದೇಶನಕ್ಕೆ ಸಂಬಂಧಪಟ್ಟದ್ದು. ದೂರಸಂಪರ್ಕ ಇಲಾಖೆಯ ಇಬ್ಬರು ಡೆಸ್ಕ್ ಅಧಿಕಾರಿಗಳು ಇಂತಹ ನಿರ್ದೇಶನಕ್ಕೆ ಹೊಣೆಗಾರರು ಎಂದು ಅಕೌಂಟೆಂಟ್ ಜನರಲ್ ತುಷಾರ್ ಮೆಹ್ತ ನ್ಯಾಯಾಲಯಕ್ಕೆ ತಿಳಿಸಿದರು. ಈ ಬಗ್ಗೆ ದೂರಸಂಪರ್ಕ ಮಂತ್ರಿಗಳಿಗಾಗಲೀ, ಇಲಾಖೆಯ ಕಾರ್ಯದರ್ಶಿಗಳಿಗಾಗಲಿ ತಿಳಿದೇ ಇರಲಿಲ್ಲ ಎಂದು ಹೇಳಲಾಗಿದೆ. ಆದರೆ 'ಸಂಚಾರ್ ಭವನ'ದಲ್ಲಿರುವ ಕೆಲವು ಡೆಸ್ಕ್ ಅಧಿಕಾರಿಗಳು ಸುಪ್ರಿಂ ಕೋರ್ಟ್ ಆದೇಶವನ್ನು ಉಲ್ಲಂಘಿಸುವ ಇಂತಹ ನಿರ್ದೇಶನವನ್ನು ಕೊಟ್ಟಿದ್ದಾರೆ ಎಂದರೆ ನಂಬುವುದು ಕಷ್ಟವೇ. ಇಲ್ಲಿ ನ್ಯಾಯಮೂರ್ತಿ ಅರುಣ್ ಮಿಶ್ರ ಹೇಳಿದ ವಿಪುಲ ಹಣಬಲದ ಟಿಪ್ಪಣಿಯನ್ನು ನೆನಪಿಸಿಕೊಳ್ಳದಿರಲು ಸಾಧ್ಯವಿಲ್ಲ.

ಎರಡನೆಯ ಪ್ರಶ್ನೆಯೆಂದರೆ, ಗಂಭೀರ ಹಣಕಾಸು ಕೊರತೆಯನ್ನು ಎದುರಿಸುತ್ತಿರುವ ಸರಕಾರ 1.47 ಲಕ್ಷ ಕೋಟಿ ರೂ.ಗಳ ಒಂದು ಭಾರೀ ಮೊತ್ತವನ್ನು ಪಡೆಯಲು ಅನುವು ಮಾಡಿಕೊಟ್ಟ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಲು ಉತ್ಸುಕವಾಗಿಲ್ಲ ಏಕೆ ಎಂಬುದು.

ಈ ಖಾಸಗಿ ಟೆಲಿಕಾಂ ಕಂಪನಿಗಳ, ಅದರಲ್ಲೂ ವೊಡಾಫೋನ್‌ನ ಆರ್ಥಿಕ ಪರಿಸ್ಥಿತಿ ಎಷ್ಟು ನಾಜೂಕಾಗಿದೆಯೆಂದರೆ, ಇಷ್ಟೊಂದು ದೊಡ್ಡ ಮೊತ್ತವನ್ನು ಅವು ಎಲ್ಲಿಂದ ತಾನೇ ಹೊಂದಿಸ ಬಲ್ಲವು ಎಂದು ಮಾಧ್ಯಮಗಳು ಕಣ್ಣೀರು ಹಾಕುತ್ತಿವೆ. ಆದರೆ ಈ ಕಂಪನಿಗಳು ಭಾರತೀಯ ಟೆಲಿಕಾಂ ಉದ್ಯಮದಲ್ಲಿ ಗಳಿಸಿದ ಅಪಾರ ಸಂಪತ್ತು, ಅದರಲ್ಲೂ, 2007ರಿಂದ 2012 ರ ನಡುವೆ ಸರಕಾರವೇ ತನ್ನ ಒಡೆತನದ ಬಿಎಸ್‌ಎನ್‌ಎಲ್‌ನ್ನು ದುರ್ಬಲಗೊಳಿಸುತ್ತಿದ್ದ ಅವಧಿಯಲ್ಲಿ ಪೇರಿಸಿಟ್ಟ ದೈತ್ಯಪ್ರಮಾಣದ ಲಾಭಗಳು ಎಲ್ಲ ಎಲ್ಲಿಗೆ ಹೋದವು? ಸರಕಾರ ಮಾತ್ರವೇ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಬೇಕು.

ಶುಲ್ಕ ಬಾಕಿ: ವೊಡಾಫೋನ್ 53,038 ಕೋಟಿ ರೂ., ಏರ್‌ಟೆಲ್ 35,586 ಕೋಟಿ ರೂ. ಮತ್ತು ಟಾಟಾ ಟೆಲಿಸರ್ವಿಸಸ್ 13,823 ಕೋಟಿ ರೂ.







10 ಕೋಟಿ ಉದ್ಯೋಗ ನಿರ್ಮಾಣದ ಆಶ್ವಾಸನೆ ಬಹು ದೂರ

ಕಾರ್ಮಿಕ ಮತ್ತು ಉದ್ಯೋಗ ಮಂತ್ರಿ ಸಂತೋಷ್ ಗಂಗ್ವಾರ್ ಸಂಸತ್ತಿನಲ್ಲಿ ಮಂಡಿಸಿದ ವಿವರಗಳ ಪ್ರಕಾರ ಸರಕಾರದ ಪ್ರಮುಖ ಉದ್ಯೋಗಾವಕಾಶ ನಿರ್ಮಾಣ ಮತ್ತು ಉದ್ಯೋಗ ನೀಡಿಕೆ ಸ್ಕೀಮುಗಳಲ್ಲಿ 2019-20ರ ಹಣಕಾಸು ವರ್ಷದಲ್ಲಿ ತೀವ್ರ ಇಳಿಕೆ ದಾಖಲಾಗಿದೆ (ಸ್ವಾತಿ ಮಾಥುರ್, ಟೈಂಸ್ ನ್ಯೂಸ್ ನೆಟ್‌ವರ್ಕ್, ಫೆ.19)

ಪ್ರಧಾನ ಮಂತ್ರಿ ಉದ್ಯೋಗಾವಕಾಶ 'ನಿರ್ಮಾಣ ಕಾರ್ಯಕ್ರಮ(ಪಿಎಂಇಜಿಪಿ) ಅಡಿಯಲ್ಲಿ 2018-19ರಲ್ಲಿ 5.9ಲಕ್ಷ ಉದ್ಯೋಗಗಳು ನಿರ್ಮಾಣವಾಗಿದ್ದರೆ, ಎಪ್ರಿಲ್ 1, 2019ರಿಂದ ಡಿಸೆಂಬರ್31ರ ವರೆಗೆ ಆಗಿರುವುದು ಕೇವಲ 2.6ಲಕ್ಷ. ಇದು 2107-18ರ 3.9ಲಕ್ಷವನ್ನು ಕೂಡ ತಲುಪುವ ಸಾಧ್ಯತೆಯನ್ನು ತೋರಿಸುತ್ತಿಲ್ಲ. ಅತಿ ಹೆಚ್ಚು ಇಳಿಕೆ ದಾಖಲಾಗಿರುವುದು ಅಸ್ಸಾಂ ಮತ್ತು ಜಮ್ಮು-ಕಾಶ್ಮೀರದಲ್ಲಿ.

ದೀನ್‌ದಯಾಳ್ ಅಂತ್ಯೋದಯ ಯೋಜನಾ-ರಾಷ್ಟ್ರೀಯ ನಗರ ಜೀವನೋಪಾಯ ಮಿಶನ್(ಡಿಎವೈ-ಎನ್‌ಯುಎಲ್‌ಎಂ)ಅಡಿಯಲ್ಲಿ 1.8ಲಕ್ಷ ಜನಗಳಿಗೆ ಉದ್ಯೋಗ ಕೊಡಿಸಿದ್ದರೆ, 2019-20ರಲ್ಲಿ ಜನವರಿ 27 ರ ವರೆಗೆ ಕೊಟ್ಟಿರುವುದು 44,000 ಮಾತ್ರ. ಅತಿ ಹೆಚ್ಚು ಕಡಿತವಾಗಿರುವುದು ಗುಜರಾತ್ ಮತ್ತು ಮಧ್ಯಪ್ರದೇಶದಲ್ಲಿ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ 2018-19ರಲ್ಲಿ 26,796 ವ್ಯಕ್ತಿದಿನಗಳ ಉದ್ಯೋಗ ಕೊಟ್ಟಿದ್ದರೆ, 2019-20ರಲ್ಲಿ ಇದು 20,577 ಕ್ಕೆ ಇಳಿದಿದೆ. ಇದು ಮೋದಿ ಸರಕಾರ ಬಂದಮೇಲೆ ಕೊಟ್ಟಿರುವ ಅತೀ ಕಡಿಮೆ ಉದ್ಯೋಗ ಪ್ರಮಾಣ.

ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆಯ ಅಡಿಯಲ್ಲೂ ತರಬೇತಿ ಪಡೆದವರ ಸಂಖ್ಯೆ 2.4ಲಕ್ಷ ದಿಂದ 1.74 ಲಕ್ಷಕ್ಕೆ ಇಳಿದಿದೆ. , ಈ ತರಬೇತಿಯಿಂದ ಉದ್ಯೋಗ ಸಿಕ್ಕಿದವರ ಸಂಖ್ಯೆ 1.35 ಲಕ್ಷದಿಂದ 1.1ಲಕ್ಷಕ್ಕೆ ಇಳಿದಿದೆ.

ಇವೆಲ್ಲವೂ ಸರಕಾರವೇ ಕೊಟ್ಟಿರುವ ಅಧಿಕೃತ ಅಂಕಿ-ಅಂಶಗಳು.

ಉತ್ತರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಅನುಕ್ರಮವಾಗಿ 34 ಲಕ್ಷ ಮತ್ತು 28 ಲಕ್ಷಕ್ಕೆ ಏರಿದೆ



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಮಾತೃಭಾಷೆ ಎಂಬ ಆಶಾಕಿರಣ

"ಅನೇಕ ರಾಷ್ಟ್ರಗಳು ಮಕ್ಕಳಿಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡುತ್ತಿರುವ ಬಗ್ಗೆ ನಮ್ಮ ಸರ್ಕಾರಗಳು ಅಧ್ಯಯನ ಮಾಡಬೇಕಿದೆ"

ಮಾನವನ ಇತಿಹಾಸದ ಬೆಳವಣಿಗೆಯ ಒಂದು ಹಂತದಲ್ಲಿ ಸಂವಹನದ ಸಾಧನವಾಗಿ ಭಾಷೆ ಬೆಳೆಯಿತು. ಜಗತ್ತಿನ ವಿವಿಧ ಸ್ಥಳೀಯ ವಾತಾವರಣಕ್ಕೆ ಅನುಗುಣವಾಗಿ ಭಾಷೆಯು ವಿಕಸನಗೊಳ್ಳುತ್ತಾ ಬಂದಿತು. ವಿಶ್ವಸಂಸ್ಥೆಯ ಅಧ್ಯಯನದ ಪ್ರಕಾರ, 1900ರಲ್ಲಿ 10 ಸಾವಿರ ಭಾಷೆಗಳಿದ್ದವು. ಆದರೆ ಈಗ ಕೇವಲ 6,700 ಭಾಷೆಗಳಿವೆ. ಇವುಗಳಲ್ಲಿ ಶೇ 50ರಷ್ಟು ಭಾಷೆಗಳನ್ನು ಮಾತ್ರ ಮಕ್ಕಳ ಕಲಿಕೆಗೆ ಬಳಸಲಾಗುತ್ತಿದೆ. ಉಳಿದ ಭಾಷೆಗಳು ಅಳಿವಿನ ಅಂಚಿನಲ್ಲಿವೆ.


ಭಾರತದಲ್ಲಿ 122 ಪ್ರಮುಖ ಭಾಷೆಗಳು ಹಾಗೂ 1,599 ಇತರ ಭಾಷೆಗಳು ಇವೆ ಎಂದು ಸರ್ಕಾರದ ವರದಿಯೊಂದು ಹೇಳುತ್ತದೆ. ಈ ಎಲ್ಲಾ ಭಾಷೆಗಳನ್ನು ಉಳಿಸುವ ಮತ್ತು ಬೆಳೆಸುವ ಕೆಲಸ ಮುಖ್ಯವಾಗಿ ಆಗಬೇಕಿದೆ.

ಬಹುಭಾಷೆ ಮತ್ತು ಬಹುಸಂಸ್ಕೃತಿಯನ್ನು ಬಿಂಬಿಸುವುದಕ್ಕಾಗಿ, ಪ್ರೋತ್ಸಾಹಿಸುವುದಕ್ಕಾಗಿ ವಿಶ್ವಸಂಸ್ಥೆಯು ವಿಶ್ವ ಮಾತೃಭಾಷಾ ದಿನವನ್ನು ಘೋಷಿಸಿದ್ದು, 2000ನೇ ಇಸವಿಯಿಂದ ಫೆಬ್ರುವರಿ 21ರಂದು ಈ ದಿನವನ್ನು ಆಚರಿಸಲಾಗುತ್ತಿದೆ.

ಮಗುವಿನ ಪ್ರಾಥಮಿಕ ಶಿಕ್ಷಣದ ಕಲಿಕೆಯು ಮಾತೃಭಾಷೆಯಲ್ಲೇ ಇರಬೇಕು ಎಂದು ಜಗತ್ತಿನ ಬಹುಪಾಲು ಭಾಷಾತಜ್ಞರು, ಶಿಕ್ಷಣ ಚಿಂತಕರು, ಮಾನವಶಾಸ್ತ್ರಜ್ಞರು ಹೇಳುತ್ತಾರೆ. ಆದರೂ ನಮ್ಮಲ್ಲಿ ಕಲಿಕಾ ಮಾಧ್ಯಮದ ಬಗ್ಗೆ ಸರ್ಕಾರಕ್ಕೆ ಸ್ಪಷ್ಟತೆಯೇ ಇಲ್ಲ. 2008ರಲ್ಲಿ ಕರ್ನಾಟಕ ಹೈಕೋರ್ಟ್ ಹಾಗೂ 2014ರಲ್ಲಿ ಸುಪ್ರೀಂ ಕೋರ್ಟ್ 'ಮಗುವಿನ ಕಲಿಕಾ ಮಾಧ್ಯಮದ ಆಯ್ಕೆ ಪೋಷಕರಿಗೆ ಬಿಟ್ಟದ್ದು' ಎಂದು ಹೇಳಿವೆ. ಪರಿಣಾಮವಾಗಿ, ಇಂಗ್ಲಿಷ್‌ನ ಯಜಮಾನಿಕೆಯು ಗಟ್ಟಿಗೊಳ್ಳುತ್ತಿದೆ. ಸುಪ್ರೀಂ ಕೋರ್ಟ್ ಈ ಕುರಿತು ವಿವಿಧ ರಾಜ್ಯಗಳ ಅಭಿಪ್ರಾಯವನ್ನು ಕೇಳದೆ, ಕರ್ನಾಟಕದ ಅಭಿಪ್ರಾಯವನ್ನಷ್ಟೇ ಪರಿಗಣಿಸಿ ಈ ತೀರ್ಪು ನೀಡಿದೆ. ಇದು ಸಂವಿಧಾನದ ಮೂಲ ತತ್ವಗಳಿಗೆ ವಿರುದ್ಧವಾಗಿದೆ.

ಜಾಗತೀಕರಣದ ನೇರ ಪ್ರಭಾವವು ಸ್ಥಳೀಯ ಭಾಷೆಗಳ ಮೇಲೆ ಆಗುತ್ತಿದೆ. ಇಂಗ್ಲಿಷ್ ಒಂದು ರೀತಿ ಯಜಮಾನನಂತೆ ವರ್ತಿಸುತ್ತಿದೆ. ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ವಿವಿಧ ವಿಷಯಗಳ ಬಹುತೇಕ ಮಾಹಿತಿ ಇಂಗ್ಲಿಷ್‌ನಲ್ಲಿ ಸಂಗ್ರಹವಾಗಿದೆ, ಔದ್ಯೋಗಿಕ ಶಿಕ್ಷಣಕ್ಕಾಗಿ ಇಂಗ್ಲಿಷ್ ಕಲಿಕೆ ಮುಖ್ಯವೆಂದು ತೋರುತ್ತಿದೆ. ಹೀಗಾಗಿ ಇಂಗ್ಲಿಷ್ ಕಲಿಯಲು ಬಹಳಷ್ಟು ಜನ ಉತ್ಸಾಹ ತೋರುತ್ತಿದ್ದಾರೆ. ಇದನ್ನೇ ಲಾಭವನ್ನಾಗಿಸಿಕೊಂಡ ಖಾಸಗಿ ಶಿಕ್ಷಣ ಸಂಸ್ಥೆಗಳು ಇಂಗ್ಲಿಷ್ ವ್ಯಾಮೋಹದ ಬುಗ್ಗೆಯನ್ನು ವ್ಯಾಪಕವಾಗಿ ಉಕ್ಕಿಸಿವೆ. ಪೋಷಕರನ್ನು ಇದು ಆಕರ್ಷಿಸುತ್ತದೆ. ಆದರೆ ಇದರಿಂದ ಮಕ್ಕಳಿಗೆ ಹೊರೆಯಾಗುತ್ತಿದೆ ಎಂದು ಅರಿಯಲು ಕಲಿಸುವವರು, ಪೋಷಕರು ಇಬ್ಬರೂ ವಿಫಲರಾಗಿದ್ದಾರೆ.

ಬಹುಪಾಲು ದೇಶಗಳು ಮಾತೃಭಾಷೆಯಲ್ಲೇ ಶಿಕ್ಷಣ ನೀಡುತ್ತಿವೆ. ಇದರ ಭಾಗವಾಗಿ ಅವು ಅಭಿವೃದ್ಧಿ ಪಥದತ್ತ ಸಾಗುತ್ತಿರುವುದನ್ನು ನೋಡಬಹುದಾಗಿದೆ. ಚೀನಾ, ಜಪಾನ್, ವಿಯೆಟ್ನಾಂ, ದಕ್ಷಿಣ ಕೊರಿಯಾ, ಉತ್ತರ ಕೊರಿಯಾ, ದಕ್ಷಿಣ ಆಫ್ರಿಕಾ ಸೇರಿದಂತೆ ಅನೇಕ ರಾಷ್ಟಗಳು ಮಾತೃಭಾಷೆಯಲ್ಲೇ ಕಲಿಸುತ್ತಿರುವ ಬಗ್ಗೆ ನಮ್ಮ ಸರ್ಕಾರಗಳು ಅಧ್ಯಯನ ಮಾಡಬೇಕಿದೆ.



ಮಗುವು ಪ್ರತಿಯೊಂದು ಅನುಭವವನ್ನೂ ಮಾತೃಭಾಷೆಯಲ್ಲಿಯೇ ಸವಿಯುತ್ತದೆ. ಈ ಅನುಭವದ ಅಭಿವ್ಯಕ್ತಿಗೂ ಮಾತೃಭಾಷೆ ಸಾಕ್ಷಿಯಾಗುತ್ತದೆ. ಆದರೆ ಮಾತೃಭಾಷೆಯ ಮೂಲಕ ಸಿಗುವುದೇ ಶಿಕ್ಷಣವಾಗುವುದಿಲ್ಲ. ಕನಿಷ್ಠ ಪ್ರಾಥಮಿಕ ಶಿಕ್ಷಣದವರೆಗಾದರೂ ಮಗುವಿನ ಕಲಿಕೆ ಮಾತೃಭಾಷೆಯಲ್ಲಿದ್ದರೆ ಮುಂದೆ ಅದರ ಶಿಕ್ಷಣಕ್ಕೆ ಉತ್ತಮ ಬುನಾದಿಯಾಗುತ್ತದೆ. ತನ್ನದೇ ಭಾಷೆ, ತನ್ನದೇ ಕಾಗುಣಿತ ಕಲಿಯುವಾಗ ಮಗುವಿನ ಆಸಕ್ತಿ ಇಮ್ಮಡಿಗೊಳ್ಳುತ್ತದೆ ಎಂದು ಮಾನವಶಾಸ್ತ್ರಜ್ಞರು ಹೇಳುತ್ತಾರೆ. ಭಾಷೆಯನ್ನು ಹೇರಿದರೆ, ಅದರಿಂದ ಮಗುವಿಗೆ ಹಿಂಸಾತ್ಮಕ ಅನುಭವವಾಗುತ್ತದೆ, ಕಲಿಕೆಗೆ ಹಿನ್ನಡೆಯಾಗುತ್ತದೆ ಎಂಬುದು ಅವರ ವಾದ.

ಮಗು ತನ್ನ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲು ಮಾತೃಭಾಷೆ ನೆರವಾಗುತ್ತದೆ. ತನ್ನ ಪರಿಸರಕ್ಕೆ ವಿರುದ್ಧವಾಗಿ ಮಗು ಮತ್ತೊಂದು ಭಾಷೆಯನ್ನು ಕಲಿಯುವುದು ಕಷ್ಟವೆಂಬುದು ಅಧ್ಯಯನಗಳ ಮೂಲಕ ದೃಢಪಟ್ಟಿದೆ. ದೇಶದಲ್ಲಿನ ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಗಳಿಗೆ ಬದಲಾಯಿಸದಿದ್ದರೆ, ಅಂತಹ ದೇಶದಲ್ಲಿ ಪ್ರತಿಭೆಗಳ ಬೆಳವಣಿಗೆಗೂ ಧಕ್ಕೆಯಾಗುತ್ತದೆ. ಅದಕ್ಕಾಗಿ ಆಳುವ ಸರ್ಕಾರಗಳು ತ್ವರಿತವಾಗಿ ಕ್ರಮ ವಹಿಸಬೇಕು. ಇಲ್ಲವಾದಲ್ಲಿ ಭಾಷಾ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತದೆ ಎಂದು ಕೊಠಾರಿ ಆಯೋಗದ ಶಿಫಾರಸು ಹೇಳುತ್ತದೆ.

ಕುವೆಂಪು ಅವರು 'ಮಾತೃಭಾಷಾ ಶಿಕ್ಷಣ ಸಂಪೂರ್ಣ ಯಶಸ್ವಿಯಾಗುವವರೆಗೂ ಸ್ಥಳೀಯರಿಗೆ ಉದ್ಯೋಗ ದೊರೆಯುವುದು ಕಷ್ಟವಾಗುತ್ತದೆ. ಇಂಗ್ಲಿಷ್ ಮೂಲಕ ಪಡೆಯುವ ಶಿಕ್ಷಣ ಗಾಳಿಗೋಪುರವಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ. 'ನಾನು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಬದಲು ನನ್ನ ಮಾತೃಭಾಷೆಯಲ್ಲಿ ಪಡೆದಿದ್ದರೆ ಇನ್ನಷ್ಟು ಉತ್ತಮ ಕವಿತೆಗಳನ್ನು ಬರೆಯುತ್ತಿದ್ದೆ' ಎಂದು ಕವಿ ರವೀಂದ್ರನಾಥ ಟ್ಯಾಗೋರ್ ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ, ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕು ಎಂಬುದು ಶಿಕ್ಷಣ ತಜ್ಞರು ಹಾಗೂ ಭಾಷಾ ತಜ್ಞರ ಆಗ್ರಹವಾಗಿದೆ. ಸರ್ಕಾರಗಳು ಸರ್ಕಾರಿ ಶಾಲೆಗಳನ್ನು ಬಲಗೊಳಿಸಿ ಮಾತೃಭಾಷಾ ಶಿಕ್ಷಣದ ಅರಿವನ್ನು ಮೂಡಿಸಬೇಕಿದೆ. ಖಾಸಗಿ ಶಾಲೆಗಳಿಗೆ ಮೂಗುದಾರ ಹಾಕಿ, ಮಾತೃಭಾಷೆಯಲ್ಲಿ ಶಿಕ್ಷಣ ನೀಡಿ, ಇಂಗ್ಲಿಷ್ ಅನ್ನು ಒಂದು ಭಾಷೆಯನ್ನಾಗಿ ಪರಿಣಾಮಕಾರಿಯಾಗಿ ಕಲಿಸುವಂತಹ ಜವಾಬ್ದಾರಿ ಹೊರಬೇಕಿದೆ. ಮಾತೃಭಾಷಾ ಶಿಕ್ಷಣದ ಪರ ಹೋರಾಟವು ಪ್ರಚಾರಕ್ಕಷ್ಟೇ ಸೀಮಿತವಾಗದೆ ಭಾಷೆಯ ಅಸ್ಮಿತೆ, ಶಿಕ್ಷಣದ ಹಕ್ಕು ಎಲ್ಲವನ್ನೂ ಒಳಗೊಳ್ಳಬೇಕಾಗಿದೆ.

ಕೃಪೆ: ಪ್ರಜಾವಾಣಿ

ಪರಿಹಾರ ಕೇಳಿದ ನೆರೆ ಸಂತ್ರಸ್ತರನ್ನು 'ನದಿಗೆ ಬಿದ್ದು ಸಾಯಿರಿ' ಎಂದ ಬೆಳಗಾವಿ ತಹಶೀಲ್ದಾರ್?

ಈ ಮಧ್ಯೆಯೇ ಅರಣ್ಯ ಇಲಾಖೆಯ ಅಧಿಕಾರಿಗಳು ತಾತ್ಕಾಲಿಕ ಶೆಟ್ ತೆರವುಗೊಳಿಸುವಂತೆ ಎಚ್ಚರಿಕೆ ನೀಡಿದ್ದಾರೆ. ಇದು ಸಂತ್ರಸ್ತರಿಗೆ ಪಾಲಿಗೆ ದೊಡ್ಡ ಸಂಕಷ್ಟ ಎದುರಾಗಿದೆ. ಮನೆಯೂ ಇಲ್ಲ, ಬೆಳೆಯು ಇಲ್ಲ ಸದ್ಯ ವಾಸವಿರೋ ತಾತ್ಕಲಿಕ ಶೆಟ್ ನಿಂದ ಹೊರ ಹಾಕಿದರೆ ಎಲ್ಲಿಗೆ ಹೋಗೊದು ಎಂಬ ಪ್ರಶ್ನೆ ಉದ್ಭವಿಸಿದೆ.

ಬೆಳಗಾವಿ: ಆಗಸ್ಟ್ ತಿಂಗಳಲ್ಲಾದ ಪ್ರವಾಹದಿಂದ ಬೆಳಗಾವಿ ಜಿಲ್ಲೆಯಲ್ಲಿ ಭಾರೀ ಪ್ರಮಾಣದಲ್ಲಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿ ಸಂಭವಿಸಿದೆ. ಶಾಶ್ವತ ಸೂರು, ಬೆಳೆಗಳಿಗೆ ಪರಿಹಾರದ ಭರವಸೆ ನೀಡಿದ್ದ ಸರ್ಕಾರ ಸಂತ್ರಸ್ತರಿಗೆ ನಡು ನೀರಿನಲ್ಲೇ ಕೈಕೊಟ್ಟಿದೆ. ಪರಿಹಾರ ಸಿಗದೆ ಬೆಟ್ಟದಲ್ಲೇ ಸಂತ್ರಸ್ತರು ಬದುಕುತ್ತಿದ್ದು, ಇಲ್ಲಿಂದ ಡಿಢೀರ್ ಖಾಲಿ ಮಾಡಿ ಎಂದು ಅರಣ್ಯ ಇಲಾಖೆ ಒತ್ತಡ ಹೇರುತ್ತಿದೆ.

ಹೌದು, ಕಳೆದ ವರ್ಷ ಮಲಪ್ರಭಾ ನದಿಯಲ್ಲಿ ಭೀಕರ ಪ್ರವಾಹ ಉಂಟಾಗಿತ್ತು. ರಾಮದುರ್ಗ ತಾಲೂಕಿನ 30ಕ್ಕೂ ಹೆಚ್ಚು ಗ್ರಾಮಗಳು ಪ್ರವಾಹಕ್ಕೆ ತತ್ತರಿಸಿದ್ದವು. ಪ್ರಮುಖವಾಗಿ ಗೋಣಗನೂರು ಗ್ರಾಮ ಅರ್ಧದಷ್ಟು ಮುಳುಗಿ ಹೋಗಿತ್ತು. ನದಿ ಸುತ್ತಮುತ್ತ ಇರುವ ಜಮೀನಿನಲ್ಲಿ ಅನೇಕ ವರ್ಷಗಳಿಂದ ಜನ ಮನೆ ಮಾಡಿಕೊಂಡು ವಾಸವಿದ್ದರು. ಸದ್ಯ ಮನೆ, ಜಮೀನು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿವೆ.

ಇದರಿಂದ ಅತಂತ್ರರಾದ ಸಂತ್ರಸ್ತರು ಕಳೆದ ಆಗಷ್ಟ್ ತಿಂಗಳಿಂದಲೇ ಗ್ರಾಮದ ಬಂಡೆಮ್ಮ ನಗರದ ಬಳಿ ಇರುವ ಬೆಟ್ಟದ ಮೇಲೆ ತಾತ್ಕಲಿಕ ಶೆಟ್ ನಿರ್ಮಾಣ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಆದರೆ, ಇವರಿಗೆ ಸರ್ಕಾರಿಂದ ಯಾವುದೇ ನೆರವು ಸಿಗುತ್ತಿಲ್ಲ. ನಿಮ್ಮ ಮನೆ ಬಗ್ಗೆ ಗ್ರಾಮ ಪಂಚಾಯತ್ನಲ್ಲಿ ದಾಖಲೆ ಇಲ್ಲ. ಹೀಗಾಗಿ ಪರಿಹಾರ ನೀಡಲು ಬರಲ್ಲ ಎಂದು ಹೇಳಿದ್ದಾರೆ. ಅದಕ್ಕೆ ನಾವು ಸರ್ಕಾರಕ್ಕೆ ಸಂಬಂಧ ಇಲ್ಲ ಅಂದರೆ ನಮ್ಮನ್ನು ರಕ್ಷಣೆ ಯಾಕೆ ಮಾಡಿದ್ದರು ಎಂದು ಜನ ಪ್ರಶ್ನಿಸುತ್ತಿದ್ದಾರೆ.

ಇನ್ನು, ಈ ಬಗ್ಗೆ ತಹಶೀಲ್ದಾರ್ ಗಿರೀಶ ಸ್ವಾಧಿರನ್ನು ಕೇಳಿದರೆ, ನದಿಯಲ್ಲಿ ಬಿದ್ದು ಸಾಯಿ ಎಂದು ಬೇಜವಾಬ್ದಾರಿಯುತ್ತ ಉತ್ತರ ನೀಡಿದರು ಎನ್ನುತ್ತಾರೆ ಸಂತ್ರಸ್ತ ಶಂಕರಪ್ಪ.

ಕಳೆದ 7 ತಿಂಗಳಿಂದ 10ಕ್ಕೂ ಕುಟುಂಬಗಳು ಗ್ರಾಮದ ಬೆಟ್ಟದ ಮೇಲೆ ತಾತ್ಕಾಲಿಕ ಶೆಟ್ ನಿರ್ಮಾಣ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಅನೇಕ ತಿಂಗಳಗಳ ಕಾಲ ದಾನಿಗಳು ನೀಡಿದ ದಿನಸಿಯಿಂದಲೇ ಜೀವನ ನಡೆಸಿದ್ದಾರೆ. ಸದ್ಯ ಜಮೀನಗಳ ದುರಸ್ತಿ ಮಾಡಲು ಆಗದೇ ಇರುವಷ್ಟು ಹಾಳಾಗಿವೆ. ಹೀಗಾಗಿ ಪರಿಹಾರಕ್ಕಾಗಿ ಕಾದು ಕುಳತ್ತಿದ್ದಾರೆ. ಆದರೆ, ಸರ್ಕಾರ ಮಾತ್ರ ಇವರ ಕಡೆ ಗಮನ ಹರಿಸಿಲ್ಲ.

ಈ ಮಧ್ಯೆಯೇ ಅರಣ್ಯ ಇಲಾಖೆಯ ಅಧಿಕಾರಿಗಳು ತಾತ್ಕಾಲಿಕ ಶೆಟ್ ತೆರವುಗೊಳಿಸುವಂತೆ ಎಚ್ಚರಿಕೆ ನೀಡಿದ್ದಾರೆ. ಇದು ಸಂತ್ರಸ್ತರಿಗೆ ಪಾಲಿಗೆ ದೊಡ್ಡ ಸಂಕಷ್ಟ ಎದುರಾಗಿದೆ. ಮನೆಯೂ ಇಲ್ಲ, ಬೆಳೆಯು ಇಲ್ಲ ಸದ್ಯ ವಾಸವಿರೋ ತಾತ್ಕಲಿಕ ಶೆಟ್ ನಿಂದ ಹೊರ ಹಾಕಿದರೆ ಎಲ್ಲಿಗೆ ಹೋಗೊದು ಎಂಬ ಪ್ರಶ್ನೆ ಉದ್ಭವಿಸಿದೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಸಂತ್ರಸ್ತರ ಬದುಕು ನರಕವಾಗಿದೆ. ಜಿಲ್ಲೆಯಲ್ಲಿ ನಾಲ್ಕು ಜನ ಸಚಿವರು ಇದ್ದರು ಯಾರೊಬ್ಬರು ಇಲ್ಲಿನ ಪ್ರವಾಹ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಇನ್ನೂ ಜಿಲ್ಲಾಢಳಿತ ಮಾತ್ರ ದಾಖಲೆಯಲ್ಲಿ ಕೋಟಿ ಕೋಟಿ ಖರ್ಚು ಮಾಡಿ ಮನೆ ನಿರ್ಮಾಣ ಮಾಡಿದ್ದೇವೆ, ಬೆಳೆಗೆ ಪರಿಹಾರ ಕೊಟ್ಟಿದ್ದೇವೆ ಎಂದು ಹೇಳುತ್ತದೆ. ಆದರೆ, ವಾಸ್ತವದಲ್ಲಿ ಪರಿಸ್ಥಿತಿಯೇ ಬೇರೆಯಾಗಿದೆ. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮವಹಿಸಬೇಕಿದೆ.

(ಮೂಲ: ನ್ಯೂಸ್ 18)



ಬೊಲಿವಿಯಾ ಅಧ್ಯಕೀಯ ಚುನಾವಣೆಯ ಎಡ ಅಭ್ಯರ್ಥಿಗಳು

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಚುನಾವಣೆಗಳಲ್ಲಿ ಭಾಗವಹಿಸಲು ಎಂಎಎಸ್ ನಿರ್ಧರಿಸಿದೆ. ಕ್ಯಾಟಕೋರಾ ಮತ್ತು ಚೊಕ್ವುವಾಂಕಾ ಅವರನ್ನು ಅನುಕ್ರಮವಾಗಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿಕೊಂಡಿದೆ. ಪ್ರಮುಖ ಸಂಘಟಿತ ಸ್ಥಳೀಯ ಬುಡಕಟ್ಟು ಜನರ ಚಳವಳಿಗಳ ಮತ್ತು ಮಾರ್ಕ್ಸ್‌ವಾದಿ ಬುದ್ಧಿಜೀವಿಗಳ ಗುಂಪುಗಳ ಮೈತ್ರಿಕೂಟವಾದ ಎಂ.ಎ.ಎಸ್ ಈ ಎರಡು ಸೈದ್ಧಾಂತಿಕ ಮತ್ತು ಸಂಘಟನಾ ಧಾರೆಗಳನ್ನು ಪ್ರತಿನಿಧಿಸುವ ಈ ಇಬ್ಬರೂ ಅತ್ಯುತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡಿದೆ. ಇವರು ಮೊರಲೆಸ್ ಸರಕಾರದಲ್ಲಿ ಬೊಲಿವಿಯದ ಪವಾಡಸದೃಶ ಬೆಳವಣಿಗೆಗೆ ಕಾರಣವಾದ ಆರ್ಥಿಕ ಮತ್ತು ವಿದೇಶ ಸಚಿವರಾಗಿದ್ದ ಅಪಾರ ಅನುಭವ ಇರುವವರು. ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ನಡೆದರೆ ಅವರಿಬ್ಬರು ಗೆಲ್ಲುವ ಎಲ್ಲ ಸಾಧ್ಯತೆಗಳಿವೆ. ಆದರೆ ಈಗಿನ ಸರಕಾರ ಮತ್ತು ಯು.ಎಸ್ ವಿದೇಶಾಂಗ ಸಚಿವಾಲಯ ಎಲ್ಲ ಸಾಧ್ಯವಿರುವ ಬೆದರಿಕೆ, ದಾಳಿ ಮುಂತಾದ ಕೀಳು ತಂತ್ರಗಳನ್ನು ಬಳಸಲಿವೆ. ಇವರಿಬ್ಬರನ್ನು ಚುನಾವಣೆಯ ಮೊದಲೇ ಹುಸಿ ಆಪಾದನೆಗಳ ಮೇಲೆ ಜೈಲಿಗೆ ಹಾಕಿದರೂ ಆಶ್ಚರ್ಯವಿಲ್ಲ.

ಬೊಲಿವಿಯಾದ ಅಧ್ಯಕ್ಷೀಯ ಚುನಾವಣೆ ಮೇ 3, 2020 ರಂದು ನಡೆಯಲಿದೆ. ನವೆಂಬರ್ 10, 2019 ರಂದು, ಯು.ಎಸ್ ಬೆಂಬಲಿತ ಜೇನಿನ್ ಎನೇಝ್ ರವರು ಮಿಲಿಟರಿ ದಂಗೆಯ ಮೂಲಕ, ಪ್ರಜಾಸತ್ತಾತ್ಮಕವಾಗಿ ಚುನಾಯಿತರಾಗಿದ್ದ ಎಡಪಂಥೀಯ ಇವೊ ಮೊರಲೆಸ್ ರ ಸರ್ಕಾರವನ್ನು ಕಿತ್ತುಹಾಕಿ ಅಧಿಕಾರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಏಕೆಂದರೆ, ಇವೊ ಮೊರಲೆಸ್ ಕಳೆದ 10–15 ವರ್ಷಗಳಿಂದ ಆಡಳಿತದ ಚುಕ್ಕಾಣಿ ಹಿಡಿದು, ಐಎಂಎಫ್ ಹೇರಿದ ನವ–ಉದಾರವಾದಿ ಕ್ರಮಗಳನ್ನು ತಿರಸ್ಕರಿಸಿ ಬೊಲಿವಿಯಾವನ್ನು ಆರ್ಥಿಕ ಉತ್ಕರ್ಷದತ್ತ ಒಯ್ಯುವಲ್ಲಿ ಸಫಲರಾಗಿದ್ದರು. ಇದನ್ನು ಸಹಿಸಲಾಗದ ಅಮೆರಿಕಾವು, ತನ್ನ ಮಿಲಿಟರಿ ದಂಗೆಯ ಮೂಲಕ ಇವೊ ಮೊರಲೆಸ್ ರ ಸರ್ಕಾರವನ್ನು ಉರುಳಿಸಿ, ಜೇನಿನ್ ಸರಕಾರವನ್ನು ಸ್ಥಾಪಿಸಿತು. ಇದೀಗ ಮತ್ತೆ ಅಧ್ಯಕ್ಷೀಯ ಚುನಾವಣೆಯನ್ನು ನಿಗದಿಪಡಿಸಲಾಗಿದೆ.

ಕ್ಷಿಪ್ರಕ್ರಾಂತಿಯ ನಂತರ ಮೊರಲೆಸ್ ಮತ್ತೆ ಬೊಲಿವಿಯಾಗೆ ಹಿಂದಿರುಗಬೇಕೆಂದು ಸಾವಿರಾರು ಜನರು ಭಾಗವಹಿಸಿದ್ದ ಪ್ರತಿಭಟನೆಗಳಲ್ಲಿ ಸರಕಾರದಿಂದ ಎರಡು ಹತ್ಯಾಕಾಂಡಗಳು ನಡೆದವು. ಇದನ್ನು ಶಾಂತಗೊಳಿಸಿದ ನಂತರ ಚುನಾವಣೆಗಳನ್ನು ಘೋಷಿಸಲಾಗಿದೆ. ಯು.ಎಸ್ ರಾಯಭಾರಿ ಕಚೇರಿ ದಮನಚಕ್ರದ ಈ ಅವಧಿಯನ್ನು 'ಪ್ರಜಾಪ್ರಭುತ್ವದ ಧೈರ್ಯಶಾಲಿ ರಕ್ಷಣೆ" ಮತ್ತು 'ಮುಕ್ತ ನ್ಯಾಯಯುತ ಚುನಾವಣೆಗಳಿಗೆ' ಜೆನಿನ್ ಆಡಳಿತದ 'ಬದ್ಧತೆ' ಎಂದು ಹೊಗಳಿದೆ.

ಚುನಾವಣೆಗೆ ಸಂಬಂಧಿಸಿದ ತಾಂತ್ರಿಕ ಕಾರ್ಯಕಲಾಪಗಳನ್ನು ನಡೆಸಲು, ಅಮೆರಿಕ–ಪರ ಇರುವ ಯು.ಎಸ್–ಏಡ್ ಮತ್ತು ಆರ್ಗನೈಸೇಶನ್ ಆಫ್ ಅಮೆರಿಕನ್ ಸ್ಟೇಟ್ಸ್ (ಒ.ಎ.ಎಸ್) ಗೆ ವಹಿಸಲಾಗಿದೆ. ಮೊರಲೆಸ್ ರ ಮೂವ್ಮೆಂಟ್ ಟುವರ್ಡ್ಸ್ ಸೋಷಿಯಲಿಸಂ (ಎಂ.ಎ.ಎಸ್) ಮತ್ತು ಪಕ್ಷದ ಪ್ರಮುಖ ವ್ಯಕ್ತಿಗಳ ವಿರುದ್ಧ ಕಿರುಕುಳ ಮತ್ತು ಬೆದರಿಕೆಗಳು, ಚುನಾವಣಾ ಪ್ರಕ್ರಿಯೆಯ ಮೇಲೆ ದುಷ್ಪರಿಣಾಮಗಳ ಸೂಚನೆಯನ್ನು ನೀಡಿವೆ.

ಅದೇನೇ ಇದ್ದರೂ, ಚುನಾವಣೆಗಳಲ್ಲಿ ಭಾಗವಹಿಸಲು ಎಂಎಎಸ್ ನಿರ್ಧರಿಸಿದೆ. ಈಗಾಗಲೇ ನಡೆದಿರುವ ಸಮೀಕ್ಷೆಗಳು, ದೇಶದಲ್ಲಿ ಎಂಎಎಸ್ ಸಾಕಷ್ಟು ಪ್ರಭಾವವನ್ನು ಹೊಂದಿರುವುದನ್ನು ಖಚಿತಪಡಿಸಿವೆ. ಎಂ.ಎ.ಎಸ್ ಈಗಾಗಲೇ ತನ್ನ ಅಭ್ಯರ್ಥಿಗಳನ್ನು ಘೋಷಿಸಿಕೊಂಡಿದೆ. ಲೂಯಿಸ್ ಆರ್ಸ್ ಕ್ಯಾಟಕೋರಾ ಮತ್ತು ಡೇವಿಡ್ ಚೊಕ್ವುವಾಂಕಾ ಅವರನ್ನು ಕ್ರಮವಾಗಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿಕೊಂಡಿದೆ. ಕ್ಯಾಟಕೋರಾ ರವರು, ಮೊರಲೆಸ್ ಅವರ ಆಡಳಿತದಲ್ಲಿ ಆರ್ಥಿಕ ಮಂತ್ರಿಯಾಗಿ ಸಾಕಷ್ಟು ಉತ್ತಮ ಕಾರ್ಯನಿರ್ವಹಿಸಿದ್ದಾರೆ. ಹಾಗೂ ಚೊಕ್ವುವಾಂಕಾ ಅವರು ವಿದೇಶಾಂಗ ಮಂತ್ರಿಯಾಗಿ ಸುದೀರ್ಘ ಅವಧಿಯಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಇವರಿಬ್ಬರನ್ನೂ ಜನವರಿ 19 ರಂದು ಬ್ಯೂನಸ್ ಐರಿಸ್ ನಲ್ಲಿ ನಡೆದ ಪಕ್ಷದ ನಾಯಕರ ಮತ್ತು ಸಾಮಾಜಿಕ ಚಳುವಳಿಗಳ ಪ್ರತಿನಿಧಿಗಳ ಆಯೋಗ ಆಯ್ಕೆ ಮಾಡಿತ್ತು. ಆನಂತರ ಕಳೆದ ವಾರವಷ್ಟೆ ಪ್ಯಾಕ್ಟೊ ಡಿ ಯುನಿಡಾಡ್ (ಎಂ.ಎ.ಎಸ್ ನ ಸಂಯೋಜಿತ ಸಾಮಾಜಿಕ ಚಳುವಳಿಗಳ ಏಕತಾ ಒಪ್ಪಂದ) ಇಬ್ಬರ ಹೆಸರನ್ನು ಅನುಮೋದಿಸಿತು.

ಕ್ಯಾಟಕೋರಾ ಮತ್ತು ಚೊಕ್ವುವಾಂಕಾ ಅಧ್ಯಕ್ಷೀಯ ಚುನಾವಣೆಗಳಲ್ಲಿ ಹಲವು ನಡು–ಬಲಪಂಥೀಯ ಮತ್ತು ಬಲಪಂಥೀಯ ಅಭ್ಯರ್ಥಿಗಳ ದಂಡನ್ನು ಎದುರಿಸಬೇಕಾಗುತ್ತದೆ. ಇವರೆಲ್ಲರೂ ಮೊರಲೆಸ್ ದೇಶಾಂತರ ಹೋಗುವಂತೆ ಮಾಡಿದ ನವೆಂಬರ್ ಕ್ಷಿಪ್ರಕ್ರಾಂತಿಯ ಮೊದಲಿನಿಂದಲೂ, ವಾಷಿಂಗ್ಟನ್ ಜೊತೆ ನೇರ ಮತ್ತು ಆಳವಾದ ಸಂಬಂಧ ಹೊಂದಿದವರಾಗಿದ್ದಾರೆ. ಇವರಲ್ಲಿ ನವ–ಉದಾರವಾದಿ ನಡುಪಂಥೀಯರಿಂದ ಹಿಡಿದು ಉಗ್ರ–ಬಲಪಂಥೀಯ ಸರ್ವಾಧಿಕಾರಿ ಧೋರಣೆಯವರ ವರೆಗಿನವರು ಇದ್ದಾರೆ. ಯು.ಎಸ್ ವಿದೇಶಾಂಗ ಸಚಿವಾಲಯ ಇವರೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿದೆ. ಇವರೆಲ್ಲರನ್ನೂ ಅಥವಾ ಇವರಲ್ಲಿ ಗೆಲ್ಲಬಹುದಾದ ಯಾರನ್ನಾದರೂ ಬೆಂಬಲಿಸುವ ಆಯ್ಕೆಯನ್ನು ಇಟ್ಟುಕೊಂಡಿದೆ.



ಈ ಸಂದರ್ಭದಲ್ಲಿ ಮುಂಬರುವ ಚುನಾವಣಾ ದೃಷ್ಟಿಕೋನದಿಂದ – ಎಂ.ಎ.ಎಸ್ ಅಭ್ಯರ್ಥಿಗಳ ಬಗ್ಗೆ, ಎಂ.ಎ.ಎಸ್ ರಾಜಕೀಯ, ಮೊರಲೆಸ್ ಅವಧಿಯ ಸರ್ಕಾರದ ದಾಖಲೆಗಳ ಮತ್ತು ಇಂದಿನ ದಮನಕಾರಿ ಸ್ಥಿತಿಯಲ್ಲಿ ಈ ಚುನಾವಣೆಯಲ್ಲಿ ಪಕ್ಷದ ಸಾಧ್ಯತೆಗಳ ಬಗ್ಗೆ – ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಎಂ.ಎ.ಎಸ್ ಒಂದು ಸಂಘಟನೆಯಾಗಿ, ಖಂಡಿತವಾಗಿಯೂ ಸಾಂಪ್ರದಾಯಿಕ ರಚನೆಗಳು ಮತ್ತು ರಾಜಕೀಯವನ್ನು ಹೊಂದಿರುವ ಪಕ್ಷವಲ್ಲ. ರಾಜಕೀಯದಲ್ಲಿ ಭಾಗವಹಿಸಲು ಪ್ರಾತಿನಿಧ್ಯ ಪಡೆಯಲು ಅವಕಾಶದಿಂದ ವಂಚಿತರಾಗಿರುವ ಪರ, ನಿರ್ದಿಷ್ಟವಾಗಿ ಸಂಘಟಿತ ಗ್ರಾಮೀಣ ರೈತರು ಮತ್ತು ಕೃಷಿಯಲ್ಲಿ ತೊಡಗಿರುವವರು ಹಾಗೂ ಬುಡಕಟ್ಟು ಜನರ ದನಿಯಾಗಿ ಮತ್ತು ಅವರ "ರಾಜಕೀಯ ಸಾಧನ" ದ ಅವಶ್ಯಕತೆಯ ಬಗ್ಗೆ ಚರ್ಚೆಗಳನ್ನು ನಡೆಸುತ್ತಾ ಬೆಳೆದು ಬಂದಿತ್ತು. ಅದುವರೆಗೆ ಮುಖ್ಯವಾಹಿನಿ ರಾಜಕೀಯ ನಗರಗಳ ಸಣ್ಣ ಗಣ್ಯರ ಗ್ಯಾಂಗುಗಳ ಕಪಿಮುಷ್ಟಿಯಲ್ಲಿ ಬಂಧಿತವಾಗಿತ್ತು. ಎಂಎಎಸ್ ಸಂಪೂರ್ಣವಾಗಿ ರೂಪುಗೊಳ್ಳುವ ಹೊತ್ತಿಗೆ ಇದು ನಗರದ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳ ಗುಂಪುಗಳೊಂದಿಗೆ ಮೈತ್ರಿ ಇರುವ ಪ್ರಮುಖ ಸಂಘಟಿತ ಸ್ಥಳೀಯ ಬುಡಕಟ್ಟು ಜನರ ಚಳವಳಿಯ ಒಕ್ಕೂಟಗಳ ಮೈತ್ರಿಕೂಟವಾಗಿ ಬೆಳೆಯಿತು. ನಗರದ ಈ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳ ಗುಂಪುಗಳು ಸ್ಥಳೀಯ ಬುಡಕಟ್ಟು ಜನರ ಚಳವಳಿಯ ಕುರಿತು ಅಸಡ್ಡೆ ಅಥವಾ ತಿರಸ್ಕಾರ ಹೊಂದಿದ್ದ ಸಾಂಪ್ರದಾಯಿಕ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳ ಧೋರಣೆ ಬಿಟ್ಟು ಅವರ ಜತೆ ಕೆಲಸ ಮಾಡಲು ಬಯಸಿದ್ದ ಗುಂಪುಗಳು.

ಕ್ಯಾಟಕೋರಾ ಮತ್ತು ಚೊಕ್ವುವಾಂಕಾ

ಈ ಇಬ್ಬರೂ ಮುಂಬರುವ ಅಧ್ಯಕ್ಷೀಯ ಚುನಾವಣೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅಭ್ಯರ್ಥಿಗಳು. ಪ್ರಮುಖವಾಗಿ ಇಬ್ಬರೂ ಎಂ.ಎ.ಎಸ್ ಪಕ್ಷದ ಎರಡು ಪ್ರಮುಖ ಧಾರೆಗಳಿಂದ ಬೆಳೆದು ಬಂದವರಾಗಿದ್ದಾರೆ. ಈ ಎರಡು ಸೈದ್ಧಾಂತಿಕ ಧಾರೆಗಳು ಸಂಪೂರ್ಣವಾಗಿ ವಿಭಿನ್ನವಾದ ಸಂಸ್ಕೃತಿಗಳು ಮತ್ತು ಅನುಭವಗಳಿಂದ ಹುಟ್ಟಿದವು. ಆದೇನೇ ಇದ್ದರೂ, ಈ ಎರಡೂ ಧಾರೆಗಳು 20 ವರ್ಷಗಳ ಕಾಲ ಪಕ್ಷದೊಳಗೆ ಸಹಬಾಳ್ವೆ ಮತ್ತು ಆಗ ಹೆಚ್ಚು ಈಗ ಕಡಿಮೆ ಸಂಘರ್ಷಗಳೊಂದಿಗೆ ಬೆಳೆದು ಬಂದವುಗಳಾಗಿವೆ.

'ಪೆಜಿನಾ ಸಿಯೆಟ್' ಪತ್ರಿಕೆಯು ಈ ಜೋಡಿಯು "ಸ್ಥಳೀಯತೆ ಮತ್ತು ಆರ್ಥಿಕ ಸ್ಥಿರತೆ" ಗಳನ್ನು ಪ್ರತಿನಿಧಿಸುತ್ತದೆ ಎಂದಿದೆ. ಏಕೆಂದರೆ, ಮೊರಲೆಸ್ ಆಡಳಿತದ ಜನಪ್ರಿಯ ಮಾಜಿ ಮಂತ್ರಿಗಳಾಗಿ, ಬೊಲಿವಿಯಾದ ಬದಲಾವಣೆಯ ಪ್ರಕ್ರಿಯೆಗೆ ಈ ಜೋಡಿ ಅಪಾರವಾದ ಸೇವೆ ಸಲ್ಲಿಸಿದೆ. ಅಧ್ಯಕ್ಷೀಯ ಅಭ್ಯರ್ಥಿ ಕ್ಯಾಟಕೋರಾ ಮೊರಲೆಸ್ ಸರಕಾರದ ಆರ್ಥಿಕ ಪವಾಡದ ಹಿಂದಿನ ಶಕ್ತಿಯಾಗಿದ್ದರು. ಈ ಅವಧಿಯಲ್ಲಿ ಬೊಲಿವಿಯಾದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಆಯಕಟ್ಟಿನ ಕೈಗಾರಿಕೆಗಳ ರಾಷ್ಟ್ರೀಕರಣವನ್ನು ಅನುಸರಿಸಿದ ಅವರ ನೀತಿ ಈ ಪವಾಡಕ್ಕೆ ಕಾರಣವಾಗಿತ್ತು. 2005ರಲ್ಲಿ ಮೊರಲೆಸ್ ಅಧಿಕಾರ ವಹಿಸಿಕೊಂಡಾಗ ಸಾಲದ ಸುಳಿಯಲ್ಲಿತ್ತು. 1985ರಿಂದ ಶೇ.27,000 ಹಣದುಬ್ಬರದ ವಾರ್ಷಿಕ ದರವನ್ನು ಕಂಡಿತ್ತು. ಸರಕಾರಿ ಸಿಬ್ಬಂದಿಗೆ ಸಂಬಳ ಕೊಡಲು ಮತ್ತು ಪ್ರಾಥಮಿಕ ಮೂಲಸೌಕರ್ಯ ನಡೆಸಲು ಸರಕಾರ ಹಣ ಪ್ರಿಂಟ್ ಮಾಡಬೇಕಿತ್ತು. ಆದರೆ ಕಳೆದ 15 ವರ್ಷಗಳ ಉತ್ತಮ ಆರ್ಥಿಕ ಬೆಳವಣಿಗೆಯ ನಂತರ ಆರ್ಥಿಕದ ಗಾತ್ರ ಮೂರು ಪಟ್ಟು ಆಗಿದೆ. ಬಡತನ ಶೇ. 60ರಿಂದ ಶೇ. 3.4ಕ್ಕೆ ಇಳಿದಿದೆ. ಮಧ್ಯಮ ವರ್ಗದ ಪಾಲು ಜನಸಂಖ್ಯೆಯಲ್ಲಿ ಶೇ. 35ರಿಂದ ಶೇ. 60ಕ್ಕೇರಿದೆ. ಸರಾಸರಿ ತಲಾ ಜಿಡಿಪಿ ಏರಿಕೆಯ ದರ 1994–2005 ಅವಧಿಯಲ್ಲಿ ಶೇ. 0.9 ಇದ್ದಿದ್ದು, 2006–2014 ಅವಧಿಯಲ್ಲಿ ಶೇ. 3 ಕ್ಕೇರಿದೆ.

ಉಪಾಧ್ಯಕ್ಷ ಚೊಕ್ವುವಾಂಕಾ ಅವರು ರೂಪಿಸಿದ ಸಾಮ್ರಾಜ್ಯಶಾಹಿ–ವಿರೋಧಿ ವಿದೇಶ ನೀತಿ ಬೊಲಿವಿಯದ ಪ್ರತಿಷ್ಠೆಯನ್ನು ಲ್ಯಾಟಿನ್ ಅಮೆರಿಕ ಮತ್ತು ಜಗತ್ತಿನಲ್ಲಿ ಹೆಚ್ಚಿಸಿತ್ತು. ಬೊಲಿವಿಯ ಕ್ಯೂಬಾ ಮತ್ತು ವೆನೆಜುವೇಲಾ ದೊಂದಿಗೆ ಲ್ಯಾಟಿನ್ ಅಮೆರಿಕದ ಎಡಪಂಥೀಯ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ನವ–ಉದಾರವಾದಿ ಶಕ್ತಿಗಳ ರಂಗದ ನಾಯಕ–ತ್ರಿವಳಿಯಾಗಿ ಹೊಮ್ಮಿತ್ತು.

ಈ ಇಬ್ಬರನ್ನು ಅಭ್ಯರ್ಥಿಯಾಗಿ ಘೋಷಿಸಿದ 24 ಗಂಟೆಗಳ ಒಳಗೆ, ಜೆನಿನ್ ಆಡಳಿತವು ಇವರ ವಿರುದ್ಧ ನಕಲಿ ಆರೋಪಗಳನ್ನು ರೂಪಿಸಿ ಕಿರುಕುಳ ಕೊಡಲು ಆರಂಭಿಸಿ, ಬೆದರಿಕೆ ಒಡ್ಡಲಾರಂಭಿಸಿದೆ.

ಕ್ಯಾಟಕೋರಾ ಲಾ ಪಾಜ್ ನಗರದಲ್ಲಿ ಹುಟ್ಟಿ ಬೆಳೆದರು. ಅರ್ಥಶಾಸ್ತ್ರವನ್ನು ಅಧ್ಯಯನ ಮಾಡಿದವರು. ಅವರು ಬ್ರಿಟನಿನ ವಾರ್ವಿಕ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು, ಬೊಲಿವಿಯದಲ್ಲೇ ಪಿಎಚ್.ಡಿ ಪದವಿಯನ್ನು ಪಡೆದವರು. ಬೊಲಿವಿಯಾ ದ ಸೆಂಟ್ರಲ್ ಬ್ಯಾಂಕ್ ನಲ್ಲಿ ಕೆಲಸ. 2000ದ ಆರಂಭದಲ್ಲಿ ಇವರ ಮೊರಲೆಸ್ ಯೂನಿಯನ್ ನಾಯಕರಾಗಿದ್ದಾಗ, ಸಾಮಾಜಿಕ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ವರ್ಷಗಳಲ್ಲಿ ಅವರು ಲಾ ಪಾಜ್ ನಲ್ಲಿ ಮಾರ್ಸೆಲೊ ಕ್ವಿರೊಗಾ ಅವರ ಸಮಾಜವಾದಿ ಪಕ್ಷದ ಸದಸ್ಯರಿಂದ ಸ್ಥಾಪಿಸಲ್ಪಟ್ಟಿದ್ದ, 'ಲಾಸ್ ಡ್ಯುಂಡೆಸ್' ಎಂಬ ಮಾರ್ಕ್ಸ್‌ವಾದಿ ಅಧ್ಯಯನ ಕೂಟವನ್ನು ನಡೆಸುತ್ತಿದ್ದರು. ಸೋವಿಯತ್ ಒಕ್ಕೂಟದ ಪತನದ ನಂತರ ಎಡಪಂಥೀಯ ಭವಿಷ್ಯ ಹೇಗಿರುತ್ತದೆ ಮತ್ತು ಜಾಗತೀಕರಣದ ಹೊಸ ಯುಗದಲ್ಲಿ ಸಮಾಜವಾದದ ಪರಿವರ್ತನೆ ಹೇಗಿರುತ್ತದೆ ಎಂಬದನ್ನು ಗ್ರಹಿಸುವ ಹೊಸ ಬೌದ್ಧಿಕ ವಲಯಗಳ ಜಾಲದ ಭಾಗವಾಗಿತ್ತು 'ಲಾಸ್ ಡ್ಯುಂಡೆಸ್'.

ಸೋವಿಯೆಟ್ ಪತನದ ನಂತರ, ನವ–ಉದಾರವಾದ ಭಾಗವಾಗಿ 90 ರ ದಶಕದಲ್ಲಿ ಜಾಗತೀಕರಣ ತೀವ್ರವಾದಾಗ, 'ಬಂಡವಾಳಶಾಹಿಯೇ ಸಾಮಾಜಿಕ ಬೆಳವಣಿಗೆಯ ಕೊನೆಯ ಹಂತ' 'ಸಮಾಜವಾದಕ್ಕೆ ಭವಿಷ್ಯವಿಲ್ಲ' ಎಂದು ಫುಕುಯಾಮಾ ಮುಂತಾದವರು ವಾದಿಸುತ್ತಿದ್ದರು. 'ಲಾಸ್ ಡ್ಯುಂಡೆಸ್'ನಲ್ಲಿ ನವ–ಉದಾರವಾದ ನಂತರ ಬರಬಹುದಾದ ಪರಿಸ್ಥಿತಿಯಲ್ಲಿ ಎಡಫಂಥೀಯ ಕಾರ್ಯಯೋಜನೆ ಮತ್ತು ಕಾರ್ಯತಂತ್ರ ಹೇಗಿರಬೇಕು ಎಂಬ ಕುರಿತು ಸಂಶೋದನೆ ನಡೆಸಲಾಯಿತು. ಅವರು ಹಿಂದಿನ ಉಪಾಧ್ಯಕ್ಷರಾಗಿದ್ದ ಅಲ್ವಾರೊ ಗಾರ್ಸಿಯ ಅವರ ಲಿನೆರಾ ಎಂಬ ಗುಂಪಿನೊಂದಿಗೆ ಸೇರಿಕೊಂಡು ಜಾರಿಗೊಳಿಸಬಹುದಾದ ಆರ್ಥಿಕ ಮಾದರಿಗಳ ಮೇಲೆ ಕೆಲಸ ಮಾಡಿದರು. ಇದನ್ನು ಎಂಎಎಸ್ ನ ಯೋಜನೆಗಳಲ್ಲಿ ಪ್ರತಿಪಾದಿಸಲಾಗಿದೆ. ತಾನು ಆರ್ಥಿಕ ಮಂತ್ರಿಯಾಗಿದ್ದಾಗ ಇವುಗಳನ್ನು ಜಾರಿಗೊಳಿಸಲಾಯಿತು ಎಂದು ಅವರು ಹೆಮ್ಮೆ ಪಡುತ್ತಾರೆ. ಅವರು ನಗರ ಬಿಳಿಯ ಮಧ್ಯಮ ವರ್ಗದಿಂದ ಬಂದಿದ್ದು ಅವರನ್ನು ಅಧ್ಯಕ್ಷರ ಅರ್ಭರ್ಥಿಯಾಗಿ ಮಾಡಿದ್ದು ಸ್ಥಳೀಯ ಬುಡಕಟ್ಟು ವಿಭಾಗಗಳಲ್ಲಿ ಅಸಮಾಧಾನ ಉಂಟು ಮಾಡಿದೆ. ಆದರೆ ಮೊರಲೆಸ್ ಎಂ.ಎ.ಎಸ್, ಸ್ಥಳೀಯ ಬುಡಕಟ್ಟು ಜನರ ಮತ್ತು 'ಒಳ್ಳೆಯ ಬಿಳಿಯ'ರ ಒಕ್ಕೂಟ ಎಂದು ಮರೆಯಬಾರದು ಎಂದು ಅವರ ಆಯ್ಕೆಯನ್ನು ಸಮರ್ಥಿಸಿದ್ದಾರೆ.

ಉಪಾಧ್ಯಕ್ಷ ಅಭ್ಯರ್ಥಿ ಚೊಕ್ವುವಾಂಕಾ ಸ್ವತಃ ಸ್ಥಳೀಯ ಬುಡಕಟ್ಟಿನವರು ಮತ್ತು ದೇಶಾದ್ಯಂತ ಸ್ಥಳೀಯ ಚಳುವಳಿಗಳ ಅಗಾಧವಾದ ಅನುಭವ ಮತ್ತು ಒಲವು ಹೊಂದಿದವರು. ಇವರು ಎಂಎಎಸ್ ನ ಪ್ರಾಥಮಿಕ ಸಿದ್ಧಾಂತಿ. ಅವರು ಕ್ಯೂಬಾದಲ್ಲಿ ರಾಜಕೀಯ ಕಾರ್ಯಕರ್ತರ ತರಬೇತಿಗೆ ಆಯ್ಕೆಯಾಗಿ ಅಲ್ಲಿ ತರಬೇತಿ ಪಡೆದವರು. ವಿದೇಶಾಂಗ ಸಚಿವರಾಗಿ ಅವರಿಗೆ ದುಡಿದ ಅನುಭವವಿದೆ. 'ಸುಮಾಕ್ ಕಮಾನಾ' ಎಂಬ ಸ್ಥಳೀಯ ತತ್ವಗಳಾದ, ಪರಸ್ಪರ ಸಾಮೂಹಿಕತೆ, ತಾಯಿ ಪ್ರಕೃತಿಯೊಂದಿಗೆ ಸಮತೋಲನ, ಸ್ಥಳೀಯ ಸಂಗೀತ, ಕಲೆ, ನೃತ್ಯ ಮತ್ತು ಜೀವನ ರೂಪಗಳ ಚೇತರಿಕೆ, ಬೊಲೊವಿಯನ್ ಜಾನಪದವನ್ನು, ಒಂದು ಜನಾಂಗೀಯ ಭಾಗವಾಗಿರಿಸದೆ, ಒಂದು ತತ್ವಶಾಸ್ತ್ರವನ್ನಾಗಿ ರೂಪಿಸುವಲ್ಲಿ ಇವರ ಕೊಡುಗೆ ಅಪಾರ. ಅವರಿಗೆ ಪಕ್ಷ ಮತ್ತು ಸಾಮಾಜಿಕ ಚಳುವಳಿಯಲ್ಲಿ ಅಪಾರವಾದ ಬೆಂಬಲವಿದ್ದು, ಅವರನ್ನು ಅಧ್ಯಕ್ಷೀಯ ಅಭ್ಯರ್ಥಿಯಾಗಿ ಆಯ್ಕೆ ಮಾಡಬೇಕೆಂದು ವ್ಯಾಪಕ ಅಭಿಪ್ರಾಯ ವ್ಯಕ್ತವಾಗಿತ್ತು. ಚೊಕ್ವುವಾಂಕಾ ಅವರು ಸ್ವತಃ, ಕ್ಯಾಟಕೋರಾ ಹೆಚ್ಚು ಸಮರ್ಥ ಅಭ್ಯರ್ಥಿ ಮತ್ತು ಬಲಪಂಥೀಯರನ್ನು ಐಕ್ಯತೆಯಿಂದ ಎದುರಿಸಬೇಕು ಎಂದು ಬೆಂಬಲಿಸಿ ಸಾರ್ವಜನಿಕವಾಗಿ ಹೇಳಿಕೆ ನೀಡಿ ಬೆಂಬಲಿಗರನ್ನು ಸಮಾಧಾನ ಪಡಿಸಿದ್ದಾರೆ.

ಅದೇನೇ ಇರಲಿ, ಈ ಜೋಡಿ ಎಂ.ಎ.ಎಸ್ ಅನ್ನು ಇಂದಿನ ಉನ್ನತ ಸ್ಥಿತಿಗೆ ತಂದ ಎರಡು ಸೈದ್ಧಾಂತಿಕ ಧಾರೆಗಳನ್ನು ಪ್ರತಿನಿಧಿಸುತ್ತಾರೆ ಎಂಬುದು ನಿರ್ವಿವಾದ. ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ನಡೆದರೆ ಅವರು ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲ್ಲುವ ಎಲ್ಲ ಸಾಧ್ಯತೆಗಳಿವೆ. ಅದರಲ್ಲೂ ಅವರು ಒಂದಕ್ಕಿಂತ ಹೆಚ್ಚು ನಡು–ಬಲಪಂಥೀಯ ಅಭ್ಯರ್ಥಿಗಳನ್ನು ಎದುರಿಸಲಿರುವುದರಿಂದ ಇಂತಹ ಸಾಧ್ಯತೆ ಹೆಚ್ಚಾಗಿದೆ. ಆದರೆ ಈಗಿನ ಸರಕಾರ ಮತ್ತು ಯು.ಎಸ್ ವಿದೇಶಾಂಗ ಸಚಿವಾಲಯ ಎಲ್ಲ ಸಾಧ್ಯವಿರುವ ಬೆದರಿಕೆ, ದಾಳಿ ಮುಂತಾದ ಕೀಳು ತಂತ್ರಗಳನ್ನು ಬಳಸಲಿವೆ. ಇವರಿಬ್ಬರನ್ನು ಚುನಾವಣೆಯ ಮೊದಲೇ ಹುಸಿ ಆಪಾದನೆಗಳ ಮೇಲೆ ಜೈಲಿಗೆ ಹಾಕಿದರೂ ಆಶ್ಚರ್ಯವಿಲ್ಲ.

JANASHAKTHI KANNADA VARA PATRIKE February 24-March 1, 2020 Price: Rs. 10/- Date of Publication: 21 February 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ನಾಝಿ ವಿರುದ್ಧ ಹೋರಾಟ ಮಾಡಿದ 'ನೂರ್‌ಇನಾಯತ್‌ಖಾನ್' ಪುಸ್ತಕ ಬಿಡುಗಡೆ



ಕೆ. ನೀಲಾ

ಫೆಬ್ರವರಿ 17, 2020 ರಂದು ನಗರದ 'ಗುಲ್ಷನ್ ಬಾಗ್' ಧರಣಿ ಸ್ಥಳದಲ್ಲಿ ಚಂದ್ರಶೇಖರ್ ಮಂಡೆಕೋಲು ಅವರು ರಚಿಸಿದ ನಾಝಿ ವಿರುದ್ಧ ಹೋರಾಟ ಮಾಡಿದ ನೂರ್ ಇನಾಯತ್ ಖಾನ್ ಜೀವನ ಚರಿತ್ರೆ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಪುಸ್ತಕವನ್ನು ಹಿರಿಯ ವಕೀಲರಾದ ಹಾಗೂ ಕೆ ನೀಲಾ ಇವರು ಬಿಡುಗಡೆ ಮಾಡಿದರು. ಸಭೆಯಲ್ಲಿ ಅಖ್ತರ್ ಪರವಿನ್ ನಾಡಗೌಡ, ನುಜ್ಜತ್ ಬೇಗಂ ಮತ್ತು ಶಹನಾಜ್ ಅಖ್ತರ್ ಇವರು ಮಾತನಾಡಿದರು. ಚಂದಮ್ಮ, ಲವಿತ್ರ, ಅಮೀನಾ ಬೇಗಂ ಮುಂತಾದವರು ಸಭೆಯಲ್ಲಿ ಹಾಜರಿದ್ದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಕೆ ನೀಲಾ, 'ನೂರ್ ಇನಾಯತ್ ಖಾನ್‌ಳ ಮುತ್ತಜ್ಜ ಮೌಲಾಬಕ್ಷ್ (1833–1896) ಮದುವೆಯಾಗಿದ್ದು ಮೈಸೂರಿನ ಟಿಪ್ಪು ಸುಲ್ತಾನನ ಮಗನ ಮಗಳೊಂದಿಗೆ. 1914 ಜನವರಿ 1 ರಂದು ರಷ್ಯಾದಲ್ಲಿ ಜನಿಸಿದವಳು ನೂರ್–ಉನ್–ನೀಸಾ. ಇವಳ ಹೆಸರಿನ ಅರ್ಥವೇನೆಂದರೆ 'ಸ್ತ್ರೀ ಕುಲದ ಬೆಳಕು' ಎಂದು. ಮುಂದಕ್ಕೆ ಇವಳು ಹೆಸರಿಗೆ ತಕ್ಕಂತೆ ಬದುಕಿದವಳು. ಸೂಫಿ ಮನೆತನದ ಈ ಕುಡಿಯು ಟಿಪ್ಪು ಸುಲ್ತಾನ ದೇಶದ ಸ್ವಾತಂತ್ರ್ಯಕ್ಕಾಗಿ ಮಕ್ಕಳನ್ನೇ ಒತ್ತೆಯಿಟ್ಟು ಕೊನೆಯುಸಿರಿನವರೆಗೂ ಹೋರಾಡಿರುವುದನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ದಳು. ಮೌಲಾಭಕ್ಷ್, ಇನಾಯತ್ ಖಾನ್ ಮತ್ತು ನೂರ್ ಅವರ ಬದುಕು ಸಾಂಪ್ರದಾಯಿಕ ಧಾರ್ಮಿಕ ಸಮಾಜದ ಗಡಿದಾಟಿದ ಮಾನವತೆಯ ಅಮೋಘ ಸಂಗಮವಾಗಿದೆ. ನೂರ್ ಮೂಲವು ಭಾರತದ್ದು. ಅದರಲ್ಲೂ ಕರ್ನಾಟಕದ್ದು. ತಾಯಿ ಅಮೇರಿಕನ್ನಳು. ಹುಟ್ಟಿದ್ದು ರಷ್ಯಾದಲ್ಲಿ. ಓದಿ ಬೆಳೆದಿದ್ದು ಪ್ಯಾರಿಸ್ ನಲ್ಲಿ. ಜೀವ ಪಣಕ್ಕಿಟ್ಟು ಹೋರಾಡಿದ್ದು ಜರ್ಮನ್‌ನ ಫ್ಯಾಸಿಜಂನ ವಿರುದ್ಧ. ಬ್ರಿಟನ್‌ನ ಗೂಢಾಚಾರಳಾಗಿ ಕ್ರೂರ ನಾಜಿಗಳ ನಡುವೆ ಕೆಲಸ ಮಾಡುತ್ತಾಳೆ. ಅಂದಿಗೆ ಜರ್ಮನ್‌ನ ಹಿಟ್ಲರ್ ಶಾಹಿಯು ಯಾತನಾ ಶಿಬಿರದಲ್ಲಿ ಲಕ್ಷಗಟ್ಟಲೆ ಜನರ ಮಾರಣ ಹೋಮ ನಡೆಯುತ್ತಿತ್ತು. ಮಾನವ ಜನಾಂಗವೇ ತಲ್ಲಣಗೊಳ್ಳುವಂತಹ ನಾಜೀ ಕಪಿಮುಷ್ಠಿಯಲ್ಲಿ ಜಗತ್ತು ನರಳುತ್ತಿತ್ತು. ಅಂತಹ ಹೊತ್ತಿನಲ್ಲಿ ನೂರ್‌ಳನ್ನು ಸೆರೆ ಹಿಡಿಯುತ್ತಾರೆ. ಮತ್ತು ಡಕಾವ್ನೊದ ಯಾತನಾ ಶಿಬಿರದಲ್ಲಿ 1944 ಸೆಪ್ಟೆಂಬರ್ 11 ರಂದು ಅತ್ಯಂತ ಕ್ರೂರವಾಗಿ ಅವಳನ್ನು ಹಿಂಸಿಸಿ ಅತ್ಯಾಚಾರಗೈದು ಕಡೆಗೆ ಹಣೆಗೆ ಗುಂಡಿಟ್ಟು ಸಾಯಿಸಲಾಗುತದೆ. ಆ ಹೊತ್ತಿನಲ್ಲಿ ನೂರ್ ಬಾಯಿಯಿಂದ ಹೊರಟ ಏಕೈಕ ಶಬ್ದವೆಂದರೆ ಅದು 'ಲಿಬರ್ಟಿ'. ಎದೆಝಲ್ಲೆನ್ನುವಂತಹ ಕ್ರೂರ ಧಾಳಿಯ ನಂತರವೂ ನೂರ್ 'ಲಿಬರ್ಟಿ'ಯನ್ನೇ ಧ್ಯಾನಿಸುತ್ತಾಳೆ. ಟಿಪ್ಪು ಸುಲ್ತಾನನ ಕುಡಿಯು ಜಗದ ಕಂಟಕವಾಗಿದ್ದ ನಾಜೀ ವಿರುದ್ಧ ಹೋರಾಡಿ ಸಾವಿನಲ್ಲೂ ಸ್ವಾತಂತ್ರ್ಯದ ಹಂಬಲವೇ ವ್ಯಕ್ತಿಸುವುದು ಈ ಹೊತ್ತಿಗೆ ಭಾರತಕ್ಕೆ ಆದರ್ಶಪ್ರಾಯವಾದ ಇತಿಹಾಸವಾಗಿದೆ. ನಾಜೀ ವಿರುದ್ಧ ಹೋರಾಡಿ ಗೆದ್ದು ಬಂದು ಭಾರತದ ವಿಮೋಚನೆಗಾಗಿ ಹೋರಾಡುವ ಕನಸು ಹೊಂದಿದ್ದಳು. ಸೂಫಿ ಸಂತರ ಸಂದೇಶ ಆಲಿಸಿದ, ವೀಣೆ ಹಿಡಿದು ಶಂಕರಾಭರಣ ನುಡಿಸಿದವಳೂ, ವೇದಾಂತ ಕುರಾನ್, ಹದೀಸ್, ಬೈಬಲ ಹೀಗೆ ವಿಶ್ವದ ದಾರ್ಶನಿಕ ಪರಂಪರೆಯನ್ನೆಲ್ಲಾ ಓದಿಕೊಂಡವಳು, ಪರಮಶಾಂತ ಬುದ್ಧನ ಜಾತಕ ಕತೆಗಳನ್ನು ಬರೆದವಳು, ಮಕ್ಕಳಿಗೆಲ್ಲಾ ಕತೆ ಹೇಳುತ್ತಿದ್ದವಳು ಭಾರತಕ್ಕೆ ಸ್ವಾತಂತ್ರ್ಯ ಸಿಗಲೆಂದು ಬಯಸಿದವಳು ನಾಜಿಗಳ ಕ್ರೌರ್ಯಕ್ಕೆ ಬಲಿಯಾಗಿ ಹೋಗುತ್ತಾಳೆ. ಲಂಡನ್ನಲ್ಲಿ ನೂರ್ ಪ್ರತಿಮೆ ಇದೆ. ಅವಳ ಹೆಸರಿಗೆ ಅಂಚೆ ಚೀಟಿ ಬಂದಿದೆ. ಅನೇಕ ಮರಣೋತ್ತರ ಪುರಸ್ಕಾರಗಳು ಸಂದಿವೆ. ಆದರೆ ಫ್ಯಾಸಿಜಂನ ನಾಜೀ ಕ್ರೌರ್ಯದ ವಿರುದ್ಧ ಸೆಣಸಿದ ಮತ್ತು ಅತ್ಯಂತ ಯಾತನಾದಾಯಕವಾದ ಹಿಂಸೆ ನೋವು ಅನುಭವಿಸಿ ಸಾಯುವಾಗಲೂ ಲಿಬರ್ಟಿ ಕನಸಿದ ಈ ನೆಲದ ಮಗಳು ನಮಗೆ ಅಪರಿಚಿತಳಾಗಿ ಉಳಿದಿದ್ದಾಳೆ. ಆದರೆ ಈ ಹೊತ್ತು ಎಲ್ಲರೆದೆಯಲ್ಲಿ ಈ ನೂರ್ ಇನಾಯತ್ ಖಾನ್ ಎಂಬ ಈ ಮಗಳ ಹೋರಾಟ ಕಿಚ್ಚು, ಸ್ವಾತಂತ್ರ್ಯದ ಹಂಬಲ, ಜಗದಗಲ ಕಣ್ಣೋಟದ ಮಾನವೀಯ ತುಡಿತ ಗುರಿ ನಮಗೆ ಬೇಕಿದೆ. ಈ ಪುಸ್ತಕ ಬರೆದು ನಮ್ಮದೇ ಮಣ್ಣ ಮಗಳನ್ನು ಪರಿಚಯಿಸಿದ ಚಂದ್ರಶೇಖರ ಮಂಡೆಕೋಲು ಅವರಿಗೆ ನಾವು ಋಣಿ' ಎಂದು ಹೇಳಿದರು.



'ಅಖ್ತರ್ ಪರವಿನ್ ನಾಡಗೌಡ ಇವರು ಮಾತನಾಡಿ 'ಈ ಕೃತಿಯು ಎಲ್ಲ ಭಾಷೆಗಳಲ್ಲಿ ದೊರೆಯುವಂತಾಗಲಿ. ಇಂದು ಫ್ಯಾಸಿಸ್ಟ್ ಸ್ವರೂಪದ ತಾನಾಶಾಹಿಯು ಎಲ್ಲೆಡೆ ಹಬ್ಬುತ್ತಿರುವಾಗ ನಮ್ಮದೇ ಮಗಳ ವೀರಗಾಥೆಯು ಮಾದರಿಯಾದದ್ದು. ಪುಸ್ತಕ ಬರೆದು ಪ್ರಕಟಿಸಿದವರಿಗೆ ಧನ್ಯವಾದಗಳು' ಎಂದು ಹೇಳಿದರು.

ಪ್ರತಿರೋಧದ ಕಥನಗಳು

ಅಖಿಲ ವಿದ್ಯಾಸಂದ್ರ
ಸಂಚಾಲಕರು,, ಕುಗ್ಗುತ್ತಿರುವ ಪ್ರಜಾಸತ್ತಾತ್ಮಕ ಆವರಣ ಕುರಿತು ನಾಗರಿಕ ಆಯೋಗ

ಫೆ. 15 ರಂದು ಎಸ್.ಎಫ್.ಐ 15ನೇ ರಾಜ್ಯ ಸಮ್ಮೇಳನದಲ್ಲಿ ಬಿಡುಗಡೆಯಾದ 'ಕ್ಯಾಂಪಸ್ ಕಥನಗಳು' ಪುಸ್ತಕದ ಮುಮ್ಮುಡಿಯ ಆಯ್ದ ಭಾಗಗಳು ಮತ್ತು ಪುಸ್ತಕದ ರಕ್ಷಾಪುಟದ ಚಿತ್ರ.

ಎಲ್ಲಾ ದೇಶಗಳಲ್ಲೂ ಅದರ ಸಂಕಷ್ಟದ ಕಾಲಗಳಲ್ಲಿ ಸಂಕ್ರಾಂತಿಯಾಗುವುದು ಬಹುತೇಕ ಅಲ್ಲಿನ ಯುವ ಜನತೆಯಿಂದಲೇ. ಅಂತಹ ಯುವ ಜನತೆಯನ್ನು ಸಶಕ್ತ ಹಾಗೂ ಸುಶಿಕ್ಷಿತರನ್ನಾಗಿಸುವುದು ಪ್ರತಿಯೊಂದು ಸಮಾಜದ ಆದ್ಯ ಕರ್ತವ್ಯ. ಇದರಲ್ಲಿ ಜನ್ಮ ನೀಡಿ ಪೊರೆದು, ಪೋಷಿಸುವ ತಾಯಿ, ತಂದೆ ಮತ್ತು ಕುಟುಂಬದ ಜವಾಬ್ದಾರಿ ಶೇ.50 ಆದರೆ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ ಶೇ.50 ಇರುತ್ತದೆ. ಈ ಎರಡೂ ಕಡೆ ದೊರೆಯುವ ಒಳ್ಳೆಯ ಜ್ಞಾನ ಮತ್ತು ಅನುಭವಗಳಿಂದ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುವ ಮಗು ದೇಶಕ್ಕೆ ಒಂದು ಆಸ್ತಿಯಾಗಿ ಪರಿಣಮಿಸುತ್ತದೆ. ತನ್ನ ಸಮಾಜವನ್ನು ಆರೋಗ್ಯಕರವಾಗಿ ಮುನ್ನಡೆಸುವಲ್ಲಿ ತೊಡಗಿಕೊಳ್ಳುತ್ತದೆ. ಈ ಎರಡೂ ಸಂಸ್ಥೆಗಳಲ್ಲಿ ಯಾವುದೇ ಕಾರಣಗಳಿಂದ ನಿರ್ಲಕ್ಷ್ಯಕ್ಕೀಡಾದ ಮಗು ಸಮಾಜಘಾತುಕವಾಗಿ ಪರಿಣಮಿಸಬಹುದು. ಅಂತಹ ಎರಡೂ ಉದಾಹರಣೆಗಳು ನಮ್ಮ ಮುಂದಿವೆ.

ಇಂದಿನ ದಿನಮಾನದಲ್ಲಿ ನಮ್ಮ ದೇಶದ ಅನೇಕ ಉನ್ನತ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಮೇಲೆ ಅನೇಕ ಹಲ್ಲೆಗಳಾಗುತ್ತಿವೆ. ಅದರಲ್ಲೂ ಮುಖ್ಯವಾಗಿ ಹಿಂದುಳಿದ ಸಮುದಾಯದ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಮೇಲೆ ಹಾಗೂ ಅವರ ಸಂಘಟನೆಗಳ ಮೇಲೆ ನಡೆದಿರುವ, ನಡೆಯುತ್ತಿರುವ ವ್ಯವಸ್ಥಿತ ಸಂಚಿನ ಹಲ್ಲೆಗಳ ಪರಿಣಾಮವಾಗಿ ರೋಹಿತ್ ವೇಮುಲನನ್ನು ಈ ದೇಶ ಕಳೆದುಕೊಂಡಿತು. ಅದು ಒಂದು ಹಠಾತ್ ನೋವನ್ನು ಎಲ್ಲರೆದೆಯಲ್ಲಿ ಹರಿಸಿತೇ ವಿನಹ ಭಯವನ್ನಲ್ಲ. ಯುವಜನತೆ ಪುಟಿದೆದ್ದು ನಿಂತದ್ದನ್ನು ನಾವಿಂದು ಕಾಣುತ್ತಿದ್ದೇವೆ. ದೆಹಲಿ, ಆಂಧ್ರ, ತೆಲಂಗಾಣ, ಇತ್ಯಾದಿ ರಾಜ್ಯಗಳ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ನಡೆದ ಆಡಳಿತ ಮಂಡಳಿಯ ಬೆಂಬಲಿತ ಮತ್ತು ಆರಕ್ಷಕರ ಹಲ್ಲೆಗಳು ಹಲವು.

ಕರ್ನಾಟಕದಲ್ಲಿ ಆ ಮಟ್ಟಕ್ಕೆ ಅಲ್ಲದಿದ್ದರೂ, ವಿಶ್ವವಿದ್ಯಾಲಯಗಳ ಪಿಎಚ್‌ಡಿ ಮಾರ್ಗದರ್ಶಕರು ತಮ್ಮ ವಿದ್ಯಾರ್ಥಿನಿಯರ ಮೇಲೆ ನಡೆಸಿದ ಲೈಂಗಿಕ ಕಿರುಕುಳಗಳು ಕೆಲವು ವಿದ್ಯಾರ್ಥಿನಿಯರ ಪ್ರಚೋದಿತ ಆತ್ಮಹತ್ಯೆಯಲ್ಲಿ ಕೊನೆಗೊಂಡಿತು. ಅದು ನರ್ಸಿಂಗ್ – para medical– ಆಗಿರಬಹುದು ಅಥವಾ ಸಂಶೋಧನಾ ವಿದ್ಯಾರ್ಥಿಯಾಗಿರಬಹುದು. ಹಿಂದುಳಿದ ಸಮುದಾಯಗಳ ವಿದ್ಯಾರ್ಥಿಗಳ ವಿರುದ್ಧ ನಡೆಸಿದ ಅಸೂಯೆಯ ಸಂಚುಗಳು ಆ ಮಕ್ಕಳ ಮುಂದಿನ ವಿದ್ಯಾಭ್ಯಾಸ ಕುಂಠಿತವಾಗಲು, ವಿಳಂಬವಾಗಲು ಕಾರಣವಾಯಿತು. ಕಳೆದ ದಶಕದಲ್ಲಿ ಇದ್ದಕ್ಕಿದ್ದಂತೆ ಆರಂಭವಾದ ವಿದ್ಯಾರ್ಥಿಗಳ ವಸ್ತ್ರಸಂಹಿತೆ ಹಾಗೂ 'ಸಂಸ್ಕಾರ' ಹೇರಿಕೆ ಅನೇಕ ಸ್ಥಳಗಳಲ್ಲಿ ಕೋಮುಸೌಹಾರ್ದತೆಗೆ ಧಕ್ಕೆ ತಂದಿತು. ವಿದ್ಯಾರ್ಥಿನಿಯರ ಮೇಲೆ ಎಲ್ಲೆಂದರಲ್ಲಿ (ಬಸ್ಸು, ಉದ್ಯಾನವನ, ಶಾಲಾ–ಕಾಲೇಜಿನ ಕ್ಯಾಂಪಸ್‌ಗಳು, ರೆಸಾರ್ಟ್‌ಗಳು, ಮನೆಯ ಹತ್ತಿರ, ಬೀದಿಗಳಲ್ಲಿ...) ಹಿಂದೆಂದೂ ನಡೆಯದ ರೀತಿಯಲ್ಲಿ ಹಲ್ಲೆಗಳು ನಡೆದವು. ಅದಕ್ಕೆ ಆ ಮಕ್ಕಳು ಹಾಗೂ ಪೋಷಕರಿಬ್ಬರೂ ಹೆದರಿಬಿಟ್ಟರು.

ಎಷ್ಟೋ ಎಫ್‌ಐಆರ್‌ಗಳು ದಾಖಲಾಗಲಿಲ್ಲ; ದಾವೆಗಳೂ ನಡೆಯಲಿಲ್ಲ. ಬೆಂಗಳೂರು, ಮೈಸೂರು, ಹಾಸನ ಮತ್ತು ಮಂಗಳೂರುಗಳಲ್ಲಿ ಈ ಸವಾಲುಗಳು ಹೆಚ್ಚಾಗಿಯೂ ಶಿವಮೊಗ್ಗ ಹಾಗೂ ಧಾರವಾಡಗಳಲ್ಲಿ ಸ್ವಲ್ಪ ಮಟ್ಟಿಗೂ ಕಂಡುಬಂದವು. ಈ ವಸ್ತ್ರ ಸಂಹಿತೆಯ ಭೂತ ಬರಿಯ ಮಕ್ಕಳನ್ನೇ

ಪುಟ 10 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**